ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಪ್ರತಿನಿಧೀಕರಣ

(ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಂತಿಮ ಸಾರಲೇಖ)

ಸಂಶೋಧಕರು

ಹೇಮಾವತಿ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ

ಮಾರ್ಗದರ್ಶಕರು

ಡಾ. ನಾಗಪ್ಪ ಗೌಡ ಆರ್.

ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ

೨೦೨೪

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಪ್ರತಿನಿಧೀಕರಣ

ಪರಿವಿಡಿ

ಪ್ರಸ್ತಾವನೆ ೭

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೧೧

ಅಧ್ಯಯನದ ಸ್ವರೂಪ ೧೬

ಅಧ್ಯಯನದ ವೈಧಾನಿಕತೆ ೧೭

ಅಧ್ಯಾಯ-೧ ೨೧-೨೩

ಪ್ರದೇಶ, ಪ್ರಾದೇಶಿಕತೆ ಮತ್ತು ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ

೧.೧ ಪ್ರದೇಶ

೧.೨ ಪ್ರಾದೇಶಿಕತೆ

೧.೩ ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ

೧.೪ ಕರಾವಳಿ ಕಥನಗಳಲ್ಲಿ ಪ್ರಾದೇಶಿಕತೆ ಮತ್ತು ಸಂಸ್ಕೃತಿ

೧.೫ ತುಳುನಾಡಿನ ಪ್ರಾದೇಶಿಕ ವ್ಯಾಪ್ತಿ

ಅಧ್ಯಾಯ-೨ ೨೪-೩೦

ಕಾದಂಬರಿಗಳಲ್ಲಿ ಸಾಮಾಜಿಕ ಸಂರಚನೆ

೨.೧ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ಸ್ಥೂಲ ಅವಲೋಕನ

೨.೨ ಸಾಮಾಜಿಕ ಸಂರಚನೆಯ ಸ್ವರೂಪ

೨.೩ ಸಾಮಾಜಿಕ ಸಾಮರಸ್ಯದ ಸಂಕಥನ: ಅರ್ಘ್ಯ

೨.೩.೧ ಕಾದಂಬರಿ ಮುಂದಿಡುವ ಸಾಮಾಜಿಕ ಮೌಲ್ಯಗಳು ಮತ್ತು ಆಶಯಗಳು

೨.೪ ವಸಾಹತುಶಾಹಿಗೆ ಕರಾವಳಿಯ ಪ್ರತಿಕ್ರಿಯೆ: ದಾಯಿತ್ವ

೨.೪.೧ ಕಾದಂಬರಿಯಲ್ಲಿ ಪ್ರಕಟಗೊಂಡ ಪ್ರಭುತ್ವ-ಪ್ರತಿರೋಧದ ಭಿನ್ನನೆಲೆಗಳು

೨.೪.೨ ಹೊಸ ಶಿಕ್ಷಣ ಕ್ರಮ ಮತ್ತು ಸಂಸ್ಥೆಗಳ ಆರಂಭ

೨.೪.೩ ರಸ್ತೆ ನಿರ್ಮಾಣ

೨.೪.೪ ರಾಜಕೀಯ ಬದಲಾವಣೆಗಳು

೨.೪.೫ ಸಮಾಜ ಸುಧಾರಣೆ ಮತ್ತು ಅರಿವಿನ ವಿಸ್ತರಣೆಯ ಚಟುವಟಿಕೆಗಳು

೨.೫ 'ಪ್ರತಿಶೋಧ' ಕಾದಂಬರಿಯಲ್ಲಿ ಸಾಮಾಜಿಕ ಮೌಲ್ಯಗಳ ಅನ್ವೇಷಣೆ

೨.೬ ಜೀವಪರ ಸಂಬಂಧಗಳ ಅನುರಣನ 'ಶಿಶಿರ'

೨.೬.೧ ಕಾದಂಬರಿಯಲ್ಲಿ ವ್ಯಕ್ತಗೊಂಡ ಭಾವನಾತ್ಮಕ ಸಂಬಂಧದ ನೆಲೆಗಳು

೨.೭ ಪ್ರಗತಿಪರ ಧೋರಣೆಯ ವಿಶಿಷ್ಟ ಕಥನ 'ಮಥನ'

೨.೮ ಸಾಂಸ್ಕೃತಿಕ ಪ್ರಭುತ್ವದ ಪ್ರಾತಿನಿಧಿಕ ಕಾದಂಬರಿ 'ಗುರಿಕಾರ'

೨.೯ 'ದಿಬ್ಬಣ' ಕಾದಂಬರಿಯಲ್ಲಿ ಸಾಂಸ್ಕೃತಿಕ ಮುಖಾಮುಖಿ

೨.೧೦ ಕಾಲದೊಂದಿಗಿನ ಪಯಣ 'ಕಾಲಚಕ್ರ'

ಅಧ್ಯಾಯ–೩ ೩೧–೩೩

ಐತಿಹಾಸಿಕ ಕಾದಂಬರಿಗಳು: ಚಾರಿತ್ರಿಕ ಅನುಸಂಧಾನ

೩.೧ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಚಾರಿತ್ರಿಕ–ಸಾಂಸ್ಕೃತಿಕ ದಾಖಲಾತಿ

೩.೧.೧ ‘ಮಂಗಳೂರು ಕ್ರಾಂತಿ’ ಕಾದಂಬರಿಯಲ್ಲಿ ಐತಿಹಾಸಿಕ ಚಿತ್ರಣ

೩.೧.೨ ರೈತ ಸಂಘಟನೆಯ ಹೋರಾಟ

೩.೧.೩ ಮಂಗಳೂರು ಕ್ರಾಂತಿ ಮತ್ತು ಕರಾವಳಿಯ ಆಧುನಿಕ ಚರಿತ್ರೆ

೩.೧.೪. ಕಾದಂಬರಿಯಲ್ಲಿ ಪ್ರಕಟಗೊಂಡ ಚರಿತ್ರೆಯ ಭಿನ್ನ ಗ್ರಹಿಕೆಗಳು

೩.೨ ‘ದಳವಾಯಿ ದುಗ್ಗಣ್ಣ’ ಕಾದಂಬರಿಯಲ್ಲಿ ಕರಾವಳಿಯ ಮೌಖಿಕ ಚರಿತ್ರೆ

೩.೨.೧ ಕಾದಂಬರಿಯ ಚಾರಿತ್ರಿಕ–ಸಾಮಾಜಿಕ ಆಶಯ

ಅಧ್ಯಾಯ–೪ ೩೪–೩೮

ಕರಾವಳಿಯ ಆಚರಣಾತ್ಮಕ ಬದುಕು ಮತ್ತು ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳು

೪.೧ ತುಳುನಾಡಿನ ಭೂತಾರಾಧನೆ: ಸಾಂಸ್ಕೃತಿಕ ಸ್ವರೂಪ

೪.೧.೧ ಭೂತಾರಾಧನೆಯ ಅನುಭವ ಕಥನ ನೀರ್‌ಮಾರ್ಗರ ‘ತಿಲ್ಲಾನ’ ಕಾದಂಬರಿ

೪.೧.೨ ‘ತಿಲ್ಲಾನ’ದಲ್ಲಿ ಭೂತಾರಾಧನೆಯ ಬಗೆಗಿನ ತಲ್ಲಣಗಳು

೪.೧.೩ ಆಧುನಿಕತೆಯ ಭೂತವಾಗಿ ‘ಬಾರಣೆ’ ಕಾದಂಬರಿ

೪.೨ ಕರಾವಳಿಯ ನಾಗಾರಾಧನೆ: ಸಾಂಸ್ಕೃತಿಕ ಸ್ವರೂಪ

೪.೨.೧ ನಾಗಾರಾಧನೆಯ ವಿಶಿಷ್ಟ ಪ್ರತಿರೂಪ: ‘ತಂಬಿಲ’ ಕಾದಂಬರಿ

೪.೨.೨ ಕಾದಂಬರಿಯಲ್ಲಿ ಪ್ರಕಟಗೊಂಡ ನಾಗಾರಾಧನೆಯ ಸಾಂಸ್ಕೃತಿಕ ಸ್ಥಿತ್ಯಂತರಗಳು

೪.೩ ಕರಾವಳಿಯ ಸಾಂಸ್ಕೃತಿಕ ಬದುಕು–ಆಚರಣೆಗಳ ಸ್ವರೂಪ

೪.೩.೧ ತುಳುನಾಡಿನ ಜನಪದ ಕ್ರೀಡೆಯ ಪ್ರತಿಬಿಂಬ 'ಕಂಬುಲ' ಕಾದಂಬರಿ

೪.೩.೨ ಪ್ರತಿಷ್ಠೆ–ರಂಜನೆಗಳ ಸಮಾಗಮ 'ಕಂಬುಲ'

೪.೩.೩ ಸಾಮಾಜಿಕ–ಸಾಂಸ್ಕೃತಿಕ ಸ್ಥಿತ್ಯಂತರದ ಧ್ವನಿಯಾಗಿ 'ಕಂಬುಲ'

೪.೪ ಕರಾವಳಿಯ ಸಾಂಸ್ಕೃತಿಕ ಮೌಲ್ಯಗಳ ಸಂಕಥನ 'ಮದಿಪು'

೪.೪.೧ ಕಾದಂಬರಿಯಲ್ಲಿ ಪ್ರಕಟಗೊಂಡ ಮದುವೆಯ ಸಾಂಸ್ಕೃತಿಕ ಜಗತ್ತು

೪.೪.೨ 'ಮದಿಪು' ತೆರೆದಿಟ್ಟ ಹಬ್ಬ–ಆಚರಣೆ–ಕೃಷಿ ಬದುಕು

೪.೫ ದೈವಾರಾಧನೆಯ ಬಿಂಬ 'ಕಾರ್ನಿಕ' ಕಾದಂಬರಿ

ಅಧ್ಯಾಯ–೫ **೩೯–೪೧**

ಕಾದಂಬರಿಗಳಲ್ಲಿ ಜನಪದ ರಂಗಭೂಮಿಯ ಪ್ರಭಾವ

೫.೧ ಯಕ್ಷರಂಗದ ಸಾಂಸ್ಕೃತಿಕ ಬೆರಗು: 'ಧೀಂಗಿಣ' ಕಾದಂಬರಿ

೫.೧.೧ ಕಾದಂಬರಿಯಲ್ಲಿ ಪ್ರಕಟಗೊಂಡ ಯಕ್ಷಗಾನದ ಸಾಂಸ್ಕೃತಿಕ ಸ್ಥಿತ್ಯಂತರಗಳು

೫.೨ 'ಮಾದಿರ' ಕಾದಂಬರಿಯಲ್ಲಿ ಕರಾವಳಿಯ ಜನಪದ ಕುಣಿತ

೫.೨.೧ ತಳಸ್ತರದ ಸಾಂಸ್ಕೃತಿಕ ತುಡಿತ: ಮಾದಿರ

೫.೩. ಕರಾವಳಿಯ ಸಾಂಸ್ಕೃತಿಕ ಸಮನ್ವಯದ ನೆಲೆ 'ಜಾತ್ರೆ' ಕಾದಂಬರಿ

೫.೪ ತುಳುನಾಡಿನ ಪೌರುಷ ಕಲೆ 'ವೇಷ' ಕಾದಂಬರಿ

೫.೫ ಕರಾವಳಿಯ ಸಾಂಸ್ಕೃತಿಕ ಕಥನ: 'ತರಿಕಿಟ'

ಅಧ್ಯಾಯ ೬ **೪೨–೪೩**

ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಚಿತ್ರಣ

೬.೧ ಆಧುನಿಕ ಸಾಹಿತ್ಯದ ಹಿನ್ನೆಲೆಯಲ್ಲಿ ಸ್ತ್ರೀವಾದದ ಸ್ವರೂಪ

೬.೨ ತಳಸಮುದಾಯದ ಸ್ತ್ರೀ–ಪುರುಷ ಸಂವೇದನೆಯಾಗಿ 'ಮಾದಿರ' ಕಾದಂಬರಿ

೬.೩ 'ತಿಲ್ಲಾನ' ಕಾದಂಬರಿಯಲ್ಲಿ ಶಿಷ್ಟ ಮತ್ತು ಪರಿಶಿಷ್ಟದ ತುಡಿತ ಹಾಗೂ ತಳಸಮುದಾಯದ ಸ್ತ್ರೀ ಚಿತ್ರಣ

೬.೪ ತುಳುನಾಡಿನ ಅಳಿಯಕಟ್ಟಿನಲ್ಲಿ ಸ್ತ್ರೀ ಶಕ್ತಿಯಾಗಿ 'ಮದಿಪು' ಕಾದಂಬರಿ

ಅಧ್ಯಾಯ–೭ **೪೪–೪೫**

ಕಾದಂಬರಿಗಳಲ್ಲಿ ಭಾಷಿಕ ಸ್ವರೂಪ

೭.೧ ಕಾದಂಬರಿಗಳಲ್ಲಿ ತುಳು ಭಾಷಾ ಸ್ವರೂಪ

೭.೨ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪದಗಳು

೭.೩ ಕಾದಂಬರಿಗಳಲ್ಲಿ ಬಳಕೆಯಾಗಿರುವ ತುಳು ಭಾಷಾ ಪದಗಳು

೭.೪ ಕಾದಂಬರಿ ಒಳಗೊಂಡ ಪ್ರಾದೇಶಿಕ ನುಡಿಗಳು ಮತ್ತು ಗಾದೆಗಳು

ಸಮಾರೋಪ: **೪೬–೪೮**

ಅಧ್ಯಯನದ ಫಲಿತಗಳು **೪೯–೫೨**

ಅಧ್ಯಯನದ ಸಾಧ್ಯತೆಗಳು **೫೩–೫೪**

ಅನುಬಂಧ–೧

ಪ್ರಧಾನ ಆಕರಗಳು ೫೫

ಪೂರಕ ಆಕರಗಳು ೫೬

ಪರಾಮರ್ಶನ ಗ್ರಂಥಗಳು ೫೭

ಸಂಚಿಕೆಗಳು ೬೪

ಅಂತರ್ಜಾಲ ಮಾಹಿತಿ ೬೫

ಪ್ರಕಟಿತ ಲೇಖನಗಳು ೬೬

ಅನುಬಂಧ–೨

ಪ್ರಭಾಕರ ನೀರ್‌ಮಾರ್ಗ ಅವರ ಜೀವನ ಮತ್ತು ಸಾಹಿತ್ಯ ಪಥ ೬೯

"ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಪ್ರತಿನಿಧೀಕರಣ"

ಪ್ರಸ್ತಾವನೆ:

ಕರ್ನಾಟಕದ ಸಂಸ್ಕೃತಿಯ ಅಧ್ಯಯನದಲ್ಲಿ ತುಳುನಾಡಿನ ಪ್ರಾದೇಶಿಕ ಸಂಸ್ಕೃತಿಯು ವಿಶಿಷ್ಟವಾದ ಸ್ಥಾನವನ್ನು ಪಡೆಯುತ್ತದೆ. ಅವಿಭಜಿತ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಟ್ಟಾಗಿ 'ಕೆನರಾ' ಎಂದು ಕರೆಯಲಾಗುತ್ತಿತ್ತು. ಈಗಿನ ಉತ್ತರ ಕನ್ನಡ ಜಿಲ್ಲೆಯನ್ನು ೧೮೬೦ ರಲ್ಲಿ ಬ್ರಿಟೀಷರು 'North Canara' ಮತ್ತು ಈಗಿನ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸೇರಿಸಿ 'South Canara' ಎಂದು ವಿಂಗಡಿಸಿದ್ದರು. ೧೮೬೨ ರಲ್ಲಿ ಉತ್ತರ ಕೆನರಾವನ್ನು ಬೊಂಬೆ ಪ್ರೆಸಿಡೆನ್ಸಿ ಹಾಗೂ ದಕ್ಷಿಣ ಕೆನರಾವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಕುಂದಾಪುರ ತಾಲೂಕು ಮೊದಲು ಉತ್ತರ ಕೆನರಾದಲ್ಲಿದ್ದರೂ ನಂತರ ದಕ್ಷಿಣ ಕೆನರಾಕ್ಕೆ ಸೇರಿಸಲಾಯಿತು. ಸ್ವಾತಂತ್ರ್ಯ ನಂತರ ಈ ಎರಡೂ ಜಿಲ್ಲೆಗಳು ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಾಗಿ ಬದಲಾದವು. ಸ್ವಾತಂತ್ರ್ಯದ ನಂತರದಲ್ಲಿ ಈ ಜಿಲ್ಲೆಗೆ ಕಾಸರಗೋಡಿನ ಭೂ ಭಾಗವೂ ಸೇರಿತ್ತು. ೧೯೫೬ ರಲ್ಲಿ ನಡೆದ ಪ್ರಾಂತ್ಯವಾರು ವಿಂಗಡನೆಯ ಸಂದರ್ಭ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೂ, ಹಾಗೂ ಕಾಸರಗೋಡು ಪ್ರದೇಶವನ್ನು ಕೇರಳ ರಾಜ್ಯಕ್ಕೆ ಸೇರಿಸಲಾಯಿತು. ಕರ್ನಾಟಕ ಸರ್ಕಾರ ೧೯೯೭ ಆಗಸ್ಟ್ ತಿಂಗಳಲ್ಲಿ ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ದಕ್ಷಿಣ ಕನ್ನಡ ಹಾಗು ಉಡುಪಿ ಜಿಲ್ಲೆ ಎಂದು ಎರಡಾಗಿ ವಿಂಗಡಿಸಿತು. ಉಡುಪಿ ಜಿಲ್ಲೆ ೧೫೦ ಕಿಲೋ ಮೀಟರ್ ಕರಾವಳಿ ಪ್ರದೇಶವನ್ನು ಹೊಂದಿದೆ. ಇಲ್ಲಿನ ಮುಖ್ಯ ಕಸುಬು ಮೀನುಗಾರಿಕೆ. ಭತ್ತ ಮತ್ತು ತೆಂಗು ಇಲ್ಲಿಯ ಮುಖ್ಯ ಬೆಳೆಗಳು. ಹಿಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ಸೇರಿ) 'ತುಳುನಾಡು' ಎಂದು ಹೆಸರು ಪಡೆದಿದೆ.

ದಕ್ಷಿಣ ಕನ್ನಡ ಜಿಲ್ಲೆ ಎಂಬುದು ಭೌಗೋಳಿಕವಾಗಿ ಒಂದು ಪ್ರಾದೇಶಿಕ ಘಟಕದ ಹೆಸರು. ಪ್ರಾಚೀನ ಕಾಲದಿಂದಲೂ ತುಳುನಾಡು ಕರ್ನಾಟಕದ ಒಂದು ಭಾಗವಾಗಿ ಗುರುತಿಸಿಕೊಂಡು ಬಂದಿದೆ. ತುಳುನಾಡಿನ ಚರಿತ್ರೆಯನ್ನು ಕರ್ನಾಟಕದಿಂದ ಬೇರ್ಪಡಿಸಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಮೋಹನ ಕೃಷ್ಣ ರೈ ಅವರು 'ತುಳು' ಪದದ ನಿಷ್ಪತ್ತಿ

ಬಗ್ಗೆ "ಚುಟುಕುಲದವರು ಕದಂಬರ ಅಧೀನರಾಗಿ ತುಳುನಾಡನ್ನು ಆಳುತ್ತಿದ್ದರು. ಚುಟುವಿನಿಂದಲೇ 'ತುಳು' ಎಂಬ ಪದ ಬಂತು ಎಂಬ ವಾದವೂ ಇದೆ. ಚುಟುಕುಲದವರ ನಂತರ ಆಳುಪರು ತುಳುನಾಡಿನ ಅರಸರಾದರು. ನಂತರ 'ಆಳುವ ಖೇಡ' ಎಂಬ ಹೆಸರು ಬಂತು." (ತುಳು ಸಂಸ್ಕೃತಿಯ ಚತುರ್ಮುಖೀ ಅಧ್ಯಯನ, ೨೦೧೫, ಪುಟ.೩) ಎಂದಿದ್ದಾರೆ. ತುಳುನಾಡು ಎಂಬ ಹೆಸರಿನ ಬಗ್ಗೆ ವಿದ್ವಾಂಸರಲ್ಲಿ ಬೇರೆ ಬೇರೆ ಅಭಿಪ್ರಾಯ ಇರುವುದನ್ನು ಕಾಣಬಹುದು.

ಸಂಸ್ಕೃತಿಯ ಕುರಿತಾಗಿ ನಾಗಪ್ಪ ಗೌಡ ಆರ್. ಇವರು "ಸಂಸ್ಕೃತಿ ಎಂದರೆ ಅದೊಂದು ಜೀವನ ವಿಧಾನ. ಒಂದು ಜನ ಸಮುದಾಯದ ಜೀವನ ವಿಧಾನವೇ ಆ ಸಮಾಜದ ಸಂಸ್ಕೃತಿ. ಸಾಹಿತ್ಯ- ಸಂಗೀತ, ಮೊದಲಾದ ಕಲೆಗಳು ನಮ್ಮ ಬದುಕಿನ ರೀತಿ-ನೀತಿಗಳನ್ನು ಚಿತ್ರಿಸುವುದರಿಂದ ಸಂಸ್ಕೃತಿಯು ಇವುಗಳಲ್ಲಿ ವ್ಯಕ್ತವಾಗುತ್ತದೆ. ಹೀಗಾಗಿ ಆಯಾ ಕಾಲ-ದೇಶಗಳಲ್ಲಿ ನಿರ್ಮಿತ ಸಾಹಿತ್ಯಾದಿ ಕಲೆಗಳಲ್ಲಿ ಸಂಸ್ಕೃತಿಯ ರೂಪಗಳನ್ನು ಕಾಣಬಹುದಾಗಿದೆ. ಸಂಸ್ಕೃತಿ ಕಾಲದಿಂದ ಕಾಲಕ್ಕೆ ಚಲನಶೀಲತೆಯಿಂದ ಬದಲಾವಣೆಗೆ ಒಳಗಾಗುತ್ತದೆ. ಸಮಾಜದಲ್ಲಿ ತೋರುವ ಸ್ಥಿತ್ಯಂತರಗಳು ಸಾಂಸ್ಕೃತಿಕ ತಳಮಳಕ್ಕೆ ಕಾರಣವಾಗುತ್ತದೆ. ಈ ಸಾಂಸ್ಕೃತಿಕ ಪಲ್ಲಟಗಳನ್ನೇ ಆಯಾ ಕಾಲದ ಸಾಹಿತ್ಯ ಕೃತಿಗಳು ಅನಾವರಣಗೊಳಿಸುತ್ತವೆ." (ನೆಲದ ದನಿ, ೨೦೧೮, ಪುಟ.೮೪) ಎಂದಿದ್ದಾರೆ. ಪ್ರಸ್ತುತ ತುಳುನಾಡಿನ ಪರಿಸ್ಥಿತಿಗೆ ಇವರ ಮಾತು ಪೂರಕವಾಗಿದೆ.

ಕರ್ನಾಟಕ ಸಂಸ್ಕೃತಿಯ ಅಧ್ಯಯನದಲ್ಲಿ ತುಳುನಾಡಿನ ಪ್ರಾದೇಶಿಕ ಸಂಸ್ಕೃತಿಯು ವಿಶಿಷ್ಟವಾದ ಸ್ಥಾನವನ್ನು ಪಡೆಯುತ್ತದೆ. ಪೂರ್ವದಲ್ಲಿ ಸಹ್ಯಾದ್ರಿ ಪರ್ವತಗಳಿಂದ ಅರಬೀ ಸಮುದ್ರದವರೆಗೆ, ಉತ್ತರದಲ್ಲಿ ಪಂಚನದಿಗಳ ಸಂಗಮ ತಾಣ ಗಂಗೊಳ್ಳಿಯಿಂದ, ದಕ್ಷಿಣದ ಚಂದ್ರಗಿರಿ ನದಿಯವರೆಗಿನ ಪ್ರದೇಶ ತುಳುನಾಡು. 'ತುಳುನಾಡು' ಎಂದು ಕರೆಸಿಕೊಳ್ಳುವ ಭೌಗೋಳಿಕ ಪ್ರದೇಶ ತನ್ನದೇ ಆದ ಹಲವಾರು ಸಾಂಸ್ಕೃತಿಕ, ಭಾಷಿಕ, ಧಾರ್ಮಿಕ, ಸಾಮಾಜಿಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಇಂದು 'ಸಂಸ್ಕೃತಿ' ಎಂಬ ಜೀವನ ಕ್ರಮವು ಹಲವು ರೀತಿಯ ಪಲ್ಲಟದ ತಲ್ಲಣಗಳನ್ನು ತನ್ನ ಎದುರಿನ ಸವಾಲುಗಳಾಗಿ ಸ್ವೀಕರಿಸಿದೆ. ಈ ಕಾರಣಕ್ಕಾಗಿ ಪ್ರಸ್ತುತ ಸಂಸ್ಕೃತಿಯ ವಿಶಿಷ್ಟತೆಯ ಕುರಿತು ಹಲವು ವಿಮರ್ಶೆ ಸಂಶೋಧನೆಗಳ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರ್ನಾಟಕ ಕರಾವಳಿಯ ಮಹತ್ವದ ಲೇಖಕರುಗಳಲ್ಲಿ ಪ್ರಮುಖರಾದ ಶ್ರೀ ಪ್ರಭಾಕರ ನೀರ್ಮಾರ್ಗ ಅವರು ಕಳೆದ ಮೂರು ದಶಕಗಳಿಂದ ಆಧುನಿಕ ಕನ್ನಡ ಕಾದಂಬರಿ ಸಾಹಿತ್ಯಕ್ಕೆ ತಮ್ಮದೇ ರೀತಿಯಲ್ಲಿ ವಿಶಿಷ್ಟ ಕೊಡುಗೆ ನೀಡುತ್ತಾ ಬಂದಿದ್ದಾರೆ. ಇವರ ಲೇಖನಿಯಿಂದ ಹರಿದು ಬಂದ ಕಾದಂಬರಿಗಳು ಕರಾವಳಿಯ ಸಾಂಸ್ಕೃತಿಕ ಬಹುತ್ವವನ್ನು ವಿಶಿಷ್ಟ ವಿನ್ಯಾಸಗಳ ಮೂಲಕ ಪ್ರಕಟಗೊಳಿಸಿದೆ. ಇವರ ಬಹುತೇಕ ಬರಹಗಳು ಶಾಸ್ತ್ರೀಯ ಅನ್ನುವ ನಿರ್ದಿಷ್ಟ ಚೌಕಟ್ಟಿಗೆ ಒಳಪಡದೆ ಕರಾವಳಿಯ ಮಣ್ಣಿನ ಗುಣವನ್ನು ಹೊರಸೂಸಿವೆ. ಸಾಮಾಜಿಕ ಸಂಬಂಧಗಳು ಮತ್ತು ಸ್ಥಿತಿಗತಿಗಳನ್ನು ತಳಮಟ್ಟದಿಂದ ನೋಡುವ ಪ್ರಯತ್ನ ಇವರ ಕಾದಂಬರಿಗಳಲ್ಲಿ ಹಾಸುಹೊಕ್ಕಾಗಿದೆ.

ಹೀಗೆ ಪ್ರಾದೇಶಿಕ ಸಂಸ್ಕೃತಿಯ ತಾತ್ವಿಕತೆಯ ನೆಲೆಯಲ್ಲಿ ಇವರ ಕಾದಂಬರಿಗಳು ಅಧ್ಯಯನ ಯೋಗ್ಯವೆನಿಸಿವೆ. ಇವರ ಕಾದಂಬರಿಗಳಲ್ಲಿ ತುಳುನಾಡಿನ ಮಧ್ಯಮ ಹಾಗೂ ಕೆಳವರ್ಗಗಳ ಬದುಕು, ಸಂಸ್ಕೃತಿಗಳು ತಮ್ಮದೇ ಆದ ರೀತಿಯಲ್ಲಿ ಪ್ರತಿಬಿಂಬಿತವಾಗಿವೆ. ಇವರು ಮಧ್ಯಮ ವರ್ಗದ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಪ್ರಜ್ಞಾ ಪೂರ್ವಕವಾಗಿ ದಾಖಲಿಸ ಹೊರಟವರಲ್ಲ. ಆದರೆ ಇವರ ಹೆಚ್ಚಿನ ಕಥನಗಳ ವಸ್ತು ಈ ವರ್ಗಗಳಿಗೆ ಸಂಬಂಧಿಸಿರುವುದರಿಂದ ಆ ವರ್ಗಗಳ ಸಾಂಸ್ಕೃತಿಕ ವಿವರಗಳು ಪ್ರಾಸಂಗಿಕವಾಗಿ ಇಲ್ಲಿ ದಾಖಲಾಗಿದೆ.

ಪ್ರಭಾಕರ ನೀರ್ಮಾರ್ಗ ಅವರು ಅವರ ಬದುಕಿನಲ್ಲಿ ಆಗಿರುವ ಅನುಭವಿಸಿರುವ ನೋಡಿರುವ ಘಟನೆಗಳನ್ನು ತನ್ನ ಕೃತಿಗಳಲ್ಲಿ ದಾಖಲಿಸಿ ಉಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮಂಗಳೂರಿನ 'ನೀರ್ಮಾರ್ಗ' ಎಂಬ ಪ್ರದೇಶ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದ ಸಂಸ್ಕೃತಿಯು ಬದಲಾವಣೆಗೆ ಸಿಕ್ಕಿ ಪಲ್ಲಟಗೊಂಡು ತಲ್ಲಣಗೊಳ್ಳುತ್ತಿರುವ ವಿಚಾರಗಳನ್ನು ತನ್ನ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಇವರು ತುಳುನಾಡಿನ ಆಚರಣೆ, ಆರಾಧನೆ, ಜೀವನ ಕ್ರಮ ಇತ್ಯಾದಿಗಳು ಅಲ್ಲದೆ ತನ್ನ ಹಿಂದಿನ ತಲೆಮಾರಿನಲ್ಲಿ ಆಗಿ ಹೋದ ಸಂಸ್ಕೃತಿಯ ತುಣುಕುಗಳನ್ನು ಅನುಭವಿಸಿದ್ದರಿಂದ, ಕೇಳಿ ತಿಳಿದು ಸ್ವತಃ ಕ್ಷೇತ್ರಕಾರ್ಯದ ಮೂಲಕ ವಿಚಾರಗಳನ್ನು ಖಚಿತಪಡಿಸಿಕೊಂಡಿರುವ ಅನುಭವಗಳನ್ನು ಕೃತಿಗಳಲ್ಲಿ ಚಿತ್ರಿಸಿರುವುದು ಇವರ ಆತ್ಮಚರಿತ್ರೆಯಿಂದ ತಿಳಿದು ಬರುತ್ತದೆ. ಲೇಖಕರು ಈ ಪ್ರದೇಶದ ವ್ಯಾಪ್ತಿಯೊಳಗೆ ನಡೆದಿರುವ ಘಟನೆಗಳನ್ನು ತನ್ನ ಕಾದಂಬರಿಗಳ ಒಳಗೆ ಜೀವಂತವಾಗಿರಿಸುವ ಪ್ರಯತ್ನ ಮಾಡಿದ್ದಾರೆ.

ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳ ಕುರಿತು ಚಿನ್ನಪ್ಪ ಗೌಡ ಕೆ. ಅವರು "ತುಳುನಾಡಿನ ಬೇರೆ ಬೇರೆ ಜನಾಂಗಗಳ ನಂಬಿಕೆ–ನಡವಳಿಕೆ, ಹಬ್ಬ–ಹರಿದಿನ, ಆಚರಣೆ, ಆರಾಧನೆಗಳನ್ನು ನೀರ್‌ಮಾರ್ಗರು ಹಂತ ಹಂತವಾಗಿ ಮತ್ತು ವಿಸ್ತಾರವಾಗಿ ಮನ ಮುಟ್ಟುವಂತೆ ತೆರೆದಿಟ್ಟಿದ್ದಾರೆ." (ನೆಲದ ದನಿ, ೨೦೧೮, ಪುಟ.೫೨) ಈ ಮಾತು ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ಅಧ್ಯಯನದ ಪ್ರಸ್ತುತತೆಯನ್ನು ತಿಳಿಸಿ ಕೊಡುತ್ತದೆ.

ತುಳುನಾಡಿನ ಕುಟುಂಬ ನಿರ್ವಹಣೆಯ ಮಾತೃಮೂಲೀಯ ಅಂಶಗಳು, ವರ್ಗ, ವರ್ಣ ಸಂಘರ್ಷಗಳು, ಜೀವನ ವಿಧಾನ ತಳಸ್ತರದ ಜೀವನ ವಿಧಾನ, ಅಂತರ್ಜಾತೀಯ ವಿವಾಹ, ವಸಾಹತುಶಾಹಿ ಆಡಳಿತ ಅಲ್ಲದೆ ಮಂಗಳೂರಿನಲ್ಲಿ ನಡೆದಂತಹ ಹಲವಾರು ಕ್ರಾಂತಿಗಳು, ಮೌಖಿಕ ಚರಿತ್ರೆ ಎಲ್ಲವನ್ನೂ ತನ್ನ ಕೃತಿಗಳಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ತುಳುನಾಡಿನ ಸೌಹಾರ್ದಯುತ ಜೀವನ ವಿಧಾನವು ಎಷ್ಟೊಂದು ಅನ್ಯೋನ್ಯವಾಗಿದೆ ಎಂಬುದನ್ನು ಕೂಡ ಇವರ ಕೃತಿಗಳು ದಾಖಲಿಸುತ್ತವೆ. ಪ್ರಗತಿಶೀಲ ಸಾಹಿತ್ಯದ ಪ್ರಭಾವವು ಇವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ತುಳುನಾಡಿನ ಈ ಪ್ರದೇಶದಲ್ಲಿ ನಡೆಯುವ ಸಾಂಸ್ಕೃತಿಕ ವಿಚಾರಗಳೆಲ್ಲವನ್ನು ಚಿತ್ರಿಸುತ್ತಾ ಆಧುನಿಕತೆಯ ಕಡೆಗೆ ಧುಮುಕುವ ಜನರಿಗೆ ಪರಂಪರೆಯ ಮೌಲ್ಯಾತ್ಮಕ ಅಂಶಗಳನ್ನು ಎಚ್ಚರದ ಗಂಟೆಯಾಗಿ ತನ್ನ ಕೃತಿಗಳಲ್ಲಿ ದಾಖಲಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಪ್ರಾದೇಶಿಕ ಸಂಸ್ಕೃತಿಯ ಉತ್ತಮ ಮೌಲ್ಯಗಳನ್ನು ತನ್ನ ಕೃತಿಗಳಲ್ಲಿ ದಾಖಲಿಸಿದ್ದಾರೆ. ಪರಂಪರೆಯಿಂದ ನಡೆದುಕೊಂಡು ಬಂದ ಸಂಸ್ಕೃತಿಯ ಅಂಶಗಳು ಮುಂದಿನ ಪೀಳಿಗೆಗೆ ತಲುಪಿಸ ಬೇಕೆಂಬ ಕಾಳಜಿಯು ಲೇಖಕರ ಉದ್ದೇಶವಾಗಿರುವಂತಿದೆ.

ಪ್ರಭಾಕರ ನೀರ್‌ಮಾರ್ಗರು ತನ್ನ ಕಾದಂಬರಿಗಳಲ್ಲಿ ಜಾಗತೀಕರಣದಿಂದಾಗಿ ಪಲ್ಲಟಗೊಳ್ಳುತ್ತಿರುವ ಈ ನೆಲದ ಸಂಸ್ಕೃತಿಯನ್ನು ತನ್ನ ಬರಹದ ಮೂಲಕ ವಿಷಾದದಿಂದಲೇ ಚಿತ್ರಿಸಿದ್ದಾರೆ. ಪರಂಪರೆಯಿಂದ ನಡೆದುಕೊಂಡು ಬಂದ ಸಂಸ್ಕೃತಿಯ ಮೌಲ್ಯಗಳನ್ನು ತನ್ನ ಬರಹದ ಮೂಲಕ ಚಿತ್ರಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವ ಪ್ರಯತ್ನ ನಡೆಸಿದ್ದಾರೆ. ವಿಶಿಷ್ಟ ಸಂಸ್ಕೃತಿಯನ್ನು ಒಳಗೊಂಡ ಈ ಪ್ರದೇಶದ ಜನ ಜೀವನ ನೀರ್‌ಮಾರ್ಗರ ಕಾದಂಬರಿಗಳಲ್ಲಿ ದಾಖಲಾದ ಮೌಲ್ಯಯುತ ಸಂಸ್ಕೃತಿಯ ಹೊಳಹನ್ನು ಹೊಸ ಆಲೋಚನೆ ಮತ್ತು ಸಿದ್ಧಾಂತದ ಮೂಲಕ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ನಡೆಸಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಕರಾವಳಿಯ ಮಹತ್ವದ ಬರಹಗಾರರಾಗಿ ಪ್ರಭಾಕರ ನೀರ್‌ಮಾರ್ಗ ಅವರು ಕಳೆದ ಮೂರು ದಶಕಗಳಿಂದ ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಮಹತ್ತರ ಕೊಡುಗೆ ನೀಡುತ್ತಾ ಬಂದಿದ್ದಾರೆ. ಇವರು ಬರೆದಿರುವ ಇಪ್ಪತ್ತೊಂದು ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕದ ಕರಾವಳಿ ಪ್ರದೇಶದ 'ತುಳುನಾಡು' ಎಂದು ಕರೆಯಲ್ಪಡುವ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರಾದೇಶಿಕ ಸಂಸ್ಕೃತಿಯ ವಿಭಿನ್ನವಾದ ಅಂಶಗಳು ಇವರ ಕಾದಂಬರಿಗಳಲ್ಲಿ ಹೇಗೆ ಅನಾವರಣಗೊಂಡಿದೆ ಎಂಬುದನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ತುಳುವರು ಎಂದರೆ ಯಾರು? ಸಂಸ್ಕೃತಿ ಹಾಗೂ ತುಳುನಾಡ ಪ್ರಾದೇಶಿಕ ಸಂಸ್ಕೃತಿಯಲ್ಲಿ ಕಂಡು ಬರುವ ವಿಭಿನ್ನ ಅಂಶಗಳು ಯಾವುವು? ಜಾಗತೀಕರಣದ ಪ್ರಭಾವ ಈ ನಾಡಿಗೆ ಯಾವ ರೀತಿಯ ತಲ್ಲಣಗಳನ್ನು ಮೂಡಿಸಿವೆ ಎಂಬತಹ ವಿಚಾರಗಳನ್ನು ಅಧ್ಯಯನದಲ್ಲಿ ಶೋಧನೆಗೆ ಒಳಪಡಿಸಲಾಗಿದೆ.

ಇಂದು ಬಹುರೂಪಿಯಾದ ಪ್ರಾದೇಶಿಕ ಸಂಸ್ಕೃತಿಗೆ ಸವಾಲಾಗಿ ಇರುವಂಥದ್ದು ಏಕೀಕೃತವಾದ ರಾಷ್ಟ್ರೀಯ ಸಂಸ್ಕೃತಿ. ಈ ಬಗ್ಗೆ ಶಿವರಾಮ ಶೆಟ್ಟಿಯವರ ಹೇಳಿಕೆಯಂತೆ "ಈ ಸಂಸ್ಕೃತಿಯ ಮುಖ್ಯ ಸ್ವಭಾವ ಮತ್ತು ಲಕ್ಷಣ ಏನೆಂದರೆ ಎಲ್ಲವನ್ನೂ ಒಂದುಗೂಡಿಸುವಂಥದ್ದು ಮಾತ್ರವಲ್ಲ, ಎಲ್ಲದರಲ್ಲೂ ಸಮಾನ ಅಂಶಗಳನ್ನು, ಗುಣ ಧರ್ಮಗಳನ್ನು ಕಂಡುಕೊಳ್ಳುವಂಥದ್ದು. ಈ ರಾಷ್ಟ್ರೀಯ ಸಂಸ್ಕೃತಿ, ಸಂಸ್ಕೃತಿಯ ಬಹುರೂಪಗಳನ್ನು ಮುರಿದು ಅದನ್ನು ಒಂದು ಏಕಘನಾಕೃತಿಯಾಗಿ ಪರಿಭಾವಿಸಿಕೊಳ್ಳುತ್ತದೆ. ಹೀಗೆ ಒಂದುಗೂಡಿಸುವ ಪ್ರಕ್ರಿಯೆಯ ನಡುವೆ ಪ್ರಾದೇಶಿಕ ಸಂಸ್ಕೃತಿ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುವ ನೆಲೆಗಳನ್ನು ಕಾಣಬಹುದಾಗಿದೆ." (ನಾಡುನುಡಿ ಪ್ರತಿನಿಧೀಕರಣದ ಕಥನ, ೨೦೦೬, ಪುಟ.೪೧) ರಾಷ್ಟ್ರವನ್ನು ಒಂದುಗೂಡಿಸುವ ಎಷ್ಟೇ ಪ್ರಯತ್ನ ನಡೆದರೂ ಪ್ರತಿಯೊಂದು ಪ್ರದೇಶದಲ್ಲೂ ತನ್ನ ಪ್ರಾದೇಶಿಕತೆಯನ್ನು ವಿಶೇಷವಾಗಿ ಕಾಪಿಡುವ ಪ್ರಯತ್ನ ನಡೆಯುತ್ತಲೇ ಇದೆ ಎಂಬುದು ಮೇಲಿನ ಉಲ್ಲೇಖದಿಂದ ಅರ್ಥೈಸಬಹುದು.

ತುಳುನಾಡಿನ ಕರಾವಳಿ ತೀರದ ಬಂದರಿನ ಮೂಲಕ ನಡೆಯುತ್ತಿದ್ದ ವ್ಯಾಪಾರ ವಹಿವಾಟುಗಳು ಇಲ್ಲಿನ ಸಂಸ್ಕೃತಿಯ ಮೇಲೂ ಪರಿಣಾಮವನ್ನು ಬೀರಿತು. ತುಳುನಾಡಿನ ಸಾಂಸ್ಕೃತಿಕ ಬದಲಾವಣೆಗೆ ಹಾಗೂ ಆಧುನಿಕತೆಯ ಪ್ರವೇಶಕ್ಕೆ ತುಳುನಾಡಿನ ಬಂದರು ಪ್ರದೇಶವೇ ಕಾರಣವಾಯಿತು ಎನ್ನಬಹುದು. ವಸಾಹತುಪೂರ್ವದಲ್ಲಿದ್ದ ಜಾತಿಗಳು ವಿಭಿನ್ನ

ಬಗೆಯ ಕಸುಬುಗಳನ್ನು ಮಾಡುತ್ತಿದ್ದ ಸಮುದಾಯಗಳಾಗಿದ್ದವು. ಜಾಗತೀಕರಣದ ಈ ಸಂದರ್ಭದಲ್ಲಿ ತುಳುನಾಡು ಅನೇಕ ಬದಲಾವಣೆಗಳಿಗೆ ತೆರೆದುಕೊಂಡು ಮೂಲ ಸಂಸ್ಕೃತಿ ಸಂಪ್ರದಾಯಗಳಲ್ಲಿ ಬದಲಾವಣೆಗಳಾಗಿವೆ.

ಔದ್ಯೋಗೀಕರಣದಿಂದಾಗಿ ತುಳುನಾಡಿನ ಕುಲ ಕುಸುಬುಗಳು ಅವನತಿಯತ್ತ ಸಾಗಿವೆ. ಮೂಲ ವೃತ್ತಿಗಳಲ್ಲಿ ಬದಲಾವಣೆಗಳಾಗಿವೆ. ಈ ನಿಟ್ಟಿನಲ್ಲಿ ಸಾಂಪ್ರದಾಯಿಕ ತುಳುನಾಡಿನ ಸಾಮಾಜಿಕ ಸ್ವರೂಪ, ಉತ್ಪಾದನಾ ವಿಧಾನದ ಜೊತೆಗೆ ಆಧುನಿಕ ಕಾಲಘಟ್ಟದಲ್ಲಿ ಬದಲಾವಣೆಗೆ ಒಳಗಾದ ತುಳುನಾಡಿನ ಸಾಮಾಜಿಕ ಸ್ವರೂಪ, ಉತ್ಪಾದನಾ ವಿಧಾನ ಹಾಗೂ ಆರ್ಥಿಕ, ಸಾಂಸ್ಕೃತಿಕ ಪಲ್ಲಟಗಳನ್ನು ಲೇಖಕರು ಕಾದಂಬರಿಯ ಕಥನದಲ್ಲಿ ನೈಜವಾಗಿ ಚಿತ್ರಿಸಿದ್ದಾರೆ. ತುಳುನಾಡಿನ ಸಾಮಾಜಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಸ್ವರೂಪಗಳಾದ ಧಾರ್ಮಿಕ, ಸಾಮಾಜಿಕ ಆಚರಣೆಗಳು, ಆಧುನಿಕ ಸಂದರ್ಭದಲ್ಲಿ ಔದ್ಯೋಗೀಕರಣದಿಂದಾಗಿ ಆಗುತ್ತಿರುವ ಅನೇಕ ಬದಲಾವಣೆಗಳನ್ನು ಕಾದಂಬರಿಗಳಲ್ಲಿ ಗುರುತಿಸಿದ್ದಾರೆ.

ಭೌದ್ಧಿಕವಾಗಿ ಹಾಗೂ ಭೌತಿಕವಾಗಿ ತುಳುನಾಡ ಸಂಸ್ಕೃತಿ ಹಾಗೂ ಸಂಸ್ಕೃತಿಯ ಪಲ್ಲಟಗಳು ಇವರ ಕಾದಂಬರಿಗಳಲ್ಲಿ ಹೇಗೆ ಪ್ರತಿನಿಧೀಕರಿಸಿಕೊಂಡಿದೆ ಹಾಗೂ ನಾಡಿನ ಸಂಸ್ಕೃತಿಯು ಈ ಪ್ರದೇಶದಿಂದ ಹಾಗೂ ಪ್ರದೇಶದ ಜನರಿಂದ ಹೇಗೆ ದೂರವಾಗುತ್ತಿದೆ, ಕಾಣೆಯಾಗುತ್ತಿದೆ ಎಂಬುದನ್ನು ಅಧ್ಯಯನ ಮಾಡಿ, ಸಂಸ್ಕೃತಿಯ ಉಳಿವಿಗಾಗಿ ಮಾಡಬಹುದಾದ ಕಾರ್ಯಗಳನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿ ಶೋಧನೆಗೆ ಒಳಪಡಿಸಿ ಜಾಗತಿಕ ಸತ್ಯವನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಲಾಗಿದೆ. ಕರಾವಳಿ ಕರ್ನಾಟಕದಲ್ಲಿ ನಿಸರ್ಗ ಮತ್ತು ಸಂಸ್ಕೃತಿ ಅವಿನಾಭಾವ ಸಂಬಂಧವನ್ನು ಹೊಂದಿವೆ. ಇಲ್ಲಿನ ಸಾಂಸ್ಕೃತಿಕ ಬದುಕಿನ ಬಹುರೂಪಿ ಆಯಾಮಗಳು ನೀರ್‌ಮಾರ್ಗರ ಕಾದಂಬರಿಗಳಲ್ಲಿ ಚಿತ್ರಿತಗೊಂಡಿದೆ. ಇವರ ಕಾದಂಬರಿಗಳು ಕರಾವಳಿ ನೆಲದ ನಿಸರ್ಗ ಮತ್ತು ಸಂಸ್ಕೃತಿಯ ಅಂತರ್ ಸಂಬಂಧಗಳನ್ನು ಗರ್ಭೀಕರಿಸಿಕೊಂಡೇ ಸಾಮಾಜಿಕ ಸ್ಥಿತ್ಯಂತರಗಳು ಪ್ರತಿಫಲಿಸಿವೆ.

ನೀರ್‌ಮಾರ್ಗ ಅವರ ಕಾದಂಬರಿಗಳನ್ನು ಇಲ್ಲಿನ ಸಾಂಸ್ಕೃತಿಕ ವೈವಿಧ್ಯ, ಭಾಷಾ ವೈವಿಧ್ಯ, ಜಾತಿ ವೈವಿಧ್ಯ, ಧರ್ಮ ವೈವಿಧ್ಯ, ವೃತ್ತಿ ವೈವಿಧ್ಯತೆಗಳನ್ನು ಸಾಂಸ್ಕೃತಿಕ ಸಂವಹನದ ಅಂಶಗಳ ವ್ಯಾಪ್ತಿಯೊಳಗೆ ಅಧ್ಯಯನ ನಡೆಸಲಾಗಿದೆ. ಇವರ ಪ್ರತಿ ಕಾದಂಬರಿಯಲ್ಲಿಯೂ ಕರಾವಳಿಯ ಭೂತಾರಾಧನೆ, ನಾಗಾರಾಧನೆ, ಯಕ್ಷಗಾನ, ಕಂಬಳ, ಕೋಳಿ ಅಂಕ, ಕುಸ್ತಿ,

ಭಜನೆ, ಇತ್ಯಾದಿಯಾಗಿ ಈ ನೆಲದಲ್ಲಿ ಅರಳಿರುವ ಹಾಗೂ ಅಳಿಯುತ್ತಿರುವ ಹಲವು ಸಂಗತಿಗಳನ್ನು ಚಿಂತನೆಗೊಳಪಡಿಸಿದ್ದಾರೆ. ಈ ಎಲ್ಲಾ ವಿಭಿನ್ನ ಅಂಶಗಳನ್ನು ಆಯಾ ಅಧ್ಯಾಯಗಳ ನೆಲೆಯಲ್ಲಿ ಚರ್ಚಿಸಲಾಗಿದೆ.

ಕನ್ನಡದ ಸಂದರ್ಭದಲ್ಲಿ ಅನೇಕ ಮಂದಿ ಪ್ರಸಿದ್ಧ ಕತೆಗಾರರು, ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ಪ್ರಾದೇಶಿಕತೆಗೆ ಒತ್ತು ನೀಡಿದ್ದಾರೆ. ಇಂತಹ ಮಹತ್ವದ ಕಾದಂಬರಿಕಾರರಲ್ಲಿ ಪ್ರಭಾಕರ ನೀರ್‌ಮಾರ್ಗರೂ ಒಬ್ಬರಾಗಿದ್ದಾರೆ. ತುಳುನಾಡಿನ ಪ್ರಾದೇಶಿಕತೆಯ ವಿವಿಧ ಮಜಲುಗಳನ್ನು ತನ್ನ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಇಂತಹ ಪ್ರಾದೇಶಿಕ ಕಾದಂಬರಿಗಳಲ್ಲಿ ಒಂದು ಪ್ರದೇಶದ ಸಂಪೂರ್ಣ ಸಾಂಸ್ಕೃತಿಕ ಅಂಶಗಳು ಸಹಜವಾಗಿ ದಾಖಲಾಗಿರುತ್ತವೆ.

ಕರ್ನಾಟಕದ ಇತರ ಕಡೆಗೆ ಹೋಲಿಸಿದರೆ, ಕರಾವಳಿ ಪ್ರದೇಶದ ಸಂಸ್ಕೃತಿಯ ಚಿತ್ತಾರವು ತುಸು ವಿಶಿಷ್ಟವಾಗಿಯೇ ಇದೆ. ಇಲ್ಲಿನ ಭೂತಾರಾಧನೆ, ನಾಗಾರಾಧನೆ, ಸಿರಿ ಆರಾಧನೆ, ಕಂಬಳ, ಕೋಳಿ ಅಂಕ, ಚೆಂಡಾಟ, ಕಾಡ್ಯನಾಟ, ನಾಗಮಂಡಲ, ಯಕ್ಷಗಾನ, ಜಾತ್ರೆ ಅಲ್ಲದೆ ಭೌತಿಕ ವಸ್ತುಗಳಲ್ಲಿ ಒಂದೊಂದು ವಿಶಿಷ್ಟ ಇತಿಹಾಸವೇ ಅಡಗಿದೆ. ಕರಾವಳಿಯ ಆಹಾರ ಪದ್ಧತಿ, ಉಡುಗೆ–ತೊಡುಗೆ ಇನ್ನಿತರ ಅನೇಕ ವಿಚಾರಗಳಲ್ಲಿ ಸಂಸ್ಕೃತಿಯ ವೈಶಿಷ್ಟ್ಯಗಳು ಎದ್ದು ಕಾಣುವಂತಿದೆ. ಕರ್ನಾಟಕದ ಇತರ ಪ್ರದೇಶಗಳಿಂದ ಪ್ರತ್ಯೇಕ ಸ್ಥಾನಮಾನವನ್ನು ಈ ತುಳುನಾಡು ಪಡೆದುಕೊಂಡಿದೆ. ಇವರ ಕಾದಂಬರಿಗಳಲ್ಲಿ ಚಿತ್ರಿತಗೊಂಡ ಕರಾವಳಿ ಸಂಸ್ಕೃತಿಯ ಮಹತ್ವಪೂರ್ಣ ಅಂಶಗಳು ಆಧುನೀಕರಣದತ್ತ ಸಾಗುವಲ್ಲಿ ಆಗುವ ಪಲ್ಲಟದ ತಲ್ಲಣಗಳನ್ನು ಅಧ್ಯಯನಕ್ಕೊಳಪಡಿಸಿ ಚರ್ಚಿಸಲಾಗಿದೆ.

ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ತುಳುನಾಡನ್ನು ಕರ್ನಾಟಕ ಮತ್ತು ಕೇರಳದ ವಿಭಿನ್ನ ಸಾಂಸ್ಕೃತಿಕ ಸಂದರ್ಭದಲ್ಲಿ ಇಟ್ಟು ನೋಡಲು ಸಾಧ್ಯವಿದೆ. ಆಡಳಿತಾತ್ಮಕವಾಗಿ ತುಳು ಮಾತನಾಡುವವರು ಕನ್ನಡ ಮತ್ತು ಮಲಯಾಳಿ ಭಾಷೆ ಮಾತನಾಡುವವರು ಒಟ್ಟಿಗೆ ವಾಸಿಸುತ್ತಿದ್ದರೂ ಇವರ ಮನದ ಮಿಡಿತ ತುಳುನಾಡಿನ ಭೂತಾರಾಧನೆ, ನಾಗಾರಾಧನೆ, ಯಕ್ಷಗಾನ ಹಾಗೂ ಇಲ್ಲಿನ ಆಹಾರ ಪದ್ಧತಿ, ಉಡುಪು ಮತ್ತು ಕೃಷಿ ಪದ್ಧತಿಯನ್ನು ಆಧರಿಸಿಯೇ ಇದೆ. ತುಳುವರು ಸಾಂಸ್ಕೃತಿಕವಾಗಿ ಭಿನ್ನರೆಂಬುದಕ್ಕೆ ಚಾರಿತ್ರಿಕ ಹಿನ್ನೆಲೆಯೂ ಇದೆ. ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳನ್ನು ದೇಶೀವಾದದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದರೆ ಸಾಕಷ್ಟು ಅರ್ಥ ಪೂರ್ಣವಾದ ಹೊಳಹುಗಳು ಗೋಚರಿಸುತ್ತವೆ. ಇವರ ಕಾದಂಬರಿಗಳಲ್ಲಿ ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯು ಸಂಘರ್ಷಮಯ

ಆಗಿರದೆ, ಸಮನ್ವಯತೆ, ಸುಧಾರಣಾವಾದಿ ಹಾಗೂ ಪ್ರಗತಿಶೀಲ ನಿಲುವುಗಳು ಸ್ಪಷ್ಟವಾಗಿ ಕಾಣುತ್ತವೆ. ಕರಾವಳಿಯ ಪ್ರಾದೇಶಿಕ ಸಂಸ್ಕೃತಿಯ ವಿಶಿಷ್ಟತೆಯ ಅಂಶಗಳು ಇಲ್ಲಿಯ ಜನ ಸಮುದಾಯದ ಬದುಕನ್ನು ವೈವಿಧ್ಯಮಯವಾಗಿ ಹೇಗೆ ರೂಪಿಸಿವೆ? ಅದರ ಒಳಿತು ಕೆಡುಕುಗಳೇನು? ಯಾವ ರೀತಿಯ ಸಾಮಾಜಿಕ ವ್ಯವಸ್ಥೆ ಸಾಮರಸ್ಯವನ್ನು ಬೆಸೆಯಬಲ್ಲದು ಎಂಬಿತ್ಯಾದಿ ವಿಚಾರಗಳನ್ನ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಯ ಅಧ್ಯಯನದ ಮೂಲಕ ಅರಿಯುವ ಉದ್ದೇಶವನ್ನು ಈ ಸಂಶೋಧನಾ ಪ್ರಬಂಧ ಒಳಗೊಂಡಿದೆ.

ತುಳು ಸಂಸ್ಕೃತಿಯ ಅನುಭವಗಳನ್ನು ಕಾದಂಬರಿಗಳ ಮೂಲಕ ಕನ್ನಡಕ್ಕೆ ತಂದು ತುಳುನಾಡಿನ ಸಂಸ್ಕೃತಿಯ ಜೀವಂತಿಕೆಯು ಕನ್ನಡಕ್ಕೂ ಪಸರಿಸಿ ಪರಿಚಿಯಿಸುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ. ನೀರ್‌ಮಾರ್ಗ ಇವರು ಒಟ್ಟು ಇಪ್ಪತ್ತಮೂರು ಕಾದಂಬರಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಒಂದು ಕಾದಂಬರಿಯನ್ನು ತುಳುವಿನಲ್ಲಿ ಅಲ್ಲದೆ ಭೀಕರ ನ್ಯಾಯಕಟ್ಟೆ ಎಂಬ ನಾಟಕವನ್ನೂ ಬರೆದು ಪ್ರಕಟಿಸಿದ್ದಾರೆ. ಈ ಎಲ್ಲಾ ಕಾದಂಬರಿಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರಾದೇಶಿಕತೆ, ಪ್ರಾದೇಶಿಕ ಸಂಸ್ಕೃತಿ ಹಾಗೂ ಸ್ಥಳೀಯ ಜನಪದಗಳ ಅಂಶಗಳನ್ನು ಹೊಂದಿರುವುದನ್ನು ಕಾಣುತ್ತೇವೆ.

ಅವರ ಮೊದಲ ಕಾದಂಬರಿ 'ದಾಯಿತ್ವ' (೧೯೯೭) ೬೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡ ಕಾದಂಬರಿ. ಈ ಕಾದಂಬರಿಯಲ್ಲಿ ಲೇಖಕರು ನೀರ್‌ಮಾರ್ಗ ಮತ್ತು ಪಕ್ಕದ ಕೆಲವು ಗ್ರಾಮಗಳು ಆಧುನಿಕತೆಗೆ ತೆರೆದುಕೊಂಡ ಪ್ರಕ್ರಿಯೆಯನ್ನು ಹಲವಾರು ನೈಜ ಪಾತ್ರಗಳಲ್ಲಿ ಆಕರ್ಷಕ ಕಥಾನಕದಲ್ಲಿ ದಾಖಲಿಸಿದ್ದಾರೆ. ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ದಾಯಿತ್ವವನ್ನು ನಿಭಾಯಿಸದೆ ಹಿಂದೆ ಸರಿದುದರಿಂದ ಸಮಯ ಸಾಧಕರು ದೇಶದ ಚುಕ್ಕಾಣಿ ಹಿಡಿಯುವಂತಾಗಿ ನಾಡಿನ ಅಭದ್ರತೆಯ ಬಗ್ಗೆ ಕಾಡುವ ಚಿಂತನೆಯನ್ನು ಗಮನಿಸಲಾಗಿದೆ.

ಕರ್ನಾಟಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವ 'ತುಳುನಾಡು' ತನ್ನ ಸಾಂಸ್ಕೃತಿಕ ವಿಶಿಷ್ಟತೆಯಿಂದಾಗಿ ಗುರುತಿಸಬಹುದಾದ ಪ್ರತ್ಯೇಕ ಸ್ಥಾನವನ್ನು ಪಡೆದಿದೆ. ತುಳುನಾಡಿಗೆ ಭದ್ರ ಕೋಟೆಯಂತೆ ಒಂದೆಡೆ ಸಮುದ್ರ, ಇನ್ನೊಂದು ಕಡೆಯಲ್ಲಿ ಪಶ್ಚಿಮ ಘಟ್ಟದ ಸಾಲುಗಳು ನಿಂತಿವೆ. ಕರಾವಳಿ ಜನರ ಜೀವನೋಪಾಯಕ್ಕೆ ಈ ಕಾಡು-ಕಡಲು ಅತ್ಯಮೂಲ್ಯ ಕೊಡುಗೆಯನ್ನು ನೀಡಿವೆ. ಇಲ್ಲಿನ ಶಿಕ್ಷಣ, ವಿಜ್ಞಾನ, ಸಾಹಿತ್ಯ, ವ್ಯಾಪಾರ, ಜನಪದ ಕಲೆ, ಆರಾಧನೆ-ಆಚರಣೆ ಉಡುಗೆ-ತೊಡುಗೆ, ಕೃಷಿ, ಕ್ರೀಡೆ ಮೊದಲಾದವುಗಳೇ ತುಳುನಾಡು

ಇತರ ಪ್ರದೇಶಗಳಿಗಿಂತ ವಿಭಿನ್ನವಾಗಲು ಕಾರಣವಾಗಿದೆ. ಅತ್ಯುತ್ತಮ ಪ್ರಾಕೃತಿಕ ಸಂಪತ್ತನ್ನು ಹೊಂದಿರುವ ಈ ನಾಡಿನ ಜನ ಪ್ರಕೃತಿಯನ್ನು ಪೂಜ್ಯನೀಯವಾಗಿ ಕಾಣುತ್ತಾರೆ. ಈ ಎಲ್ಲಾ ಅತ್ಯುತ್ತಮ ಮೌಲ್ಯ ಹೊಂದಿದ ಕರಾವಳಿಯ ಬದುಕು ಒಳಗೊಂಡ ಸಂಸ್ಕೃತಿಯ ವೈಶಿಷ್ಟತೆಗಳನ್ನು ಪ್ರಭಾಕರ ನೀರ್‌ಮಾರ್ಗ ಅವರು ತನ್ನ ಕಾದಂಬರಿಗಳ ಮೂಲಕ ಜೀವಂತವಾಗಿರಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ಈ ಪ್ರದೇಶದ ಸಂಸ್ಕೃತಿಯ ಆದರ್ಶಯುತ ಮೌಲ್ಯಗಳನ್ನು ಗುರುತಿಸಿ ಅಧ್ಯಯನ ಮಾಡಿ ಮುಂದಿನ ಪೀಳಿಗೆಗೆ ತಲುಪಿಸುವ ಪ್ರಯತ್ನ ಮಾಡುವುದು ತುಂಬಾ ಅಗತ್ಯವಾಗಿದೆ.

ತುಳುನಾಡಿನಲ್ಲಿ ಹುಟ್ಟಿ ಬೆಳೆದ ಪ್ರಭಾಕರ ನೀರ್‌ಮಾರ್ಗರು ತನ್ನ ಪರಿಸರದೊಂದಿಗಿನ ಸ್ವಂತ ಅನುಭವಗಳನ್ನು ಹಾಗೂ ಹಿರಿಯರಿಂದ ಕೇಳಿ ತಿಳಿದ ಐತಿಹಾಸಿಕ ಘಟನೆಗಳನ್ನು ತುಳುನಾಡಿನ ಕ್ರಾಂತಿಯ ವಿಚಾರಗಳನ್ನು, ಮೌಖಿಕ ಚರಿತ್ರೆಯನ್ನು ಅವರು ಆತ್ಮಚರಿತ್ರೆಯಲ್ಲಿ ಹೇಳಿಕೊಂಡಂತೆ ಸ್ವತಃ ಅಧ್ಯಯನ ಮಾಡಿ ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ. ಪ್ರಭಾಕರ ನೀರ್‌ಮಾರ್ಗರ ಒಟ್ಟು ಇಪ್ಪತ್ತೊಂದು ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರಾವಳಿಯ ಮಹತ್ವದ ಕಲೆಯಾದ ಯಕ್ಷಗಾನ ಹಾಗೂ ಕಲೆಗಾರನ ಬದುಕಿನ ಒಳನೋಟಗಳನ್ನು ಲೇಖಕರು ಕಾದಂಬರಿಯಲ್ಲಿ ಮನ ತಟ್ಟುವಂತೆ ಚಿತ್ರಿಸಿದ್ದಾರೆ. ತುಳುನಾಡಿನ ಆರಾಧನೆ, ಆಚರಣೆ, ಕ್ರೀಡೆ ಇತ್ಯಾದಿ ಹಲವು ವಿಚಾರಗಳನ್ನು ಕಾದಂಬರಿಗಳಲ್ಲಿ ದಾಖಲಿಸಿ ಮುಂದಿನ ಜನಾಂಗಕ್ಕೆ ಕೊಂಡೊಯ್ಯುವ ಸೇತುವೆಯಾಗಿ ಇವರ ಕಾದಂಬರಿಗಳು ನಿಲ್ಲುತ್ತವೆ. ಇವರ ಕಾದಂಬರಿಗಳು ತುಳುನಾಡಿನ ಸಂಸ್ಕೃತಿಯ ಅಧ್ಯಯನದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹೊಸ ಹೊಳಪುಗಳನ್ನು ಮೂಡಿಸುತ್ತವೆ. ಇವರ ಕಾದಂಬರಿಗಳಲ್ಲಿ ಅಡಗಿರುವ ಕರಾವಳಿ ಪ್ರದೇಶದ ಸಂಸ್ಕೃತಿಯ ಹಲವು ಮುಖಗಳನ್ನು ಅಧ್ಯಯನದ ಮೂಲಕ ಶೋಧಿಸಿ ದಾಖಲಿಸುವತ್ತ ಗಮನಹರಿಸಲಾಗಿದೆ.

ಕಾದಂಬರಿಯಲ್ಲಿ ಚಿತ್ರಣಗೊಂಡ ಮಹಿಳಾ ಪ್ರಜ್ಞೆ ಆಧುನಿಕತೆಯ ಪರಿಣಾಮದಿಂದಾಗಿ ಜಾಗೃತಗೊಂಡು ಯಾವ ರೀತಿ ಎಚ್ಚೆತ್ತುಕೊಂಡಿದೆ ಎಂಬುದು ಒಂದು ಕಡೆಯಾದರೆ, ಇನ್ನೊಂದೆಡೆ ಪಾರಂಪರಿಕ ಸಂಪ್ರದಾಯಗಳ ಮೌಲ್ಯಗಳನ್ನು ಯಥಾಸ್ಥಿತಿಯಂತೆಯೇ ಅನುಕರಣೆಯನ್ನು ಮಾಡುವ ಮಹಿಳಾವರ್ಗ. ಈ ಎರಡರ ನಡುವಿರುವ ಸಂಘರ್ಷದ ಕಾರಣ ಪರಿಣಾಮವನ್ನು ಶೋಧಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಪುರುಷನಷ್ಟೇ ಪ್ರಾತಿನಿಧ್ಯ ಮಹಿಳೆ ಪಡೆದಿರುವಂತೆ ಕಂಡರೂ ಆಳದಲ್ಲಿ ಆಕೆ ಪುರುಷ ಪ್ರಧಾನ ವ್ಯವಸ್ಥೆಯಡಿ ಸಿಲುಕಿ ಹೇಗೆ ಒದ್ದಾಡುತ್ತಿದ್ದಾಳೆ ಎಂಬುದನ್ನು ಲೇಖಕರು ಸಂವೇದನಾತ್ಮಕವಾಗಿ ಕಾದಂಬರಿಯಲ್ಲಿ ದಾಖಲಿಸಿದ್ದು, ಇದಕ್ಕೆ ಕಾರಣ ಪರಿಣಾಮಗಳ ಚಿಂತನೆ ಪ್ರಸ್ತುತ ಸಂದರ್ಭದಲ್ಲಿ ತುಂಬಾ ಅಗತ್ಯವಾಗಿದೆ.

ಮಹಿಳೆ ಎರಡು ರೀತಿಯ ಅಸ್ಪೃಶ್ಯತೆಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾಳೆ. ಮೊದಲನೆಯದು ಹೆಣ್ಣಾಗಿ ಹುಟ್ಟಿರುವುದೇ ಒಂದು ಅಸ್ಪೃಶ್ಯತೆಯಾದರೆ, ಎರಡನೆಯದಾಗಿ ತಳಸಮುದಾಯದಲ್ಲಿ ಹುಟ್ಟಿದ ಹೆಣ್ಣು ಈ ಸಮಾಜದಲ್ಲಿ ಬದುಕು ಸಾಗಿಸುವುದೇ ಒಂದು ಕಠಿಣ ಪರೀಕ್ಷೆ. ಲೇಖಕರು ಓರ್ವ ಮಹಿಳೆ ಸುಶಿಕ್ಷಿತಳಾದರೆ ಈ ಎಲ್ಲಾ ಸಂಕಷ್ಟಗಳಿಗೆ ತಾನೇ ಹೇಗೆ ಪರಿಹಾರ ಕಂಡುಕೊಳ್ಳಬಹುದು ಎಂಬುದನ್ನು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಆಧುನಿಕತೆ ಎಂಬುದು ಮಹಿಳೆಗೆ ವರವೋ ಶಾಪವೋ ಎಂಬುದನ್ನು ಅರಿಯುವುದು ಅಗತ್ಯವಾಗಿದೆ.

ಅಧ್ಯಯನದ ಸ್ವರೂಪ:

ಸಂಪ್ರಬಂಧದ ಆರಂಭದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆಗಳ ಬಗ್ಗೆ ಚರ್ಚಿಸಲಾಗಿದೆ. ಹಾಗೂ ಅಧ್ಯಯನದ ಪ್ರಸ್ತುತೆಯನ್ನು ತಿಳಿಸಲಾಗಿದೆ. ಮೊದಲನೇ ಅಧ್ಯಾಯದಲ್ಲಿ ಸಂಸ್ಕೃತಿ ಎಂಬುದರ ವ್ಯಾಖ್ಯೆಯೊಂದಿಗೆ ಪ್ರದೇಶ, ಪ್ರಾದೇಶಿಕ, ಪ್ರಾದೇಶಿಕತೆಯ ಸ್ವರೂಪ, ಸಂಸ್ಕೃತಿ ಮತ್ತು ಕರಾವಳಿ ಕಥನ ಸಾಹಿತ್ಯದಲ್ಲಿ ಪ್ರಾದೇಶಿಕತೆ, ತುಳುನಾಡ ಪ್ರದೇಶವನ್ನು ಪ್ರತಿನಿಧೀಕರಿಸಿರುವ ಅಂಶಗಳ ಕುರಿತು ಅಧ್ಯಯನ ಮಾಡಲಾಗಿದೆ. ಕರಾವಳಿಯ ಕಥನ ಸಾಹಿತ್ಯದೊಂದಿಗೆ ಪ್ರಾದೇಶಿಕತೆಯು ಹೇಗೆ ಹಾಸು ಹೊಕ್ಕಾಗಿದೆ ಎಂಬ ಅಂಶವನ್ನು ಇಲ್ಲಿ ಗುರುತಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸಂರಚನೆ ಯಾವ ರೀತಿ ಬದುಕಿನ ವಿನ್ಯಾಸವನ್ನು ರಚಿಸಿವೆ ಎಂಬುದರ ಕುರಿತು ಚರ್ಚಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಅಡಗಿರುವ ಐತಿಹಾಸಿಕತೆ ಹಾಗೂ ಮೌಖಿಕ ಚರಿತ್ರೆಯ ಮಾದರಿಯನ್ನು ವಿವಿಧ ಆಕರಗಳೊಂದಿಗೆ ಅಧ್ಯಯನ ಮಾಡಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಕರಾವಳಿಯ ಆಚರಣಾತ್ಮಕ ಬದುಕು ಕಾದಂಬರಿಗಳಲ್ಲಿ ಯಾವ ರೀತಿ ಚಿತ್ರಿತಗೊಂಡಿದೆ ಎಂಬುದನ್ನು ಚರ್ಚಿಸಲಾಗಿದೆ. ಐದನೇ ಅಧ್ಯಾಯದಲ್ಲಿ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಜನಪದ

ರಂಗಭೂಮಿಯ ಪ್ರಭಾವದ ಬಗ್ಗೆ ಶೋಧಿಸಲಾಗಿದೆ. ಆರನೇ ಅಧ್ಯಾಯದಲಿ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಚಿತ್ರಣವನ್ನು ಸ್ತ್ರೀಯರ ಬದುಕಿನ ವಿವಿಧ ವಿನ್ಯಾಸಗಳೊಂದಿಗೆ ಅಧ್ಯಯನ ಮಾಡಲಾಗಿದೆ. ಏಳನೇ ಅಧ್ಯಾಯದಲ್ಲಿ ಭಾಷಿಕ ವಿಚಾರಗಳನ್ನು ವಿಶ್ಲೇಷಿಸಲಾಗಿದೆ. ಅನುಬಂಧದಲ್ಲಿ ಪ್ರಭಾಕರ ನೀರ್‌ಮಾರ್ಗರ ಸಾಹಿತ್ಯ ಪಥ ಮತ್ತು ಜೀವನದ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಯನದ ವೈಧಾನಿಕತೆ:

'ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಪ್ರತಿನಿಧೀಕರಣ' ಎಂಬ ಈ ಸಂಶೋಧನಾ ಮಹಾಪ್ರಬಂಧವು ಒಂದು ಪ್ರದೇಶ ಕೇಂದ್ರಿತ ಅಧ್ಯಯನವಾಗಿದೆ. ಕರ್ನಾಟಕ ಕರಾವಳಿಯ 'ತುಳುನಾಡು' ಎಂಬ ಪ್ರದೇಶವನ್ನು ಪ್ರತಿನಿಧಿಸುವ ಸಂಸ್ಕೃತಿಯನ್ನು ನೀರ್‌ಮಾರ್ಗರ ಕಾದಂಬರಿಗಳ ಮೂಲಕ ಅಧ್ಯಯನ ಮಾಡಲಾಗಿದೆ. ಅಧ್ಯಯನದಲ್ಲಿ ಗ್ರಂಥಸ್ಥ ಆಕರ ಮತ್ತು ಕಂಠಸ್ಥ ಆಕರಗಳಿಗೆ ಹೆಚ್ಚಿನ ಗಮನಹರಿಸಲಾಗಿದೆ. 'ಸಂಸ್ಕೃತಿ' ಎಂಬ ಪದ ಯಾವ ರೀತಿಯ ಅರ್ಥವನ್ನು ಪಡೆದಿದೆ ಎಂಬುದನ್ನು ವಿಮರ್ಶಾತ್ಮಕವಾಗಿ ಅಧ್ಯಯನಕ್ಕೊಳಪಡಿಸಲಾಗಿದೆ. ಇವರ ಕಾದಂಬರಿಗಳಲ್ಲಿ ದಾಖಲಾದ ಸ್ಥಳನಾಮಗಳ ವೈಶಿಷ್ಟ್ಯತೆಯನ್ನು ಆ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ. ಕರಾವಳಿಯ ಪ್ರಮುಖ ಕೆಲವು ವಿದ್ವಾಂಸರೊಂದಿಗೆ ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಕಾದಂಬರಿಯಲ್ಲಿ ಚಿತ್ರಿಸಿದ ಸಂಸ್ಕೃತಿಯ ಘಟಕಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲಿಸಿ ತುಲನಾತ್ಮಕ ಮಾರ್ಗದಿಂದ ಇವರ ಕಾದಂಬರಿಗಳಲ್ಲಿ ಚಿತ್ರಿಸಿರುವ ಸಂಸ್ಕೃತಿಯ ಸ್ವರೂಪವನ್ನು ಗುರುತಿಸಲಾಗಿದೆ. ಪ್ರಭಾಕರ ನೀರ್‌ಮಾರ್ಗ ಅವರು ಚಿತ್ರಿಸಿದ ಯಕ್ಷಗಾನ, ಭೂತಾರಾಧನೆ, ನಾಗರಾಧನೆ, ಕುಣಿತ, ಕಂಬುಲ, ಕುಸ್ತಿಯಂತಹ ಸಂಸ್ಕೃತಿಯ ಘಟಕಗಳನ್ನು ವಸ್ತುವಾಗಿ ಉಳ್ಳ ಕಾದಂಬರಿಗಳನ್ನು ಇತರ ಲೇಖಕರು ಬರೆದ ಅಂತಹದೇ ಸಂಸ್ಕೃತಿಯ ಘಟಕಗಳನ್ನು ಪರಿಶೀಲಿಸಿ ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನ ವಿಧಾನವು, ಒಂದು ದೇಶ ಅಥವಾ ಪ್ರಾಂತ್ಯದ ಸಂಸ್ಕೃತಿಯ ಅಧ್ಯಯನ ನಡೆಸುವ ವಿಧಾನಗಳಿಗಿಂತ ಹಲವು ರೀತಿಯ ಭಿನ್ನತೆ ಮತ್ತು

ವೈಶಿಷ್ಟ್ಯತೆಗಳನ್ನು ಹೊಂದಿರುತ್ತದೆ. ಒಂದು ನಿರ್ದಿಷ್ಟ ಪ್ರದೇಶವನ್ನು ಪ್ರಾದೇಶಿಕ ಅಧ್ಯಯನವು ಅತ್ಯಂತ ಸೂಕ್ಷ್ಮ ಹಾಗೂ ಸಂಕೀರ್ಣ ಆಯಾಮಗಳೊಂದಿಗೆ ದಾಖಲಿಸುತ್ತದೆ.

ಒಂದು ಪ್ರದೇಶ ಒಳಗೊಂಡಿರುವ ಬೆಟ್ಟ ಗುಡ್ಡಗಳು, ಹೊಲಗದ್ದೆ, ಸಮುದ್ರ, ರಸ್ತೆ, ಮನೆ, ಮಠ, ಸಮುದಾಯಗಳು ಆಡುವ ಭಾಷೆ, ದಿನನಿತ್ಯದ ಸಂಪ್ರದಾಯಗಳೊಂದಿಗೆ ಅವರು ಬದುಕುವ ರೀತಿ, ಕಲ್ಪನೆ ಕನಸುಗಳೊಂದಿಗೆ ಅವರು ಯಾವ ರೀತಿ ಇಡೀ ದಿನವನ್ನು ಕಳೆಯುತ್ತಾರೆ ಎಂಬುದು ಈ ಅಧ್ಯಯನಕ್ಕೆ ಮುಖ್ಯವಾಗುತ್ತದೆ. ಈ ಸಾಂಸ್ಕೃತಿಕ ಅಂಶಗಳು ಸಮಾಜಕ್ಕೆ ಹೇಗೆ ಸ್ಫೂರ್ತಿಯಾಗಬಲ್ಲದು, ತಲ್ಲಣಗಳಿಗೆ ಕಾರಣವಾಗಬಹುದು ಎಂಬ ಪರಿಣಾಮದ ಚಿಂತನೆ ಯಾವ ಹಂತಕ್ಕೆ ತಲುಪಬಹುದು ಎಂಬ ವಿಚಾರಗಳನ್ನು ನೀರ್‌ಮಾರ್ಗರ ಕಾದಂಬರಿಗಳ ಮೂಲಕ ತಾತ್ವಿಕ ಹಾಗೂ ಸೈದ್ಧಾಂತಿಕ ವಿವೇಚನೆಗಳನ್ನು ಬಳಸಿಕೊಂಡು ವಿವರಿಸುವ, ವಿಮರ್ಶಿಸುವ, ವಿಶ್ಲೇಷಿಸುವ, ತೌಲನಿಕಗೊಳಿಸುವ ಮಾನದಂಡಗಳನ್ನು ಇಡೀ ಅಧ್ಯಯನದೊಳಗೆ ಪ್ರಜ್ಞಾಪೂರ್ವಕವಾಗಿ ಬಳಸುವ ಯತ್ನ ಮಾಡಲಾಗಿದೆ. ಒಟ್ಟಾರೆಯಾಗಿ ವಿವರಣಾತ್ಮಕ, ವಿಮರ್ಶಾತ್ಮಕ, ತುಲನಾತ್ಮಕ, ವ್ಯಕ್ತಿನಿಷ್ಠ, ವಸ್ತುನಿಷ್ಠ ಸಂದರ್ಶನಗಳಂತಹ ವಿಧಾನಗಳಿಂದ ನೀರ್‌ಮಾರ್ಗರ ಕಾದಂಬರಿಗಳು ಕರಾವಳಿ ಪ್ರದೇಶದಲ್ಲಿ ಸಾಂಸ್ಕೃತಿಕವಾಗಿ ಪ್ರತಿನಿಧಿಸುವ ಅಂಶಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಪೂರ್ವಾಧ್ಯಯನಗಳ ಸಮೀಕ್ಷೆ:

ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳನ್ನು ಕೇಂದ್ರವಾಗಿರಿಸಿಕೊಂಡು ಕರಾವಳಿ ಪ್ರಾದೇಶಿಕ ಸಂಸ್ಕೃತಿಯ ಬಹು ನೆಲೆಗಳನ್ನು ವಿಭಿನ್ನ ಸ್ತರಗಳಿಂದ ಅಭ್ಯಾಸ ಮಾಡಿಕೊಳ್ಳುವ ಅನೇಕ ಸಾಧ್ಯತೆಗಳು ಇವೆ. ಇಲ್ಲಿನ ಸಾಂಸ್ಕೃತಿಕ ಬದುಕಿನ ಹಿರಿಮೆ ಮತ್ತು ಪಲ್ಲಟದ ನೆಲೆಗಳನ್ನು ಕರಾವಳಿ ಕಾದಂಬರಿಗಳು ನಿರ್ವಹಿಸಿದ ಬಗೆಯನ್ನು ಅಧ್ಯಯನ ನಡೆಸಲಾಗಿದೆ. ಇಲ್ಲಿನ ಸಮುದಾಯಗಳ, ನಂಬಿಕೆಗಳ, ಆಚರಣೆಗಳ ಕುಣಿತಗಳ ಕುರಿತ ಇವರ ದೃಷ್ಟಿಕೋನ ಅತ್ಯಂತ ಸೂಕ್ಷ್ಮವಾದದ್ದು. ಅಂಚಿಗೆ ತಳ್ಳಲ್ಪಟ್ಟ ಹತ್ತು ಹಲವು ಸಾಂಸ್ಕೃತಿಕ ಸಂಗತಿಗಳು ಇವರ ಬರಹಗಳ ಮೂಲಕ ಬೆಳಕು ಕಂಡಿವೆ. ಇವರ ಕಾದಂಬರಿಗಳಲ್ಲಿ ಅಂತರ್ಗತವಾಗಿರುವ ಸಾಂಸ್ಕೃತಿಕ ವಿವರಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಕರಾವಳಿ ಬದುಕು ಮತ್ತು ಸಂಸ್ಕೃತಿಯ ಕುರಿತು ತಳಸ್ಪರ್ಶಿಯಾದ ಅಧ್ಯಯನ ನಡೆಸಲು ಸಾಧ್ಯವಿದೆ. ಇವರು ಕಳೆದ ಸುಮಾರು ಎರಡು ದಶಕದ ಹಿಂದೆ ಕಾದಂಬರಿಕಾರನಾಗಿ ಸಾರಸ್ವತ ಲೋಕದಲ್ಲಿ ಕಾಣಿಸಿಕೊಂಡವರು. ಆದರೆ ಅವರು ಬೆಳೆದಿರುವ ವೇಗ ಬೆರಗು ಹುಟ್ಟಿಸುತ್ತದೆ. ಅವರು

ಕೃತಿಯಿಂದ ಕೃತಿಗೆ ಬೆಳೆದ ರೀತಿ, ಆಯ್ದುಕೊಂಡ ವಿಭಿನ್ನ ಕಥಾವಸ್ತುಗಳು, ಅದರ ನಿರ್ವಹಣೆ ಅಸಾಧಾರಣವಾದುದು. ತನ್ನ ಯೋಚನೆ ಮತ್ತು ಅನುಭವಕ್ಕೆ ಬಂದ ಅನೇಕ ಸಂಗತಿಗಳನ್ನು ಕಥನವಾಗಿಸಿದ್ದಾರೆ. ಈವರೆಗಿನ ತುಳು ಅಧ್ಯಯನ ಮತ್ತು ಸಂಶೋಧನೆಗಳು ಗಮನಹರಿಸದ ಹೊಸ ಒಳನೋಟಗಳು ಕಾದಂಬರಿಗಳಲ್ಲಿದೆ. ದೇಶೀ ಸಂಸ್ಕೃತಿಯ ನೆಲೆಯ ತಂತುಗಳು ಇವರ ಕಾದಂಬರಿಗಳಲ್ಲಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಅವಗಣನೆಗೆ ಒಳಗಾಗಿದ್ದ ಅನೇಕ ವಿಷಯಗಳು ಇವರ ಕಾದಂಬರಿಯೊಳಗೆ ಜೀವಂತವಾಗಿ ಕಾಣಿಸಿಕೊಂಡಿದೆ. ಸಮಾಜದ ಪ್ರಧಾನ ವಲಯದಿಂದ ಹೊರಗುಳಿದಿದ್ದ ಅಸ್ಪೃಶ್ಯ ಲೋಕವನ್ನು ತನ್ನ ಕಥನದೊಳಗೆ ಅನಾವರಣಗೊಳಿಸಿದ್ದಾರೆ. ಪ್ರಭಾಕರ ನೀರ್‌ಮಾರ್ಗ ಅವರ ಸಾಹಿತ್ಯದ ಕುರಿತಾಗಿ ದೊಡ್ಡ ಮಟ್ಟದ ಅಧ್ಯಯನ ನಡೆದಿಲ್ಲ. ಪ್ರತಾಪಚಂದ್ರ ಶೆಟ್ಟಿ ಹಳ್ನಾಡು ಇವರ ಸಂಪಾದಕತ್ವವದಲ್ಲಿ ೨೦೧೮ರಲ್ಲಿ ಬಂದಿರುವ 'ನೆಲದ ದನಿ– ನೆನಪಿನಂಗಳದಲ್ಲಿ ಪ್ರಭಾಕರ ನೀರ್‌ಮಾರ್ಗರ ಬದುಕು ಬರಹ' ಎನ್ನುವ ಕೃತಿ ಪ್ರಕಟಗೊಂಡಿದೆ.

ಈ ಕೃತಿಯ ಆರಂಭದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸೃಜನಶೀಲ ಸಾಹಿತ್ಯ ಎನ್ನುವ ಭಾಗದಲ್ಲಿ ಪ್ರಾದೇಶಿಕತೆಯ ಕುರಿತು ಸಂಪಾದಕರು ಬರೆದಿರುವ ಲೇಖನಗಳಿವೆ. ಭಾಗ ಎರಡರಲ್ಲಿ 'ಪ್ರಭಾಕರ ನೀರ್‌ಮಾರ್ಗ: ಸಾಹಿತ್ಯ ಪಥ' ಎಂಬ ವಿಷಯದಲ್ಲಿ ಕರಾವಳಿಯ ಮಹತ್ವದ ವಿದ್ವಾಂಸರಾದ ಅಮೃತ ಸೋಮೇಶ್ವರ, ಚಿನ್ನಪ್ಪ ಗೌಡ, ಬಿ. ಶಿವರಾಮ ಶೆಟ್ಟಿ, ಗಣನಾಥ್ ಎಕ್ಕಾರ್, ಬಿ.ಜನಾರ್ಧನ ಭಟ್, ನಾಗಪ್ಪ ಗೌಡ ಆರ್. ಮುಂತಾದವರು ಪ್ರಭಾಕರ ನೀರ್‌ಮಾರ್ಗರ ಕುರಿತಾಗಿ ಬರೆದ ಬರಹಗಳಿವೆ. ಈ ಬರಹಗಳು ಸಂಶೋಧಕರಿಗೆ ತೋರ್ ಬೆರಳಾಗಿ ದಾರಿ ತೋರಿಸುತ್ತದೆ.

'ನೀರ್‌ಮಾರ್ಗರ ಕಾದಂಬರಿಗಳ ವಿಭಿನ್ನ ಓದು' ಎನ್ನುವ ಭಾಗದಲ್ಲಿ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ವಿಮರ್ಶೆಗಳಿವೆ. ನಾಡಿನ ಸಂಸ್ಕೃತಿಯ ಬಗ್ಗೆ ಬರೆದ ಲೇಖಕರು ನೀರ್‌ಮಾರ್ಗರ ಕಾದಂಬರಿಗಳನ್ನು ಮೆಚ್ಚಿ ಬರೆದಿರುವ ಈ ಪ್ರಬಂಧಗಳು ಸಂಶೋಧನೆಯ ದೃಷ್ಟಿಕೋನದಿಂದ ಕೂಡಿದೆ. ಭಾಗ ನಾಲ್ಕರಲ್ಲಿ 'ನೀರ್‌ಮಾರ್ಗರ ಸಾರ್ವಜನಿಕ ಬದುಕು: ಮುಕ್ತ ಸ್ಪಂದನ'ದಲ್ಲಿ ಪ್ರಭಾಕರ ನೀರ್‌ಮಾರ್ಗರನ್ನು ಹತ್ತಿರದಿಂದ ಬಲ್ಲ ಅವರ ಹಿತೈಷಿಗಳು ಬರೆದ ಲೇಖನಗಳಿವೆ. ಉದಯ ಬಾರ್ಕೂರು, ಸತ್ಯನಾರಾಯಣ ಮಲ್ಲಿಪಟ್ಟಣ, ಪಿ.ಎಲ್ ಧರ್ಮ ಮುದ್ದುಮೂಡುಬೆಳ್ಳೆ, ಜಾನಕಿ ಬ್ರಹ್ಮಾವರ, ಬಿ. ಎಂ.

ರೋಹಿಣಿ, ಕಿಶೋರ್ ಕುಮಾರ್ ಸಿ.ಕೆ, ಬಿ. ಸುರೇಂದ್ರ ರಾವ್, ಮುಂತಾದ ಒಡನಾಡಿಗಳ ಕಾದಂಬರಿಕಾರರ ಬಗ್ಗೆ ಬರೆದ ಬರಹ.

ಕಿಟ್ಟು ಕೆ. ಎಂಬ ಸಂಶೋಧಕರು ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ಕುರಿತಾಗಿ "ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ತುಳುವ ಸಂಸ್ಕೃತಿಯ ಪ್ರತಿನಿಧೀಕರಣ" ಎಂಬ ವಿಷಯದ ಮೇಲೆ ಪ್ರಬಂಧ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇಲ್ಲಿಗೆ ಸಲ್ಲಿಸಿ ಎಂ. ಫಿಲ್ ಪದವಿ ಪಡೆದುಕೊಂಡಿದ್ದಾರೆ. ಇವರ ಪ್ರಬಂಧದಲ್ಲಿ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಪ್ರಕಟಗೊಂಡಿರುವ ತುಳುನಾಡಿನ ಪ್ರಾದೇಶಿಕತೆ, ತುಳುನಾಡಿನ ಸಾಮಾಜಿಕ ಸ್ವರೂಪ, ನಂಬಿಕೆ ಮತ್ತು ಆಚರಣೆಗಳು, ಪ್ರದರ್ಶನ ಕಲೆಗಳು ಮತ್ತು ಆಚರಣೆಗಳು, ಸಾಮಾಜಿಕ ವ್ಯವಸ್ಥೆ, ತುಳುನಾಡಿನ ಧಾರ್ಮಿಕ ಸ್ವರೂಪ, ಭೂತಾರಾಧನೆ, ನಾಗಾರಾಧನೆ ಮುಂತಾದ ಆಚರಣೆಗಳಿಗೆ ಸಂಬಂಧಿಸಿದ ಸಂಶೋಧನಾತ್ಮಕ ಚಿಂತನೆಗಳನ್ನು ಒಳಗೊಂಡಿದೆ.

ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳನ್ನು ಹಿನ್ನಲೆಯಾಗಿಟ್ಟುಕೊಂಡು 'ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ', ಹಾಗೂ 'ಸಂಸ್ಕೃತಿ ಜಾತ್ರೆ' ಎಂಬ ಎರಡು ಕೃತಿಗಳು ಪ್ರಕಟಗೊಂಡಿವೆ. ಹಾಗೂ ಕನ್ನಡದ ವಿವಿಧ ನಿಯತಕಾಲಿಕಗಳಲ್ಲಿ ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳಿಗೆ ಸಂಬಂಧಿಸಿ ಹಲವು ಲೇಖನಗಳು ಪ್ರಕಟಗೊಂಡಿವೆ.

ಕರಾವಳಿಯ ಅಪರೂಪದ ಲೇಖಕರಾಗಿರುವ ಪ್ರಭಾಕರ ನೀರ್‌ಮಾರ್ಗ ಇವರ ಕಾದಂಬರಿಗಳಲ್ಲಿ ಚಿತ್ರಿತಗೊಂಡಿರುವ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಸಂಸ್ಕೃತಿಯ ಒಳಗಣ್ಣಿನಿಂದ ನೋಡಿದಾಗ ಕಂಡುಕೊಂಡ ಹೊಳಹುಗಳನ್ನು 'ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಪ್ರತಿನಿಧೀಕರಣ' ಎಂಬ ವಿಷಯದ ಮೂಲಕ ಶೋಧನೆಗೊಳಪಡಿಸಲಾಗಿದೆ.

ಅಧ್ಯಾಯ ೧

ಪ್ರದೇಶ, ಪ್ರಾದೇಶಿಕತೆ ಮತ್ತು ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ

೧.೧ ಪ್ರದೇಶ:

'ಪ್ರದೇಶ' ಎಂಬ ಪರಿಕಲ್ಪನೆಯು ಭೌಗೋಳಿಕ ಆಯಾಮ ಹೊಂದಿದ ಒಂದು ಕೇಂದ್ರ ಭಾಗವಾಗಿದೆ. ಒಂದು ಭೌಗೋಳಿಕ ಪ್ರದೇಶ ಅಲ್ಲಿಯ ವಿವಿಧ ಜನಾಂಗ, ಭಾಷೆ, ಆಚಾರ, ವಿಚಾರ ಕ್ರಮಗಳು, ಆರಾಧನಾ ಕ್ರಮ, ಆಹಾರ ಕ್ರಮ, ವೃತ್ತಿ, ಆಡಳಿತವರ್ಗ, ನಂಬಿಕೆ, ಸಂಪ್ರದಾಯ, ಜನಪದ ಕಲೆಗಳು, ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಅನನ್ಯತೆಗಳಿಗೆ ಗಮನ ಹರಿಸಿ ಸಂಸ್ಕೃತಿಯ ವಿಶೇಷತೆಗಳನ್ನು ಗುರುತಿಸುವ ಕೆಲಸಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತವೆ.

೧.೨ ಪ್ರಾದೇಶಿಕತೆ:

ಪ್ರಾದೇಶಿಕತೆ ಅಥವಾ ಸ್ಥಳೀಯತೆ (Regionalism and Local colour) ಸಲೀಸಾಗಿ ಬಳಸಬಹುದಾದ ಪದಗಳಾಗಿವೆ. ಕಾಲ್ಪನಿಕವಾದ ಸ್ಥಳನಾಮಗಳನ್ನಿಟ್ಟುಕೊಂಡೇ ಸ್ಥಳೀಯವಾದ ಆಹಾರ ವಿಹಾರ, ಉಡುಗೆ ತೊಡುಗೆ, ಹಬ್ಬ ಹರಿದಿನಗಳನ್ನು ಕೃತಿಯ ಒಡಲಿನಲ್ಲಿ ತರುವ ಪ್ರವೃತ್ತಿಯನ್ನು ನಾವು ಹೆಚ್ಚಿನ ಕಾದಂಬರಿಗಳಲ್ಲಿ ಕಾಣುತ್ತೇವೆ. ಇದನ್ನು 'ಸ್ಥಳೀಯತೆ' ಎಂದು ಕರೆಯಲಾಗಿದೆ. ಆದರೆ ಪ್ರಾದೇಶಿಕ ಕಾದಂಬರಿಗಳಲ್ಲಿ ಇದಕ್ಕಿಂತ ಭಿನ್ನವಾಗಿ ಇಡೀ ಆವರಣವೇ ಪ್ರಾದೇಶಿಕತೆಯನ್ನು ಹೊಂದಿರುತ್ತದೆ. ಪ್ರಾದೇಶಿಕತೆ ಅದರ 'ಕೇಂದ್ರ', 'ಪರಿಧಿ' ಎಲ್ಲವೂ ಆಗಿರುತ್ತದೆ.

೧.೩ ಪ್ರಾದೇಶಿಕ ಕಾದಂಬರಿಗಳ ಸ್ವರೂಪ:

'ಪ್ರಾದೇಶಿಕತೆ' ಎಂಬುದು ಸಾಹಿತ್ಯದ ಜೀವನಾಡಿ. ಪ್ರಾದೇಶಿಕತೆ ಎಂಬ ಪರಿಕಲ್ಪನೆಯು ಒಂದರ್ಥದಲ್ಲಿ ವ್ಯಕ್ತಿಯೋರ್ವ ನಿರ್ದಿಷ್ಟ ಪ್ರದೇಶದ ಜನಸಮುದಾಯದೊಡನೆ ಹೊಂದಿರುವ ಅಂತರ ಸಂಬಂಧದ ನೆಲೆಗಳನ್ನು ಸಂಕೇತಿಸುತ್ತದೆ. ಒಂದು ಪ್ರದೇಶದ ಜನರು ಆಚರಿಸುವ ವಾರ್ಷಿಕಾವರ್ತನ, ಜೀವನಾವರ್ತನದಂತಹ ಆಚರಣೆ, ಆರಾಧನೆ, ನಂಬಿಕೆ, ನಡವಳಿಕೆಗಳಂತಹ ಜೀವನ ವಿಧಾನಗಳ ಮೂಲಕ ಪ್ರಾದೇಶಿಕತೆಯ ನೆಲೆಗಳನ್ನು ಅರ್ಥೈಸಿಕೊಳ್ಳಬಹುದು. ಪ್ರಾದೇಶಿಕತೆಯು ಒಂದು ಪ್ರದೇಶದ ಅನನ್ಯ ಹಾಗೂ ವಿಶಿಷ್ಟ ಅಂಶಗಳನ್ನು ಶೋಧಿಸುತ್ತದೆ. ಒಂದು ಪ್ರದೇಶದ ಸಂಸ್ಕೃತಿಯ ದಾಖಲೀಕರಣವೇ ಪ್ರಾದೇಶಿಕತೆ.

೧.೪ ಕರಾವಳಿ ಕಥನಗಳಲ್ಲಿ ಪ್ರಾದೇಶಿಕತೆ ಮತ್ತು ಸಂಸ್ಕೃತಿ:

ಸುಮಾರು ಒಂದು ಶತಮಾನದಷ್ಟು ಸುಧೀರ್ಘ ಚರಿತ್ರೆಯನ್ನು ಹೊಂದಿರುವ ಆಧುನಿಕ ಕನ್ನಡ ಕಾದಂಬರಿಗೆ ಕರ್ನಾಟಕದ ಕರಾವಳಿ ಲೇಖಕರು ಮತ್ತು ಕೃತಿಗಳ ಕೊಡುಗೆ ಅತ್ಯಂತ ನಿರ್ಣಾಯಕವೆನಿಸಿದ ಕರಾವಳಿ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಕೇಂದ್ರಿತ ಜೀವನಕ್ರಮ ಒಂದರ್ಥದಲ್ಲಿ ನಿಸರ್ಗದಲ್ಲಿ ಯಜಮಾನಿಕೆ ಎನ್ನಬಹುದ. ಕುವೆಂಪು, ಕಾರಂತರು, ಶಂಕರಭಟ್ಟರು, ಚವುಡರು, ಜನಾರ್ಧನ ಗುರ್ಕಾರ, ಭಾರತೀಸುತ, ಶೇಷನಾರಾಯಣ, ಎಚ್ ನಾಗವೇಣಿಯವರ 'ಗಾಂಧಿ ಬಂದ' ಕೆ.ವಿ ಅವರ 'ಬಾಡ' ಜನಾರ್ಧನ ಭಟ್ ಅವರ 'ಉತ್ತರಾಧಿಕಾರಿ', ಡಾ. ನಾ. ಮೊಗಸಾಲೆ ಅವರ ಉಲ್ಲಂಘನೆ, ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿಯ ತೀರದಲ್ಲಿ, ವೈದೇಹಿ ಅವರ 'ಅಸ್ಪೃಶ್ಯ, ಮಿತ್ರಾ ವೆಂಕಟ್ರಾಜ್‌ವರ 'ಹಕ್ಕಿ ಮತ್ತು ಅವಳು' ಇವುಗಳನ್ನೂ ದಾಟಿ ನೂರಾರು ಸಂಖ್ಯೆಯ ಕೃತಿಗಳು ಕರಾವಳಿಯ ಪ್ರದೇಶದ ಜಗತ್ತನ್ನು ಪರಿಸಯಿಸುತ್ತದೆ.

೧.೫ ತುಳುನಾಡಿನ ಪ್ರಾದೇಶಿಕ ವ್ಯಾಪ್ತಿ:

ಕರ್ನಾಟಕದ ಕರಾವಳಿಯಲ್ಲಿರುವ ತುಳುನಾಡು ಪ್ರದೇಶವು ಭೌಗೋಳಿಕವಾಗಿ ಅದರದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಇಲ್ಲಿನ ಪ್ರಕೃತಿ ಸೌಂದರ್ಯ ಕಾಡು ಮತ್ತು ನೀರಿನಿಂದಾಗಿ ಇತರ ಪ್ರದೇಶಗಳಿಗಿಂತ ಪ್ರತ್ಯೇಕ ಸ್ಥಾನವನ್ನು ಪಡೆದುಕೊಂಡಿದೆ.

ತುಳುನಾಡಿನ ಭೂಪ್ರದೇಶವು ತುಳುವ, ತುಳವನಾಡು, ತುಳು ದೇಶ ಎಂಬುದಾಗಿಯೂ ಕರೆಯಲ್ಪಡುವ ಈ ಪ್ರದೇಶ, ಪರಂಪರಾತ್ಮಕ ಹೇಳಿಕೆಗಳ ಪ್ರಕಾರ ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ದಕ್ಷಿಣದಲ್ಲಿ ಚಂದ್ರಗಿರಿ ನದಿಯಿಂದ ಉತ್ತರದಲ್ಲಿ ಕಲ್ಯಾಣಪುರದವರೆಗೆ ಇರುವ ಕರಾವಳಿ 'ಪ್ರದೇಶ' ತುಳುನಾಡು ಎಂದು ಕರೆಯಲ್ಪಡುತ್ತಿತ್ತು. ಈ ರೀತಿಯ ಪ್ರಾಕೃತಿಕ ಗಡಿಯನ್ನು ಹೊಂದಿದ ತುಳುನಾಡು ಕರ್ನಾಟಕದ ಇತರ ಭಾಗಗಳಿಂದ ಬಹಳ ಕಾಲ ಬೇರೆಯಾಗಿ ಇತ್ತು. ಇದು ತನ್ನದೇ ಆದ ಸಂಸ್ಕೃತಿ, ನಡೆನುಡಿ, ಆಚಾರ ವಿಚಾರಗಳನ್ನು ಹೊಂದಿದ್ದು, ಪ್ರಪಂಚದ ನಕ್ಷೆಯಲ್ಲಿ ತುಳುನಾಡೆಂಬ ಪ್ರದೇಶವಾಗಿ ಗುರುತಿಸಿಕೊಳ್ಳುವಂತಾಗಿದೆ.

ಅಧ್ಯಾಯ ೨

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸಂರಚನೆ

೨.೧ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ಪ್ರಾದೇಶಿಕತೆಯ ಕುರಿತು ಸ್ಥೂಲವಾದ ಅವಲೋಕನ:

'ದಾಯಿತ್ವ' ಕಾದಂಬರಿ ಮಂಗಳೂರಿನ ನೀರ್‌ಮಾರ್ಗ ಮತ್ತು ಸುತ್ತಮುತ್ತಲಿನ ಹಳ್ಳಿಗಳು ಆಧುನಿಕತೆಗೆ ತೆರೆದುಕೊಂಡ ಸಂದರ್ಭದ ಕಥನವನ್ನು ಒಳಗೊಂಡಿದೆ, ನೀರ್‌ಮಾರ್ಗರ 'ಶಿಶಿರ' ಕಾದಂಬರಿಯ ಕತೆಯು ಒಂದು ಋತುವನ್ನು ಪ್ರತಿನಿಧಿಸುತ್ತದೆ. 'ಪ್ರತಿಶೋಧ' ಕಾದಂಬರಿ 'ದಾಯಿತ್ವ'(ಜವಾಬ್ದಾರಿ)ಸದ ಇನ್ನೊಂದು ಮುಖ ಎಂದು ಕರೆಯಬಹುದು. ಆ ಕಾದಂಬರಿಯಲ್ಲಿ ಚಿತ್ರಿಸಲಾಗದ ಇನ್ನೊಂದು ಮುಖವೂ ಸ್ವಾತಂತ್ರ್ಯೋತ್ತರ ಭಾರತಕ್ಕಿದೆ. 'ತಿಲ್ಲಾನ' ಕಾದಂಬರಿಯಲ್ಲಿ ಮನೋರಂಜನೆ, ರಕ್ಷಣೆ, ಚಿಕಿತ್ಸೆ, ಇವನ್ನು ಮುಪ್ಪುರಿಗೊಳಿಸಿ ತುಳುವ ಬದುಕನ್ನು ಬಲಯುತಗೊಳಿಸಿದ ಭೂತಾರಾಧನೆಯ ವಿವಿಧ ನೆಲೆಗಳನ್ನು, ಅನಾವರಣಗೊಳಿಸಿದೆ. ತುಳು ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸುವ ಇನ್ನೊಂದು ಕಾದಂಬರಿ 'ಧೀಂಗಿಣ'. 'ಅರ್ಘ್ಯ' ಕಾದಂಬರಿ ತುಳುನಾಡಿನ ಹಳ್ಳಿಯೊಂದರ ಚಿತ್ರಣವಾಗಿದೆ. ನಂತರ ಪ್ರಕಟವಾದ ಕಾದಂಬರಿ 'ತಂಬಿಲ'. ತುಳುನಾಡಿನ ಮೂಲ ಆರಾಧನೆಯಾದ ನಾಗಾರಾಧನೆಯ ವಸ್ತುವನ್ನು ಕೇಂದ್ರವಾಗಿರಿಸಿಕೊಂಡ ಕಾದಂಬರಿಯಾಗಿದೆ. ಪ್ರಭಾಕರ ನೀರ್‌ಮಾರ್ಗರ 'ಕಂಬುಲ' ಕಾದಂಬರಿಯಲ್ಲಿ ತುಳುನಾಡಿನ ಜನಪದ ಕ್ರೀಡೆಯಾದ ಕಂಬಲವನ್ನು ಸಾಂಕೇತಿಕವಾಗಿ ಉಲ್ಲೇಖಿಸಿ ಆ ಕ್ರೀಡೆ ಪ್ರತಿಷ್ಠೆಯ ಸಂಕೇತವಾಗಿ ಹೇಗೆ ಜನಮನವನ್ನು ಸೂರೆಗೊಂಡಿದೆ ಎಂಬುದರ ಕಥನ. 'ಮದಿಪು' ಕಾದಂಬರಿ ತುಳುವ ಬದುಕಿನ ಮುಖ್ಯ ಅಂಶವಾಗಿ ಬೆಳೆದು ಬಂದ ಮಾತೃಮೂಲೀಯ ಪದ್ಧತಿಯ ಕುಟುಂಬದ ಬಗ್ಗೆ ಹೇಳುತ್ತದೆ. 'ಮಂಗಳೂರ ಕ್ರಾಂತಿ' ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಪಟ್ಟ ಕಥನವಾಗಿದೆ. ಹಾಗಾಗಿ ಇದೊಂದು ಐತಿಹಾಸಿಕ ಕಾದಂಬರಿ. ಈ ಕಾದಂಬರಿಯ ವಸ್ತು ಸ್ವಾತಂತ್ರ್ಯ ಪೂರ್ವದ್ದು. ಅಂದರೆ ವಸಾಹತುಶಾಹಿ ಕಾಲದ್ದಾಗಿದೆ. ಈ ಸಂದರ್ಭದಲ್ಲಿ ಗುರುತಿಸಬಹುದಾದ ಇನ್ನೊಂದು ಕಾದಂಬರಿ 'ಕಾಲಚಕ್ರ'. 'ನೀರ್‌ಮಾರ್ಗ' ಎಂಬ ಸಾಂಸ್ಕೃತಿಕ ಪ್ರದೇಶದ ಅಸ್ಮಿತೆ ಕೇಂದ್ರವಾಗಿ ಇರುವ ಕಾದಂಬರಿ

‘ಕಾಲಚಕ್ರ’. ಕಾಲಚಕ್ರವೆಂದರೆ ನಿರಂತರವಾದುದು. ಇದರ ಜೊತೆಗೆ ಅವರ ‘ಗುರಿಕಾರ’, ‘ದಳವಾಯಿ ದುಗ್ಗಣ್ಣ’, ‘ತರಿಕಿಟ’, ‘ಕಾರ್ಣಿಕ’, ಮೊದಲಾದ ಕಾದಂಬರಿಗಳು ತುಳುನಾಡನ್ನೇ ಭಿತ್ತಿಯಾಗಿಟ್ಟುಕೊಂಡು ಇಲ್ಲಿಯ ಸಾಂಸ್ಕೃತಿಕ ವಿವರಗಳಲ್ಲಿ ಒಡಮೂಡಿದ ಕೃತಿಗಳಾಗಿವೆ.

೨.೨ ಸಾಮಾಜಿಕ ಸಂರಚನೆಯ ಸ್ವರೂಪ:

ಸಾಮಾಜಿಕ ಸಂರಚನೆ ಎಂಬುದು ಆಧುನಿಕ ಸಂದರ್ಭದಲ್ಲಿ ಉತ್ಪನ್ನಗೊಂಡ ಪರಿಕಲ್ಪನೆಯಾಗಿದೆ. ವಸಾಹತುಶಾಹಿ ಕಾಲಘಟ್ಟದಲ್ಲಿ ಪಶ್ಚಿಮ ಪ್ರಣೀತ ಚಿಂತನೆಯ ಭಾಗವಾಗಿ ರೂಪುತಳೆದ ಪರಿಕಲ್ಪನೆ ಇದು. ಇಂಗ್ಲೀಷ್‌ನ ’ಸೋಷಿಯಲ್ ಸ್ಟ್ರಕ್ಚರ್’ ಎಂಬ ಪರಿಕಲ್ಪನೆಗೆ ಪರ್ಯಾಯವಾಗಿ ‘ಸಾಮಾಜಿಕ ಸಂರಚನೆ’ ಎಂಬ ಪದ ವ್ಯಾವಹಾರಿಕವಾಗಿ, ವಿವಿಧ ಅಧ್ಯಯನ ಶಿಸ್ತುಗಳಲ್ಲಿ ಮತ್ತು ಸಾಹಿತ್ಯಿಕ ವಲಯದಲ್ಲಿಯೂ ಸಹ ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ. ಸಾಮಾಜಿಕ ಸಂರಚನೆಯ ಕುರಿತಾದ ಚಿಂತನೆ ಮತ್ತು ಚರ್ಚೆ ಆಧುನಿಕ ಪೂರ್ವದ ಸಂದರ್ಭದಲ್ಲಿಯೂ ಬಳಕೆಗೊಂಡ ನೆಲೆಗಳನ್ನು ಕಾಣಬಹುದಾಗಿದೆ. ಆದರೆ ಅದು ಪರಿಕಲ್ಪನಾತ್ಮಕವಾಗಿ ಗ್ರಹಿಕೆಗೆ ಒಳಗಾದ ವಿಚಾರವಾಗಿರಲಿಲ್ಲ.

೨.೩ ಸಾಮಾಜಿಕ ಸಾಮರಸ್ಯದ ಸಂಕಥನ: ಅರ್ಘ್ಯ

ತುಳುನಾಡಿನ ಗ್ರಾಮೀಣ ಸಂವೇದನೆಯನ್ನು ತೆರೆದಿಡುವ ಮಹತ್ವದ ಕಥನಗಳಲ್ಲಿ ಪ್ರಭಾಕರ ನೀರ್‌ಮಾರ್ಗರ ‘ಅರ್ಘ್ಯ’ ಕಾದಂಬರಿ ಸಹ ಒಂದು. ಇದು ಮೂಡುಬೆಳ್ಳೆಯ ಸಾಹಿತ್ಯ–ಸಂಸ್ಕೃತಿ ವೇದಿಕೆಯ ಮೂಲಕ ೨೦೦೨ ರಲ್ಲಿ ಪ್ರಕಟಗೊಂಡಿತು. ಮಂಗಳೂರು ಬಳಿಯ ‘ಕೆಲರೈ’ ಎಂಬ ಹಳ್ಳಿಯೇ ಈ ಕಾದಂಬರಿಯ ಕೇಂದ್ರ. ಇಲ್ಲಿ ನೆಲೆಗೊಂಡಿರುವ ಕೋಮು ಸಾಮರಸ್ಯದ ಆಯಾಮಗಳ ಕುರಿತಂತೆ ಈ ಕಾದಂಬರಿ ಕೆಲವು ಮಹತ್ವದ ಒಳನೋಟಗಳನ್ನು ಪರಿಚಯಿಸುತ್ತದೆ.

೨.೩.೧ ಕಾದಂಬರಿಯ ಮುಂದಿರುವ ಸಾಮಾಜಿಕ ಮೌಲ್ಯಗಳು ಮತ್ತು ಆಶಯಗಳು:

ನೀರ್‌ಮಾರ್ಗ ಅವರ ಈ ಕಾದಂಬರಿಯ ವಸ್ತುವಿನ ಸ್ವರೂಪವನ್ನು ಗಮನಿಸಿಕೊಂಡರೆ ಅಲ್ಲಿ ವೈವಿಧ್ಯಮಯ ನೆಲೆಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಅಂದರೆ ಕಾದಂಬರಿಯ ವಸ್ತು ಇಂತಹದ್ದೇ ಎಂದು ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟ ಸಾಧ್ಯ. ಆದರೆ ಈ ಬಗೆಯ ವಸ್ತು

ವೈವಿಧ್ಯದ ನಡುವೆಯೂ ಕಾದಂಬರಿ ಮತೀಯ ಸಂಘರ್ಷಕ್ಕೆ ಹಿನ್ನೆಲೆಯಾದ ಅಂಶಗಳು, ಮತೀಯ ಸಂಘರ್ಷದ ಸಾಮಾನ್ಯ ಸ್ವರೂಪ ಮತ್ತು ಅದರ ದಟ್ಟ ಪರಿಣಾಮಗಳೆಡೆಗೆ ವಿಶಿಷ್ಟವಾಗಿ ಬೆಳಕು ಚೆಲ್ಲುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ 'ಕೆಲಾರೈ' ಎಂಬ ಹಳ್ಳಿಯನ್ನು ಸಂಕೇತವಾಗಿ ಬಳಸಿಕೊಂಡು ಜಾತಿ ಸಂಘರ್ಷದ ಸಾಧಕ-ಬಾಧಕಗಳ ಕುರಿತು ಸಂಕೀರ್ಣವಾಗಿ ಚರ್ಚಿಸಲಾಗಿದೆ. ಇದರೊಂದಿಗೆ ಕರಾವಳಿಯ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳು ಕಾದಂಬರಿಯ ಮುಖ್ಯ ಆಶಯಕ್ಕೆ ಪೂರಕವಾಗಿ ಒದಗಿ ಬಂದಿರುವುದನ್ನು ಗುರುತಿಸಬಹುದು.

೨.೪ ವಸಾಹತುಶಾಹಿಗೆ ಕರಾವಳಿಯ ಪ್ರತಿಕ್ರಿಯೆ: ದಾಯಿತ್ವ

ಈ ಕೃತಿಯಲ್ಲಿ ಮಂಗಳೂರು ಪರಿಸರದ ನೀರ್‌ಮಾರ್ಗ ಮತ್ತು ಪಕ್ಕದ ಕೆಲರೈ ಗ್ರಾಮಗಳು ಆಧುನಿಕತೆಗೆ ತೆರೆದು ಕೊಳ್ಳುತ್ತ ಬಂದ ಪ್ರಕ್ರಿಯೆಯನ್ನು ಸಾಂದರ್ಭಿಕವಾಗಿ ದಾಖಲಿಸಲು ಯತ್ನಿಸಲಾಗಿದೆ. ಈ ಗ್ರಾಮಗಳನ್ನು ಆಧುನಿಕತೆಗೆ ಸಜ್ಜುಗೊಳಿಸುವುದರಲ್ಲಿ ಕೆಲಾರೈನ ಸಂತ ಮರಿಯ ಇಗರ್ಜಿಯ ಪಾದ್ರಿಗಳ ಮತ್ತು ಕ್ರೈಸ್ತ ಸಂಘದ ಸಂತ ಜೋಕಿಮರ ಹಿರಿಯ ಪ್ರಾಥಮಿಕ ಶಾಲೆಯ ಪಾತ್ರವೂ ಬಹಳ ದೊಡ್ಡದು.

೨.೪.೧ ಕಾದಂಬರಿಯಲ್ಲಿ ಪ್ರಕಟಗೊಂಡ ಪ್ರಭುತ್ವ-ಪ್ರತಿರೋಧದ ಭಿನ್ನ ನೆಲೆಗಳು:

ವಸಾಹತುಶಾಹಿ ಆಳ್ವಿಕೆಯ ಪರಿಣಾಮವಾಗಿ ಉಂಟಾದ ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಪಲ್ಲಟಗಳನ್ನು ಈ ಕಾದಂಬರಿ ಅತ್ಯಂತ ಸೂಕ್ಷ್ಮವಾಗಿ ಅನಾವರಣಗೊಳಿಸಿದೆ. ಪ್ರಭುತ್ವ ಮತ್ತು ಪ್ರತಿರೋಧದ ಭಿನ್ನ ನೆಲೆಗಳನ್ನು ಈ ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

೨.೪.೨ ಹೊಸ ಶಿಕ್ಷಣ ಕ್ರಮ ಮತ್ತು ಸಂಸ್ಥೆಗಳ ಆರಂಭ:

ನಾವು ಆಧುನಿಕ ಎಂದು ಕರೆಯುವ ಶಿಕ್ಷಣ ಕ್ರಮವು ಭಾರತದಲ್ಲಿ ಜಾರಿಗೆ ಬಂದದ್ದು ಬ್ರಿಟಿಷರಿಂದ. ಅದನ್ನು ಸ್ಥಳೀಯವಾಗಿ ಅಳವಡಿಸಿದವರು ಕ್ರೈಸ್ತ ಮಿಷನರಿಗಳು. ನಿರ್ದಿಷ್ಟವಾಗಿ ದಕ್ಷಿಣ ಕನ್ನಡದಲ್ಲಿ ಬ್ರಿಟೀಷರಿಗಿಂತಲೂ ಮುಂಚೆಯೇ ಬಾಸೆಲ್ ಮಿಷನ್ ಪಾದ್ರಿಗಳು ಶಾಲೆಗಳನ್ನು ತೆರೆದಿದ್ದರು. ಅದೇ ಪ್ರಕ್ರಿಯೆಯ ಮುಂದುವರಿಕೆಯಾಗಿಯೇ ಮಂಗಳೂರಿನ ಕ್ರೈಸ್ತ ಮಿಷನರಿಗಳು ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ, ಜನಪ್ರಿಯಗೊಳಿಸಿದರು. ಈ ಭಾಗದ ಜನಸಾಮಾನ್ಯರು ಅಕ್ಷರ ಪ್ರಪಂಚಕ್ಕೆ ತೆರೆದುಕೊಳ್ಳುವ ನಿಟ್ಟಿನಲ್ಲಿ ಕ್ರೈಸ್ತ ಮಿಷನರಿಗಳ ಪಾತ್ರ ನಿರ್ಣಾಯಕವಾದುದು.

೨.೪.೩ ರಸ್ತೆ ನಿರ್ಮಾಣ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಧುನಿಕ ರಸ್ತೆ ನಿರ್ಮಾಣದಲ್ಲಿ ಕ್ರೈಸ್ತರು ನಿರ್ವಹಿಸಿದ ಪಾತ್ರದ ಕುರಿತಂತೆ ಲಿಖಿತ ದಾಖಲೆಗಳು ದೊರೆಯುವುದಿಲ್ಲ. ಆದರೆ ಕೆಲವು ಸ್ಥಳೀಯ ದಾಖಲೆಗಳಲ್ಲಿ ಆ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಕಾದಂಬರಿಯಲ್ಲಿ ಕಂಡುಬರುವ ನೀರ್‌ಮಾರ್ಗವನ್ನು ಮಂಗಳೂರಿನ ಜತೆಗೆ ಜೋಡಿಸುವ ರಸ್ತೆಯನ್ನು ನಿರ್ಮಿಸಿದ್ದು ಸ್ಥಳೀಯ ಚರ್ಚಿನ ಪಾದ್ರಿಗಳು ಎಂಬುದು ಇಲ್ಲಿನ ಅನೇಕ ಮಂದಿ ಹಿರಿಯರ ಅಭಿಪ್ರಾಯವಾಗಿದೆ.

೨.೪.೪ ರಾಜಕೀಯ ಬದಲಾವಣೆಗಳು:

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ಮುಗಿದು ಸ್ವತಂತ್ರ ಭಾರತದ ಉದಯವಾದುದು ಒಂದು ಮುಖ್ಯವಾದ ಐತಿಹಾಸಿಕ ಬೆಳವಣಿಗೆ, ಅದನ್ನು ದಾಖಲಿಸಿರುವುದು ಆಧುನೀಕರಣದ ಪ್ರಕ್ರಿಯೆಯನ್ನು ದಾಖಲಿಸುವ ಒಂದು ಅಂಶವೇ ಆಗಿದೆ. ಈ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿರುವ ವಿಚಾರಗಳೆಂದರೆ ಸ್ವಾತಂತ್ರ್ಯ ಪೂರ್ವದ ಪಟೇಲರ ಗ್ರಾಮಾಡಳಿತ ಕೊನೆಗೊಂಡು ಹೊನ್ನಯ್ಯನಂಥ ರಾಜಕಾರಣಿಗಳಿಗೆ ಅಧಿಕಾರದ ಅವಕಾಶ ದೊರೆಯುತ್ತದೆ.

೨.೪.೫ ಸಮಾಜ ಸುಧಾರಣೆ ಮತ್ತು ಅರಿವಿನ ವಿಸ್ತರಣೆಯ ಚಟುವಟಿಕೆಗಳು:

ಶೇಂದಿ ಅಂಗಡಿಗೆ ಹೋಗಿ ಜನರು ಕೌಟುಂಬಿಕ ಮತ್ತು ಆರ್ಥಿಕ ಸ್ವಾಸ್ಥ್ಯವನ್ನು ಕೆಡಿಸಿ ಕೊಳ್ಳುತ್ತಿರುವುದನ್ನು ತಡೆಗಟ್ಟಲು ಸಮಾಜ ಸುಧಾರಕ ಮಾನಪ್ಪ ರಾತ್ರಿ ಶಾಲೆಯನ್ನು ಪ್ರಾರಂಭಿಸುತ್ತಾರೆ. ಕರಾವಳಿ ಪರಿಸರದಲ್ಲಿ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ನಡೆದ ಚಟುವಟಿಕೆಗಳ ಒಂದು ರೂಪ ಇದು. ಅಂತೆಯೇ ಗ್ರಾಮೀಣ ಪ್ರದೇಶಗಳಲ್ಲಿ ಅಂಗಡಿ ಹಾಗೂ ಹೋಟೆಲುಗಳ ಸ್ಥಾಪನೆ ಆಧುನೀಕರಣದ ಒಂದು ಮುಖ್ಯ ಹಂತವಾಗಿದೆ. ಆರ್ಥಿಕ ಸುಧಾರಣೆ ಮತ್ತು ಮಾರುಕಟ್ಟೆ ಸಂಸ್ಕೃತಿಯ ಆರಂಭದ ಹೆಜ್ಜೆಗಳಿವು. ಇದಕ್ಕೆ ಪೂರಕವಾಗಿ ಕಾದಂಬರಿಯಲ್ಲಿ ಬರುವ ಸಾಲುಗಳನ್ನು ಇಲ್ಲಿ ಗಮನಿಸಿಕೊಳ್ಳಬಹುದು. "ಊರು ಈಗ ತುಂಬಾ ಬದಲಾವಣೆಯಾಗಿತ್ತು. ಹೊಸ ಜನ ಊರಲ್ಲಿ ನೆಲೆಸಿದ್ದರು. ಅದುವರೆಗೆ ಚಾ, ಕಾಫಿ ಏನೆಂದು ತಿಳಿಯದ ಜನಕ್ಕೆ ಈಗ ಅದೆಲ್ಲಾ ಹೋಟೆಲ್ನಲ್ಲಿ ಸಿಗುತ್ತೆ. ಹಾಗಾಗಿ ಜನಕ್ಕೆ ಚಾ, ಕಾಫಿ ಹಾಗೂ ಬಗೆ ಬಗೆಯ ತಿಂಡಿಗಳನ್ನು ಸವಿಯುವ ಅವಕಾಶ. ಮೊದ ಮೊದಲು ಹೋಟೆಲ್ ಚಾ, ತಿಂಡಿ ಕೊಳಕು ಎಂದು ಭಾವಿಸಿದ್ದ ಜನ ಈಗ ಬದಲಾಗಿದ್ದಾರೆ. ಪ್ರಾರಂಭದಲ್ಲಿ ಕದ್ದು ಮುಚ್ಚಿ ಹೋಟೆಲ್ ಸೇರುತ್ತಿದ್ದವರು, ಚಂದಣ್ಣನ ಹೋಟೇಲಿನಲ್ಲಿ

ಈಗೀಗ ಯಾರ ಹಂಗಿಲ್ಲದೆ ಗಡದ್ದಾಗಿ ಕಾಫಿತಿಂಡಿ ಸವಿಯುತ್ತಾರೆ." (ದಾಯಿತ್ವ, ೧೯೯೭, ಪುಟ.೧೬೦) ಆಧುನಿಕತೆಯ ಪರಿಣಾಮ ತುಳುನಾಡಿಗೆ ಯಾವ ರೀತಿ ಪರಿಣಾಮ ಬೀರಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

೨.೫ 'ಪ್ರತಿಶೋಧ' ಕಾದಂಬರಿಯಲ್ಲಿ ಸಾಮಾಜಿಕ ಮೌಲ್ಯಗಳ ಅನ್ವೇಷಣೆ:

ಯಾವುದೇ ಕತೆ, ಕಾದಂಬರಿ ಇತ್ಯಾದಿಗಳು ಹುಟ್ಟುವುದೇ ಅನಿವಾರ್ಯತೆಗಳ ನಡುವೆ. ಯಾವುದೋ ಗಾಢವಾಗಿ ಕಾಡಿದ, ಕಾಡುತ್ತಲೇ ಇದ್ದು ಮನಸ್ಸನ್ನು ಉಲ್ಲಸಿತವನ್ನಾಗಿಸುವ, ಮತ್ತೆ ಅಲ್ಲೇ ಸಾಂದ್ರವಾಗಿ ಹಬ್ಬಿ ನಮ್ಮನ್ನೇ ಮರೆಯಿಸುವ ಇಂತಹ ಸಂದಿಗ್ಧದಲ್ಲಿ ಕತೆಯಾಗಿಯೋ, ಕವನವಾಗಿಯೋ ಇನ್ನೇನೋ ಒಂದು ರೂಪವಾಗಿ ಸಾಹಿತ್ಯವು ಅಕ್ಷರದ ಆಕೃತಿ ಪಡೆಯುತ್ತದೆ. ಒಂದು ರೀತಿಯ ಕಾಡುವ ಕಥನವಾಗಿ ಪ್ರತಿಶೋಧ ಕಾದಂಬರಿ ನಿಲ್ಲುತ್ತದೆ.

೨.೬ ಜೀವಪರ ಸಂಬಂಧಗಳ ಅನುರಣನ: ಶಿಶಿರ

ಪ್ರಭಾಕರ ನೀರ್‌ಮಾರ್ಗರ 'ಶಿಶಿರ' ಕರಾವಳಿಯ ಪ್ರಾದೇಶಿಕ ಬದುಕನ್ನು ಅತ್ಯಂತ ವ್ಯಾಪಕವಾಗಿ ಮತ್ತು ಅಷ್ಟೇ ಅರ್ಥಪೂರ್ಣವಾಗಿ ಪ್ರಕಟಪಡಿಸಿದ ಕಾದಂಬರಿಯಾಗಿದೆ. ಕರಾವಳಿಯ ಸಾಮಾಜಿಕ ಬದುಕಿನ ಒಳಹೊರಗನ್ನು ಅನಾವರಣಗೊಳಿಸುವ 'ಶಿಶಿರ' ಒಂದು ರೀತಿಯಲ್ಲಿ ಭಾವನಾತ್ಮಕ ಕಾದಂಬರಿ ಸಹ ಹೌದು.

೨.೬.೧ ಕಾದಂಬರಿಯಲ್ಲಿ ವ್ಯಕ್ತಗೊಂಡ ಭಾವನಾತ್ಮಕ ಸಂಬಂಧದ ನೆಲೆಗಳು:

ಈ ಕಾದಂಬರಿಯ ಶೀರ್ಷಿಕೆಯೇ ಅತ್ಯಂತ ಧ್ವನಿಪೂರ್ಣವಾಗಿ ಮತ್ತು ಅಷ್ಟೇ ಅರ್ಥಗರ್ಭಿತವಾಗಿ ಮೂಡಿ ಬಂದಿದೆ. 'ಶಿಶಿರ' ಚಳಿಗಾಲದ ಭಾಗವಾಗಿ ಬರುವ ಒಂದು ಋತುವನ್ನು ಪ್ರತಿನಿಧಿಸುತ್ತದೆ. ಇದು ಹಸಿರು ಮತ್ತು ಆ ಮೂಲಕ ಸಮೃದ್ಧಿಯನ್ನು ಸಂಕೇತಿಸುವ ಋತು ಸಹ ಹೌದು. ಆ ಮೂಲಕ ಇದು ಜೀವಪರತೆಯ ವಿಭಿನ್ನ ಆಯಾಮಗಳಿಗೆ ಮುಖಾಮುಖಿಯಾಗುತ್ತದೆ.

೨.೭ ಪ್ರಗತಿಪರ ಧೋರಣೆಯ ವಿಶಿಷ್ಟ ಕಥನ: 'ಮಥನ'

'ಮಥನ' ಪ್ರಭಾಕರ ನೀರ್‌ಮಾರ್ಗರ ಪ್ರಗತಿಪರ ಧೋರಣೆಯನ್ನು ದಟ್ಟವಾಗಿ ಅಭಿವ್ಯಕ್ತಿಸಿದ ಕಥನವಾಗಿದೆ. ಓದುಗ ವರ್ಗಕ್ಕೆ ಅಪೂರ್ವ ವಿಚಾರ ಮತ್ತು ಅನುಭವಗಳನ್ನು ಮಥಿಸುವ ಮೂಲಕ ಕೊನೆಗೆ ಮಥನವಾಗಿ ಪರಿವರ್ತನೆಗೊಳ್ಳುವ ಕಥನ ವಿನ್ಯಾಸವನ್ನು ಹೊಂದಿದೆ.

೨.೮ ಸಾಂಸ್ಕೃತಿಕ ಪ್ರಭುತ್ವದ ಪ್ರಾತಿನಿಧಿಕ ಕಾದಂಬರಿ: 'ಗುರಿಕಾರ'

'ಗುರಿಕಾರ' ಕಾದಂಬರಿ ಪ್ರಭಾಕರ ನೀರ್‌ಮಾರ್ಗರ ೯ನೆಯ ಕೃತಿ. ಸ್ವತಃ ಲೇಖಕರೇ ಹೇಳಿಕೊಂಡಂತೆ ಇದು ಸಾಂಸ್ಕೃತಿಕ ಬಹುತ್ವವನ್ನು ಪ್ರಕಟಗೊಳಿಸುವ ಸಾಮಾಜಿಕ ಸ್ಥಿತಿಗತಿಗಳನ್ನು ಅವಲೋಕಿಸುತ್ತದೆ. ಕರಾವಳಿಗೆ ಒಂದು ಕಾಲದ ಜೀವನ ಕ್ರಮವನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಕಾದಂಬರಿಯನ್ನು ಬರೆದಿರುವುದಾಗಿ ಹೇಳಿಕೊಂಡಿದ್ದಾರೆ.

೨.೯ 'ದಿಬ್ಬಣ' ಕಾದಂಬರಿಯಲ್ಲಿ ಸಾಂಸ್ಕೃತಿಕ ಮುಖಾಮುಖಿ:

ಕರ್ನಾಟಕದ ಇತರ ಭೂಭಾಗಗಳಿಗಿಂತ ಭಿನ್ನವಾಗಿ ಕಂಗೊಳಿಸುವ ಕರಾವಳಿಯ ಸಾಂಸ್ಕೃತಿಕ ಬಹುತ್ವವನ್ನು ಸೃಜನಶೀಲ ಕಥನಗಳ ಮೂಲಕ ತೆರೆದು ತೋರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕರಾವಳಿ ಸಮಾಜದಲ್ಲಿ ತಲೆಮಾರುಗಳಿಂದ ಬದುಕಿನ ನೆಲೆಗಳನ್ನು ಕಂಡುಕೊಂಡ ಹತ್ತು ಹಲವು ಸಮುದಾಯಗಳ ಸಾಂಸ್ಕೃತಿಕ ಬೇರುಗಳು ಇವರ ಕಾದಂಬರಿಗಳಲ್ಲಿ ಜೀವನಗಾಥೆಯಾಗಿ ಅರಳಿವೆ.

೨.೧೦ ಕಾಲದೊಂದಿಗಿನ ಪಯಣ 'ಕಾಲಚಕ್ರ;

ನೀರ್‌ಮಾರ್ಗರ 'ಕಾಲಚಕ್ರ' ಕಾದಂಬರಿಯು ಮನುಷ್ಯನ ಬದುಕಿನ ದಿನನಿತ್ಯದ ತಲ್ಲಣಗಳು, ಜಾತೀಯತೆ, ಮೇಲು ಕೀಳು, ಪುಂಡು ರಾಜಕಾರಣ ಇವುಗಳ ಪೊಳ್ಳುತನವನ್ನು ಎಳೆ ಎಳೆಯಾಗಿ ಬಿಡಿಸಿಡುತ್ತದೆ. ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಬದುಕನ್ನು ಚಿತ್ರಿಸುವ ಬೀಡು, ಗುತ್ತು, ಕೋಳಿ ಅಂಕ ಮೊದಲಾದವುಗಳ ವಿವರಣೆಯು ಕಾದಂಬರಿಯೊಳಗಡೆ ಕೇವಲ ವಸ್ತು ವಿವರಣೆಯಲ್ಲಿ ನಿಲ್ಲದೆ ಆಳವಾದ ಜೀವನ ಶ್ರದ್ಧೆಯಲ್ಲಿ ಮೈಪಡೆದಿದೆ. ದಕ್ಷಿಣ ಕನ್ನಡ ಎಂಬ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಗುರುತಿಸಿಕೊಂಡಿರುವ ಪ್ರದೇಶ. ಆಧುನಿಕತೆಯ ಜೊತೆಗೆ ಮುಖಾಮುಖಿಯಾದ ಈ ನಾಡು, ಪರಂಪರೆ– ಆಧುನಿಕತೆ,

ಸಂಪ್ರದಾಯ– ಸಮಾಜ, ಆಧುನಿಕ ಶಿಕ್ಷಣ, ವೈಚಾರಿಕತೆ, ವೈಜ್ಞಾನಿಕತೆ ಇವುಗಳನ್ನು ಗುರುತಿಸುವ ಅಂಶಗಳನ್ನು ಈ ಕಾದಂಬರಿ ಒಳಗೊಂಡಿದೆ. ಹರಿವ ನೀರು ದಿಕ್ಕು ಬದಲಿಸಿದಂತೆ ಮಾನವನ ಬದುಕು ಪಲ್ಲಟಕ್ಕೆ ಒಳಗಾಗುತ್ತಾ ಬಂದಿದೆ. ಕಾಲಚಕ್ರ ಕಾದಂಬರಿಯ ಪ್ರವೇಶಿಕೆಯಲ್ಲೇ ಭಟ್ರಕೋಡಿಯಿಂದ ಹರಿಯುತ್ತಿದ್ದ ಹೊಳೆ ತನ್ನ ದಿಕ್ಕು ಬದಲಿಸಿ ನೆಕ್ಕರೆ ಪದವಿನಿಂದ ಹರಿಯುವ ಮೂಲಕವೇ ನೀರ್‌ಮಾರ್ಗದ ಜನರ ಬದುಕನ್ನು ಹೊಸತನಕ್ಕೆ ಒಡ್ಡಲು ಕಾರಣವಾಯಿತು. ಹರಿಯುವ ನದಿ ದಿಕ್ಕನ್ನು ಮಾತ್ರ ಬದಲಾಯಿಸಬಹುದು. ಆದರೆ ನೀರ್‌ಮಾರ್ಗರು ಮಾನವನ ಬದುಕಿನ ಜೀವನ ಕ್ರಮ, ಸಂಸ್ಕೃತಿಯನ್ನೇ ಬದಲಾಯಿಸಿಕೊಳ್ಳುವ ವಿಪರ್ಯಾಸವನ್ನು ಈ ಕಾದಂಬರಿ ಮೂಲಕ ಕಟ್ಟಿಕೊಟ್ಟಿದ್ದಾರೆ.

ಅಧ್ಯಾಯ ೩

ಪ್ರಭಾಕರ ನೀರ್‌ಮಾರ್ಗ‌ರ ಐತಿಹಾಸಿಕ ಕಾದಂಬರಿಗಳು: ಚಾರಿತ್ರಿಕ ಅನುಸಂಧಾನ

ಪ್ರಭಾಕರ ನೀರ್‌ಮಾರ್ಗ‌ರ ಕಾದಂಬರಿಗಳಲ್ಲಿ ಸಾಂಸ್ಕೃತಿಕ ದಾಖಲಾತಿ ಎಂಬುದು ಇವರ ಎಲ್ಲಾ ಕಾದಂಬರಿಗಳಲ್ಲಿನ ಒಂದು ವೈಶಿಷ್ಟ್ಯವಾಗಿದೆ. ಈ ರೀತಿಯ ಸಾಂಸ್ಕೃತಿಕ ದಾಖಲಾತಿಯ ಮೂಲಕ ಕೃತಿ ರಚನೆಗೊಂಡ ಇವರ ಎಲ್ಲಾ ಕಾದಂಬರಿಗಳಲ್ಲಿಯೂ ತಾತ್ವಿಕ ಅಂಶವನ್ನು ಗಮನಿಸಬಹುದಾಗಿದೆ. ಒಬ್ಬ ಜಾನಪದ ಸಂಶೋಧಕನ ನೆಲೆಯಲ್ಲಿ ಅವರು ಮಾಹಿತಿಗಳನ್ನು ಸಮಗ್ರವಾಗಿ ಸಂಗ್ರಹಿಸುತ್ತಾರೆ.

೩.೧ ನೀರ್‌ಮಾರ್ಗ‌ರ ಕಾದಂಬರಿಗಳಲ್ಲಿ ಚಾರಿತ್ರಿಕ-ಸಾಂಸ್ಕೃತಿಕ ದಾಖಲಾತಿ:

ಕ್ಷೇತ್ರಕಾರ್ಯದ ಮೂಲಕ ಕೈಗೊಳ್ಳುವ ದಾಖಲಾತಿಗೆ ಜಾನಪದ ಅಧ್ಯಯನದಲ್ಲಿ ಮಹತ್ವದ ಸ್ಥಾನವಿದೆ. ಸ್ಮೃತಿಯಿಂದ ದೂರವಾಗುತ್ತಿರುವ ಸಂಗತಿಗಳನ್ನು ಕಾಪಿಡುವುದು ದಾಖಲಾತಿಯ ಒಂದು ಉದ್ದೇಶವಾದರೆ, ಸಂಶೋಧನೆಯ ಮೂಲಕ ಸಾಂಸ್ಕೃತಿಕ ಅನನ್ಯತೆಗಳನ್ನು ಶೋಧಿಸುವುದು ಆದರ ಇನ್ನೊಂದು ಮಹತ್ವದ ಉದ್ದೇಶ. ಜಾನಪದದಲ್ಲಿ ಕ್ಷೇತ್ರಕಾರ್ಯದ ಮೂಲಕ ಮಾಡುವ ದಾಖಲಾತಿ ನೇರ ದಾಖಲಾತಿಯಾದರೆ, ಸಾಹಿತ್ಯದ ಮೂಲಕ ಮಾಡುವ ದಾಖಲಾತಿ ಪರೋಕ್ಷ ದಾಖಲಾತಿ ಎನ್ನಬಹುದು.

೩.೧.೧ 'ಮಂಗಳೂರ ಕ್ರಾಂತಿ' ಕಾದಂಬರಿಯಲ್ಲಿ ಐತಿಹಾಸಿಕ ಚಿತ್ರಣ:

ಭಾರತದೇಶದ ಸ್ವಾತಂತ್ರ್ಯ ಸಮರದ ಪ್ರಮುಖ ಮೆಟ್ಟಿಲಾದ 'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' ಚಳುವಳಿಯನ್ನು ಚಿತ್ರಿಸುವ ಐತಿಹಾಸಿಕ ಕಾದಂಬರಿ 'ಮಂಗಳೂರ ಕ್ರಾಂತಿ'. ಇಂದಿಗೆ ಸುಮಾರು ಒಂದೂವರೆ ಶತಮಾನದ ಹಿಂದೆ ಕೊಡಗು, ಸುಳ್ಯ ಮತ್ತು ಪುತ್ತೂರು ಪ್ರದೇಶಗಳೂ ಸೇರಿದ್ದ ಆಗಿನ ಬಂಟ್ವಾಳ ತಾಲ್ಲೂಕಿನಲ್ಲಿ ಬ್ರಿಟೀಷರ ವಿರುದ್ಧ ನಡೆದ ಬಂಡಾಯ ಈ ಕಾದಂಬರಿಯ ಕಥಾಹಂದರ. ಇದನ್ನು ಬ್ರಿಟೀಷರ ದಾಖಲೆಗಳು "ಕೊಡಗು ಕೆನಾರ ಬಂಡಾಯ" (Coorg Canara Insurrection) ಎಂದು ಗುರುತಿಸಿವೆ. ವಾಸ್ತವವಾಗಿ ಅದು ಸ್ವಾತಂತ್ರ್ಯ ಸಂಗ್ರಾಮದ ಆರಂಭದ ಕಿಡಿಯೇ ಆಗಿದೆ. ಇಂತಹ ಚಾರಿತ್ರಿಕ

ಹಿನ್ನೆಲೆಯನ್ನು ಕೇಂದ್ರವಾಗಿರಿಸಿಕೊಂಡು, ಪ್ರಾದೇಶಿಕ ವಿಷಯಗಳನ್ನು ತಿರುಳಾಗಿ ಆಯ್ಕೆ ಮಾಡಿಕೊಂಡು ಅವುಗಳ ಸುತ್ತಲೂ ಸುಂದರ ಹಂದರದ ಐತಿಹಾಸಿಕ ಕಾದಂಬರಿಯನ್ನು ಹೆಣೆದವರು ಪ್ರಭಾಕರ ನೀರ್‌ಮಾರ್ಗರು.

೩.೧.೨ ರೈತ ಸಂಘಟನೆಯ ಹೋರಾಟ:

೨೦೦೬ರಲ್ಲಿ ಬೆಳಕು ಕಂಡ ಈ ಕಾದಂಬರಿ ಕರಾವಳಿ ಕರ್ನಾಟಕದಲ್ಲಿ ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ಆಂಗ್ಲ ವಸಾಹತುಶಾಹಿ ಆಡಳಿತದ ವಿರುದ್ಧ ಸ್ಫೋಟಗೊಂಡ ಸ್ಥಳೀಯ ಕ್ರಾಂತಿಯನ್ನು ಕಾದಂಬರಿ ಕಥಾ ವಸ್ತುವನ್ನಾಗಿಸಿದೆ. ಕರಾವಳಿಯ ಸ್ವಾತಂತ್ರ್ಯ ಹೋರಾಟದ ಕಥನ ಈ ಕಾದಂಬರಿಯಲ್ಲಿ ವಿಶಿಷ್ಟವಾಗಿ ನಿರ್ಮಾಣಗೊಂಡಿದೆ. ಐರೋಪ್ಯರ ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ಆಡಳಿತ ವ್ಯವಸ್ಥೆಗಳು ಎಲ್ಲೆಲ್ಲಿ ಸ್ಥಾಪಿತಗೊಂಡವೋ ಅಲ್ಲೆಲ್ಲಾ ಅವ್ಯವಸ್ಥೆಯ ವಿರುದ್ಧ ಪ್ರಾದೇಶಿಕ ಪ್ರತಿರೋಧಗಳು ವಿವಿಧ ರೂಪದಲ್ಲಿ ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾಗಿ ಗುರುತಿಸಬಹುದಾದ ದಂಗೆಗಳೆಂದರೆ ರೈತಾಪಿ ದಂಗೆಗಳು, ಆದಿವಾಸಿ ಅಥವಾ ಬುಡಕಟ್ಟು ಜನಾಂಗಗಳ ದಂಗೆಗಳು, ಕಾರ್ಮಿಕ ಕ್ರಾಂತಿಗಳು, ಸೈನಿಕ ದಂಗೆಗಳು, ನಾಗರೀಕ ಜನರ ದಂಗೆಗಳು, ತಳಸಮುದಾಯದ ಮತ್ತು ಮಹಿಳಾ ವರ್ಗಗಳ ಪ್ರತಿಭಟನೆ ಇತ್ಯಾದಿಗಳಾಗಿವೆ.

೩.೧.೩ ಮಂಗಳೂರ ಕ್ರಾಂತಿ ಮತ್ತು ಕರಾವಳಿಯ ಆಧುನಿಕ ಚರಿತ್ರೆ:

ನೀರ್‌ಮಾರ್ಗರ 'ಮಂಗಳೂರ ಕ್ರಾಂತಿ' ಕಾದಂಬರಿಯು ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ತಳಮಟ್ಟದಿಂದ ಕಟ್ಟಿಕೊಡುವ ಹಂತದಲ್ಲಿ ಪ್ರಮುಖ ಆಕರವಾಗಿ ಪರಿಣಮಿಸಿದೆ. ಕ್ರಾಂತಿಯೊಂದರ ಸುತ್ತ ಕಾದಂಬರಿ ಹರಡಿಕೊಂಡರೂ ಅದನ್ನು ಸಂಕೇತವಾಗಿರಿಸಿಕೊಂಡು ಕರಾವಳಿಯ ಸಾಮಾಜಿಕ-ಸಾಂಸ್ಕೃತಿಕ ವಿದ್ಯಮಾನಗಳ ಕಡೆಗೆ ಬೆಳಕು ಚೆಲ್ಲುತ್ತದೆ. ಈ ಕಾದಂಬರಿಯ ರಚನೆಯ ಹಿನ್ನೆಲೆಯಲ್ಲಿ ಲೇಖಕರು ನಡೆಸಿದ ಕ್ಷೇತ್ರಕಾರ್ಯ ಗಮನ ಸೆಳೆಯುತ್ತದೆ. ಸ್ವತ: ಲೇಖಕರೇ ಒಂದೆಡೆ ಹೇಳಿಕೊಂಡಿರುವಂತೆ ಅವರು ಈ ಕ್ರಾಂತಿ ನಡೆದ ಸ್ಥಳಗಳನ್ನು ಸ್ವತಃ ಸಂದರ್ಶಿಸಿ ಆ ಸ್ಥಳಗಳ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನು ಹೊಂದುವ ಗರಿಷ್ಠ ಪ್ರಯತ್ನ ನಡೆಸಿದ್ದಾರೆ. ಅದರೊಂದಿಗೆ ಕಾದಂಬರಿಯಲ್ಲಿ ಬರುವ ಎಲ್ಲ ಊರುಗಳನ್ನೂ ಸಂದರ್ಶಿಸಿ, ಕ್ರಾಂತಿಕಾರರು ಸಾಗಿದ ದಾರಿಯಲ್ಲಿ ಸಂಚರಿಸಿ ಆ ಮೂಲಕ ಓದಿಗಿಂತ ಭಿನ್ನವಾಗಿ ತನ್ನದೇ ನೆಲೆಯಲ್ಲಿ ಕ್ರಾಂತಿಯ ಸ್ವರೂಪ ಮತ್ತು

ಆಯಾಮಗಳನ್ನು ಪರಿಕಲ್ಪಿಸಿಕೊಂಡಿದ್ದಾರೆ. ಹಾಗೆಯೇ ನಂದಾವರದ ಅರಮನೆಗೆ ಭೇಟಿ ನೀಡಿ, ಆ ಪರಿಸರವನ್ನು ಅಧ್ಯಯನ ಮಾಡಿ ನಂದಾವರದ ಲಕ್ಷ್ಮಪ್ಪ ಬಂಗರಸನ ವ್ಯಕ್ತಿತ್ವದ ಬಗ್ಗೆ ಇತಿಹಾಸದಲ್ಲಿ ದಾಖಲಾಗದ ಕೆಲವು ಮಾಹಿತಿಗಳನ್ನು ಸಂಗ್ರಹಿಸಿರುವುದು ಕಾದಂಬರಿಯ ಓದಿನ ಮೂಲಕ ವ್ಯಕ್ತವಾಗುತ್ತದೆ. ಲಕ್ಷ್ಮಪ್ಪ ಬಂಗರಸನ ರಸಿಕತನವನ್ನೂ ಸಹ ಕಾದಂಬರಿಯಲ್ಲಿ ಕಟ್ಟಿಕೊಡಲಾಗಿದೆ.

೩.೧.೪ ಕಾದಂಬರಿಯಲ್ಲಿ ಪ್ರಕಟಗೊಂಡ ಚರಿತ್ರೆಯ ಭಿನ್ನ ಗ್ರಹಿಕೆಗಳು:

ಮಂಗಳೂರ ಕ್ರಾಂತಿ ಕಾದಂಬರಿಯ ವಸ್ತು ಸ್ವಾತಂತ್ರ್ಯ ಪೂರ್ವದ ಮಂಗಳೂರಿನಲ್ಲಿ ನಡೆದ ಕ್ರಾಂತಿಗೆ ಸಂಬಂಧಿಸಿರುವಂಥದ್ದು. ಅಂದರೆ ವಸಾಹತುಶಾಹಿ ಆಡಳಿತದ ಸಂದರ್ಭ. ಕ್ರಾಂತಿಯ ವೀರಗಾಥೆಯನ್ನು ನಿರೂಪಣೆಯ ಕ್ರಿಯಾಚರಣೆಗೆ ಒಳಪಡಿಸಿದ ಕಾಲ. ಸ್ವಾತಂತ್ರೋತ್ತರದ ಆಧುನಿಕ ಕಾಲ. ಹಾಗಾಗಿ ಇಲ್ಲಿ ಸರಳ ಸಮೀಕರಣ ಒಂದಿದೆ. ಅದು ಸ್ವಾತಂತ್ರ ಪೂರ್ವ, ಆಧುನಿಕ ಪೂರ್ವ–ಆಧುನಿಕೋತ್ತರ, ವಸಾಹತುಶಾಹಿ– ಜಾಗತೀಕರಣ ಕಾಲ. ಈ ಬಗೆಯ ಕಾಲ–ದೇಶದ ಅಂತರದಲ್ಲಿ ಕಾದಂಬರಿಯನ್ನು ಚರ್ಚಿಸಬಹುದು.

೩.೨ 'ದಳವಾಯಿ ದುಗ್ಗಣ್ಣ' ಕಾದಂಬರಿಯಲ್ಲಿ ಕರಾವಳಿಯ ಮೌಖಿಕ ಚರಿತ್ರೆ:

ಪ್ರಭಾಕರ ನೀರ್‌ಮಾರ್ಗರ ಲೇಖನಿಯಿಂದ ಹೊರಬಂದ ಏಕೈಗೆ ತುಳು ಕಾದಂಬರಿ 'ದಳವಾಯಿ ದುಗ್ಗಣ್ಣ'. ಇದು ಹಸ್ತಪ್ರತಿ ರೂಪದಲ್ಲಿರುವಾಗಲೇ ವರ್ಷದ ಶ್ರೇಷ್ಠ ತುಳು ಕಾದಂಬರಿಗೆ ನೀಡಲಾಗುವ 'ಪಣಿಯಾಡಿ ಪ್ರಶಸ್ತಿ'ಯನ್ನು ಪಡೆದುಕೊಂಡಿದೆ. ತುಳುನಾಡಿನಲ್ಲಿ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮನ್ನಣೆಗೆ ಪಾತ್ರನಾದ ದಂಡನಾಯಕನ, ಜೀವನ, ಸಾಧನೆ ಮತ್ತು ವ್ಯಕ್ತಿತ್ವದ ಸುತ್ತ ಹೆಣೆದುಕೊಂಡಿರುವ ಕಥನ ಇದು.

೩.೨.೧ ಕಾದಂಬರಿಯ ಚಾರಿತ್ರಿಕ–ಸಾಮಾಜಿಕ ಆಶಯ:

'ದಳವಾಯಿ ದುಗ್ಗಣ್ಣ' ಕಾದಂಬರಿ ಯುರೋಪಿಯನ್ನರ ಆಳ್ವಿಕೆಗಿಂತ ಮೊದಲಿನ, ಅಂದರೆ ಕ್ರಿಸ್ತಶಕ ೧೫ನೇ ಶತಮಾನದ ಅವಧಿಯ ತುಳುನಾಡಿನ ರಾಜಕೀಯ, ಸಾಮಾಜಿಕ ಸ್ಥಿತಿಗತಿಯ ಕುರಿತಂತೆ ಬೆಳಕು ಚೆಲ್ಲುವ ಕಥನವಾಗಿದೆ.

ಅಧ್ಯಾಯ ೪

ಕರಾವಳಿಯ ಆಚರಣಾತ್ಮಕ ಬದುಕು ಮತ್ತು ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳು

ಕರಾವಳಿಯ ಸಾಂಸ್ಕೃತಿಕ ವೈವಿಧ್ಯ ಮತ್ತು ಹಿರಿಮೆಗೆ ಭೂತಾರಾಧನೆಯ ಕೊಡುಗೆ ವಿಶಿಷ್ಟವಾದುದು. ತುಳುನಾಡಿನ ಸಂಕೀರ್ಣ ಮತ್ತು ಪಾರಂಪರಿಕ ಆಚರಣೆ ಇದಾಗಿದ್ದು, ಆರಾಧನಾ ಪ್ರಕಾರವಾಗಿ ರಂಗ ಸಂಪ್ರದಾಯವಾಗಿ, ಆಡಳಿತ ವ್ಯವಸ್ಥೆಯ ಭಾಗವಾಗಿ, ಚಿಕಿತ್ಸೆಯ ವಿಧಾನವಾಗಿ, ಸಾಂಸ್ಕೃತಿಕ ಅಭಿವ್ಯಕ್ತಿಯಾಗಿ, ಸಾಮಾಜಿಕ ಪದ್ಧತಿಯಾಗಿ ಇಲ್ಲಿನ ಜನರ ಬದುಕಿನಲ್ಲಿ ವಿಶೇಷ ಪ್ರಭಾವಕ್ಕೆ ಒಳಗಾಗಿದೆ

೪.೧ ತುಳುನಾಡಿನ ಭೂತಾರಾಧನೆ: ಸಾಂಸ್ಕೃತಿಕ ಸ್ವರೂಪ:

ತುಳುನಾಡಿನ ಜನರು 'ಭೂತ'ಗಳನ್ನು 'ದೈವಿಕ ಶಕ್ತಿ' (Devine spirit) ಗಳೆಂದು ನಂಬಿ ಆರಾಧಿಸುತ್ತಾರೆ. ನಿಗದಿ ಮಾಡಿದ ಸ್ಥಳ, ಕಾಲ ಮತ್ತು ಅವಧಿಯಲ್ಲಿ ಅಲೌಕಿಕವಾದ ಆವರಣವನ್ನು ನಿರ್ಮಿಸಿಕೊಂಡು ತಾವು ನಂಬಿಕೊಂಡು ಬಂದ ಅನೇಕ ಭೂತಗಳನ್ನು ಪೂಜಿಸುತ್ತಾರೆ, ಆರಾಧನೆಯ ಈ ಪದ್ಧತಿಯು ಯಾವುದೇ ಒಂದು ಪ್ರದೇಶ ಹಾಗೂ ಒಂದು ಜಾತಿಯ ಜನರು ಮತ್ತು ಕುಟುಂಬಸ್ತರಿಗೆ ಮಾತ್ರ ಸೀಮಿತವಾಗಿಲ್ಲ. ನೂರಾರು ಸಂಖ್ಯೆಯ ಭೂತಗಳು, ಅವುಗಳ ಗುಡಿಗಳು, ಆರಾಧನೆಗೆ ಸಂಬಂಧಪಟ್ಟಂತೆ, ಇರುವ ಆಯುಧಗಳು, ಭೂತಗಳ ಮುಖವಾಡಗಳು ಇವೆಲ್ಲವುಗಳನ್ನು ಜನರು ಗೌರವ, ಶ್ರದ್ಧೆಯಿಂದ ನೋಡಿಕೊಳ್ಳುತ್ತಾರೆ. ತುಳುನಾಡಿನಲ್ಲಿ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದಿರುವ ನಲಿಕೆ, ಪರವ, ಪಂಬದ ಜಾತಿಯ ಜನರು ಈ ಬಗೆಯ ಸಾಂಸ್ಕೃತಿಕ ಸ್ವರೂಪದ ಆರಾಧನೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ

೪.೧.೧ ಭೂತಾರಾಧನೆಯ ಅನುಭವ ಕಥನ: ನೀರ್‌ಮಾರ್ಗರ 'ತಿಲ್ಲಾನ' ಕಾದಂಬರಿ:

ಪ್ರಭಾಕರ ನೀರ್‌ಮಾರ್ಗರ ನಾಲ್ಕನೆಯ ಕಾದಂಬರಿ 'ತಿಲ್ಲಾನ'. ೨೦೦೦ನೇ ವರ್ಷದಲ್ಲಿ ಹೇಮಾಂಶು ಪ್ರಕಾಶನದಿಂದ ಪ್ರಕಟಗೊಂಡ ಕೃತಿ ಇದು ಕರಾವಳಿಯ ವಿಶಿಷ್ಟ ಆರಾಧನಾ ಪ್ರಕಾರವಾಗಿರುವ ಭೂತಾರಾಧನೆಯ ಹಿನ್ನೆಲೆ ಮತ್ತು ಸ್ವರೂಪದ ಕುರಿತಂತೆ ಈ ಕಾದಂಬರಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೪.೧.೨ 'ತಿಲ್ಲಾನ'ದಲ್ಲಿ ಭೂತಾರಾಧನೆಯ ಬಗೆಗಿನ ತಲ್ಲಣಗಳು:

'ತಿಲ್ಲಾನ'ದಲ್ಲಿ ತುಳುನಾಡಿನ ಅಂಚಿನ ಸಮುದಾಯವನ್ನು ಪ್ರತಿನಿಧಿಸುವ ನಲಿಕೆಯವರನ್ನು ಕೇಂದ್ರವಾಗಿರಿಸಿಕೊಂಡು ಆ ಸಮುದಾಯಕ್ಕೆ ಆಧುನಿಕತೆಯಿಂದ ಒದಗಿದ ತಲ್ಲಣಗಳನ್ನು ಚಿತ್ರಿಸಲಾಗಿದೆ. ಭೂತದ ವೇಷ ಹಾಕಿ ಕುಣಿಯುವ ಅವರ ಕುಲವೃತ್ತಿಯ ಮೂಲಕ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸದೇ ಇರುವ ವಾಸ್ತವಿಕ ಅಂಶವನ್ನು ಕಾದಂಬರಿ ತನ್ನೊಳಗೆ ಗುರುತಿಸಿಕೊಂಡಿದೆ. ಹೊಸ ತಲೆಮಾರನ್ನು ಪ್ರತಿನಿಧಿಸುವ ಆ ಸಮುದಾಯದ ಯುವಕ–ಯುವತಿಯರು ತಮ್ಮ ಕುಲ ಕಸುಬಿನ ಕುರಿತಂತೆ ವಿಶೇಷ ಗೌರವ ಹೊಂದಲು ಬಯಸುವುದಿಲ್ಲ ಎಂಬುದಕ್ಕೆ 'ಹಿರಿಯ'ನ ಗಂಡು ಮಕ್ಕಳು ಮಹತ್ವದ ನಿದರ್ಶನವಾಗಿ ಪರಿಣಮಿಸುತ್ತಾರೆ. ಕಲಾ ಪ್ರಕಾರವೊಂದರ ಆಂತರಿಕ ಸತ್ವವನ್ನು ಜೀವಂತಗೊಳಿಸುವ ಹಂತದಲ್ಲಿ ನಡೆಯಬೇಕಾದ ಪ್ರಯತ್ನಗಳೆಡೆಗೆ ಈ ಕಾದಂಬರಿ ಆಸಕ್ತಿ ವಹಿಸಿದೆ. ಕಾದಂಬರಿಯ ಕೊನೆಯಲ್ಲಿ ಕಾಣಿಸಿಕೊಳ್ಳುವ ಕೃಷ್ಣನ ಪಾತ್ರದ ಮೂಲಕ ಕಾದಂಬರಿಯು ಹೊಸ ಸಾಧ್ಯತೆಗಳನ್ನು ತೆರೆದಿಡುತ್ತದೆ.

೪.೨ ಕರಾವಳಿಯ ನಾಗಾರಾಧನೆ: ಸಾಂಸ್ಕೃತಿಕ ಸ್ವರೂಪ

ಕರ್ನಾಟಕ ಕರಾವಳಿಯ ಸಾಂಸ್ಕೃತಿಕ ಹಿರಿಮೆಯನ್ನು ಪರಿವೀಕ್ಷಣೆಗೆ ಒಳಪಡಿಸಿದಾಗ ಅಲ್ಲಿ ಆರಾಧನಾ ಸಂಸ್ಕೃತಿಯ ಹೆಜ್ಜೆಗುರುತುಗಳು ದಟ್ಟವಾಗಿ ವ್ಯಾಪಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇಲ್ಲಿನ ಸಾಂಸ್ಕೃತಿಕ ನೆಲೆಗಳನ್ನು ಶೋಧಿಸ ಹೊರಟ ಆಸಕ್ತ ಮನಸ್ಸುಗಳಿಗೆ ಕರಾವಳಿಯ ಆರಾಧನಾ ರಂಗಭೂಮಿ ಕೆಲವು ಮಹತ್ವದ ಒಳನೋಟಗಳನ್ನು ಪರಿಚಯಿಸುತ್ತದೆ. ಪ್ರಾಚೀನ ಕಾಲದಿಂದ ತೊಡಗಿ ಆಧುನಿಕ ಸಂವೇದನೆಗೆ ತೆರೆದುಕೊಂಡ ಇಂದಿನ ದಿನಗಳಲ್ಲಿಯೂ ಇಲ್ಲಿನ ಆರಾಧನೆಯ ರೂಪಗಳು ಹತ್ತು ಹಲವು ಬಗೆಯ ಪ್ರಯೋಗಗಳಿಗೆ ಒಳಗಾಗುತ್ತಲೇ ತುಂಬು ಜೀವಂತಿಕೆ ಪಡೆದಿರುವುದನ್ನು ಕಾಣಬಹುದು.

೪.೨.೧ ನಾಗಾರಾಧನೆಯ ವಿಶಿಷ್ಟ ಪ್ರತಿರೂಪ: 'ತಂಬಿಲ' ಕಾದಂಬರಿ

'ತಂಬಿಲ' ನಾಗಾರಾಧನೆಯ ಬಹುರೂಪಿ ಆಯಾಮಗಳನ್ನು ಹಂತ ಹಂತವಾಗಿ ತೆರೆದಿಟ್ಟ ಒಂದು ಮಹತ್ವದ ಕಾದಂಬರಿ. ಈ ಕಾದಂಬರಿ ನಾಗಾರಾಧನೆಯೊಂದಿಗಿನ ಜನಸಮುದಾಯದ ನಂಟನ್ನು ಮುಕ್ತವಾಗಿ ಕಟ್ಟಿಕೊಟ್ಟಿದೆ.

೪.೨.೨ ಕಾದಂಬರಿಯಲ್ಲಿ ಪ್ರಕಟಗೊಂಡ ನಾಗಾರಾಧನೆಯ ಸಾಂಸ್ಕೃತಿಕ ಸ್ಥಿತ್ಯಂತರಗಳು:

ನಾಗಾರಾಧನೆಯು ಈ ನೆಲದ ವಿಶಿಷ್ಟ ಆರಾಧನಾ ಪರಂಪರೆಗಳಲ್ಲಿ ಒಂದು. ಪ್ರಕೃತಿ ಆರಾಧನೆಯಾಗಿರುವ ನಾಗಾರಾಧನೆಯಲ್ಲಿ 'ತಂಬಿಲ'ವು ಒಂದು ಬಗೆಯ ಪ್ರಮುಖ ಪೂಜಾಪದ್ಧತಿ. ಕುಟುಂಬದ ಬೆಸುಗೆಯಾಗಿ, ಸೃಷ್ಟಿಯ ದ್ಯೋತಕವಾಗಿ, ಗಾಢ ನಂಬಿಕೆಯ ತಳಹದಿಯಲ್ಲಿ ನಾಗಾರಾಧನೆ ಹಾಗೂ ಅದರ ಸುತ್ತ ರೋಚಕ ಕತೆಗಳು ಜನಮಾನಸದಲ್ಲಿ ಜೀವಂತವಾಗಿದೆ. 'ನಾಗ' ಎನ್ನುವಾಗ ನಮ್ಮ ಮನೋಭೂಮಿಕೆಯಲ್ಲಿ ವಿಷದ ಹಾವು ಎಂಬ ಭಾವವಷ್ಟೇ ಒಡಮೂಡುವುದಲ್ಲ, ದೈವೀನಂಬಿಕೆ, ಭಯ, ಆತಂಕ, ರೋಮಾಂಚನ ಇವೆಲ್ಲಾ ನಮ್ಮನ್ನು ಆವರಿಸುತ್ತದೆ.

೪.೩ ಕರಾವಳಿಯ ಸಾಂಸ್ಕೃತಿಕ ಬದುಕು–ಆಚರಣೆಗಳ ಸ್ವರೂಪ:

ತುಳುನಾಡಿನ ಸಂಸ್ಕೃತಿ ಏಕಘನಾಕೃತಿಯಿಂದ ಆವೃತವಾದುದಲ್ಲ. ಇಲ್ಲಿ ಬಹುವಿನ್ಯಾಸದ, ಬಹು ಆಯಾಮಗಳ ಸಾಂಸ್ಕೃತಿಕ ಗುರುತುಗಳಿವೆ. ಅನಾದಿ ಕಾಲದಿಂದಲೂ ಸಾಮಾಜಿಕ ಸಾಮರಸ್ಯವನ್ನು ಬೆಳೆಸಿಕೊಂಡು ಬಂದ ದಿವ್ಯ ತಾಣವೂ ಹೌದು. ಇಲ್ಲಿನ ಜನರ ಪ್ರಧಾನ ವೃತ್ತಿಗಳಾದ ಕೃಷಿ, ತೋಟಗಾರಿಕೆ, ಬೀಡಿ ಉದ್ಯಮ ಮತ್ತು ವಿವಿಧ ಸಮುದಾಯಗಳ ಕುಲಕಸುಬುಗಳನ್ನು ಆಧರಿಸಿ ಇಲ್ಲಿನ ಸಾಂಸ್ಕೃತಿಕ ಜಗತ್ತು ನಿರ್ಮಾಣಗೊಂಡಿದೆ.

೪.೩.೧ ತುಳುನಾಡಿನ ಜನಪದ ಕ್ರೀಡೆಯ ಪ್ರತಿಬಿಂಬ 'ಕಂಬುಲ' ಕಾದಂಬರಿ:

ತುಳುನಾಡಿನ 'ಕಂಬುಲ' ಅಥವಾ 'ಕಂಬುಲ'ದ ಹಿನ್ನೆಲೆ, ಅದು ಒಂದು ಜನಪ್ರಿಯ ಕ್ರೀಡೆಯಾಗಿ ಧಾರ್ಮಿಕ– ಸಾಂಸ್ಕೃತಿಕ ನೆಲೆಯಲ್ಲಿ ಬೆಳೆದುಬಂದ ಬಗೆ ಮತ್ತು ಕಾಲದಿಂದ ಕಾಲಕ್ಕೆ ಆಧುನಿಕತೆಯ ಪ್ರವೇಶದೊಂದಿಗೆ ಪಡೆದುಕೊಳ್ಳುತ್ತಿರುವ ಸ್ಥಿತ್ಯಂತರಗಳ ಕುರಿತಂತೆ ಇಲ್ಲಿ ಗಮನಿಸಿಕೊಳ್ಳಬಹುದು.

೪.೩.೨ ಪ್ರತಿಷ್ಠೆ–ರಂಜನೆಗಳ ಸಮಾಗಮ : ಕಂಬುಲ

ಪ್ರಭಾಕರ ನೀರ್‌ಮಾರ್ಗರ 'ಕಂಬುಲ' ಕಾದಂಬರಿ ಸಾಂಸ್ಕೃತಿಕ ಆಶಯವುಳ್ಳ ಮಹತ್ವದ ಕಾದಂಬರಿ, ತುಳುನಾಡಿನ ಕೃಷಿಬದುಕು ಎದುರಿಸುತ್ತಿರುವ ಪಲ್ಲಟದ ನೆಲೆಗಳನ್ನು ಪರಿಚಯಿಸುತ್ತದೆ. ಕರಾವಳಿಯ ಮನರಂಜನೆಯ ಮತ್ತು ಜಾನಪದೀಯ ಆಟವಾಗಿ

ಪರಿಣಮಿಸಿರುವ ಕಂಬಳ ಇಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತ್ಯಂತರಗಳೊಂದಿಗೆ ಬೆರೆತು ಹೋದ ಆಯಾಮಗಳು ಇಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ಇಲ್ಲಿ ಶೋಧಿಸಲಾಗಿದೆ.

೪.೩.೩ ಸಾಮಾಜಿಕ–ಸಾಂಸ್ಕೃತಿಕ ಸ್ಥಿತ್ಯಂತರದ ಧ್ವನಿಯಾಗಿ 'ಕಂಬುಲ':

ನೀರ್‌ಮಾರ್ಗ ಅವರ ಬಹುತೇಕ ಕಾದಂಬರಿಗಳು ಕರಾವಳಿಯ ಜನ ಜೀವನಕ್ಕೆ ಬಲು ಹತ್ತಿರದಿಂದ ಸ್ಪಂದಿಸಿರುವುದನ್ನು ಆನೇಕ ಮಂದಿ ವಿಮರ್ಶಕರು ಗ್ರಹಿಸಿದ್ದಾರೆ. ಅವರಲ್ಲಿಯ ಕರಾವಳಿಯ ಜನಪದೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಲಾ ಮಾಧ್ಯಮಗಳೇ ಅವರ ಕಾದಂಬರಿಯ ವಸ್ತುವಾಗಿರುವುದು ಮೇಲ್ನೋಟಕ್ಕೆ ಸುಲಭವಾಗಿ ಕಾಣುವಂಥದ್ದು. ಅವರು ಕಾದಂಬರಿಗೆ ಆಯ್ಕೆ ಮಾಡಿಕೊಳ್ಳುವ ವಸ್ತುವೇ ಓದುಗರನ್ನು ಮೊದಲಿಗೆ ಸೆಳೆಯುತ್ತದೆ. ಕಾದಂಬರಿ ತನ್ನೊಳಗೆ ಹುದುಗಿಸಿಕೊಂಡ ವಸ್ತುವಿನ ಸ್ವರೂಪ ಅವರು ಅದಕ್ಕೆ ನೀಡುವ ಶೀರ್ಷಿಕೆಯ ಮೂಲಕವೇ ವ್ಯಕ್ತಗೊಳ್ಳುತ್ತದೆ. ಅಂತೆಯೇ ಕಾದಂಬರಿಯ ಶೀರ್ಷಿಕೆಯನ್ನೂ ಮೀರಿ ವಸ್ತು ವಿಸ್ತಾರಗೊಂಡಿರುವುದನ್ನು ಅವರ 'ಕಂಬುಲ'ದಂತಹ ಅನೇಕ ಕಾದಂಬರಿಗಳಲ್ಲಿ ಗುರುತಿಸಿಕೊಳ್ಳಲು ಸಾಧ್ಯವಿದೆ. ಇಲ್ಲಿ ಕಂಬುಲ ಕೇವಲ ಒಚಿದು ಜಾನಪದ ಕ್ರೀಡೆಯಾಗಿ ಮಾತ್ರ ಗಮನಸೆಳೆಯದೆ ಅದೊಂದು ಸಾಮಾಜಿಕ–ಸಾಂಸ್ಕೃತಿಕ ಕ್ರಿಯಾಚರಣೆಯಾಗಿ, ವಿಶೇಷ ಮಹತ್ವ ಪಡೆದಿದೆ. ಹೀಗೆ 'ಕಂಬುಲ 'ಸಾಮಾಜಿಕ–ಸಾಂಸ್ಕೃತಿಕ ಸ್ಥಿತ್ಯಂತರದ ಧ್ವನಿಯಾಗಿ ಅನಾವರಣಗೊಂಡಿರುವುದನ್ನು ಈ ಕಾದಂಬರಿಯುದ್ದಕ್ಕೂ ಕಂಡುಕೊಳ್ಳಲು ಸಾಧ್ಯವಿದೆ.

೪.೪ ಕರಾವಳಿಯ ಸಾಂಸ್ಕೃತಿಕ ಮೌಲ್ಯಗಳ ಸಂಕಥನ: 'ಮದಿಪು':

'ಮದಿಪು' ಕಾದಂಬರಿಯನ್ನು ವಿಶ್ಲೇಷಣೆಗೆ ಒಳಪಡಿಸುವ ಮೊದಲು ಆ ಪದದ ಅರ್ಥ ಮತ್ತು ಹಿನ್ನೆಲೆಯನ್ನು ಗಮನಿಸಿಕೊಳ್ಳಬಹುದು. ವಿದ್ವಾಂಸರಾದ ಯು.ಪಿ. ಉಪಾಧ್ಯಾಯರು ಸಂಪಾದಿಸಿದ ತುಳು ನಿಘಂಟಿನಲ್ಲಿ 'ಮದಿಪು' ಶಬ್ದಕ್ಕೆ 'ಮಾತು', 'ಕೇಳಿಕೆ', 'ಅಹವಾಲು', 'ಪ್ರಾರ್ಥನೆ', 'ಭಕ್ತರ ಪರವಾಗಿ ಭೂತದ ಮುಂದೆ ಹೇಳಿಕೊಳ್ಳುವ ಅಹವಾಲು ಹಾಗೂ ಪ್ರಾರ್ಥನೆ', 'ಮನ್ನಣೆ', 'ಗೌರವ', 'ಮೌಲ್ಯ', 'ನ್ಯಾಯ' 'ವಿಚಾರಣೆ', 'ನಿರ್ಣಯ', 'ತೀರ್ಮಾನ' ಇತ್ಯಾದಿ ವಿಸ್ತಾರವಾದ ಅರ್ಥಗಳನ್ನು ನೀಡಲಾಗಿದೆ.

೪.೪.೧ ಕಾದಂಬರಿಯಲ್ಲಿ ಪ್ರಕಟಗೊಂಡ ಮದುವೆಯ ಸಾಂಸ್ಕೃತಿಕ ಜಗತ್ತು:

ಈ ಕಾದಂಬರಿಯಲ್ಲಿ ಮದುವೆ ಕೇವಲ ಒಂದು ಆಚರಣೆಯಾಗಿ ಮಾತ್ರ ಕಂಗೊಳಿಸುವುದಿಲ್ಲ. ಬದಲಾಗಿ ಅದೊಂದು ಮೌಲ್ಯವಾಗಿ ಗಮನ ಸೆಳೆಯುತ್ತದೆ. ಅದು ಕೇವಲ ಎರಡು ಜೀವಗಳ ನಡುವಿನ ಬೆಸುಗೆ ಮಾತ್ರವಲ್ಲ. ಬದಲಾಗಿ ಎರಡು ಕುಟುಂಬಗಳ ನಡುವಿನ ಮೌಲ್ಯಗಳ ಮತ್ತು ಅನುಬಂಧದ ಭಾಂಧವ್ಯವೂ ಹೌದು.

೪.೪.೨ 'ಮದಿಪು' ತೆರೆದಿಟ್ಟ ಹಬ್ಬ–ಆಚರಣೆ–ಕೃಷಿ ಬದುಕು:

ತುಳುನಾಡಿನ 'ಬಿಸುಪರ್ಬ, ಆಟಿಡೊಂಜಿ ದಿನ, ಕೆಸರುಗದ್ದೆ ಓಟಗಳೆಲ್ಲಾ ನಗರ, ಪೇಟೆಗಳಲ್ಲಿ ಸಂಘಟನೆಗಳು ನಡೆಸುವ ಕಾರ್ಯಕ್ರಮಗಳಲ್ಲಿ ಮಾತ್ರ ಕಾಣಸಿಗುತ್ತಿವೆ. ಎಲ್ಲೋ ಹಳ್ಳಿಯ ಮೂಲೆಗಳಲ್ಲಿ ಇನ್ನೂ ನಡೆಯುತ್ತಿರಬಹುದು, ಇವುಗಳಿಗೆ ಪ್ರಚಾರ ಕೊಡುವವರು ಯಾರು? ಹಬ್ಬಗಳ ಹಿಂದಿನ ಮಹತ್ವ, ಅದರ ಸ್ವಾರಸ್ಯ, ಕೂಡು ಕುಟುಂಬದಲ್ಲಿ ಹಬ್ಬದ ಗಮ್ಮತ್ತನ್ನು 'ಕೇಳಿ ತಿಳಿದುಕೊಳ್ಳುವ' ಕಾಲಘಟ್ಟದ ನಡುವೆ ನಾವಿದ್ದೇವೆ. ಹಬ್ಬಗಳ ಆಚರಣೆಯ ಹಿನ್ನೆಲೆಯೇ ಗೊತ್ತಿಲ್ಲದೆ 'ಜನಪ್ರಿಯವಾದುದನ್ನೇ' ಹಬ್ಬವೆಂದು ಆಚರಿಸುವ ಪದ್ಧತಿಗೆ ಒಗ್ಗಿ ಹೋಗಿ 'ಗುಂಪಿನಲ್ಲಿ ಗೋವಿಂದ' ಆಗುವ ಸಂದರ್ಭಗಳೇ ಹೆಚ್ಚಾಗಿವೆ.

೪.೬ ದೈವಾರಾಧನೆಯ ಬಿಂಬ 'ಕಾರ್ನಿಕ' ಕಾದಂಬರಿ:

ತುಳುನಾಡಿನಲ್ಲಿ ದೈವಾರಾಧನೆಗೆ ವಿಶಿಷ್ಟ ಸ್ಥಾನವಿದೆ. ಇಲ್ಲಿ ಸಾಮಾನ್ಯ ಜನರ ಆಶೋತ್ತರಗಳ ಮೂರ್ತರೂಪವಾಗಿ ಭೂತಗಳು ಆರಾಧನೆಗೆ ಒಳಗಾಗುತ್ತವೆ. ತುಳುನಾಡಿನ ಸಂಸ್ಕೃತಿ ಹಾಗೂ ಜೀವನ ಕ್ರಮಗಳ ಜೊತೆ ನಡೆಸುವ ಅನುಸಂಧಾನ ಹಾಗೂ ಶೋಧನೆಯ ವಿನ್ಯಾಸವೇ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ಅನನ್ಯತೆ. ಈ ಕಾರಣದಿಂದ ಅವು ತುಳುನಾಡಿನ ಪ್ರಾದೇಶಿಕತೆಯ ಅಧ್ಯಯನಕ್ಕೆ ಪ್ರಮುಖ ಆಕರವಾಗುತ್ತವೆ. 'ಕಾರ್ನಿಕ' ಕಾದಂಬರಿ ಕೂಡ ತುಳುನಾಡಿನ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ದೈವದ ಪವಾಡಗಳು ಮತ್ತು ಮಹಿಮೆಗಳ ಪರಿಚಯ ಮಾಡಿಸುತ್ತದೆ. ಜುಮಾದಿ ಭೂತದ ಹತ್ತು ಹಲವು ಕಾರ್ನಿಕಗಳು ಈ ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತಾ ಹೋಗುತ್ತದೆ.

ಅಧ್ಯಾಯ-೫

ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳಲ್ಲಿ ಜನಪದ ರಂಗಭೂಮಿಯ ಪ್ರಭಾವ

ಕರ್ನಾಟಕ ಕರಾವಳಿ ಕಲಾರಸಿಕರ ನೆಲೆಬೀಡು. ವೈವಿಧ್ಯಮಯ ಮಾದರಿಯ ಜಾನಪದ ಮತ್ತು ಶಾಸ್ತ್ರೀಯ ಕಲೆಗಳಿಗೆ ಈ ನೆಲ ಶತಮಾನಗಳಿಂದ ಆಶ್ರಯ ನೀಡುತ್ತ ಬಂದಿದೆ. ಅಂತೆಯೇ ಕರಾವಳಿಯ ಕಲಾಪ್ರಕಾರಗಳಿಗೂ ಇಲ್ಲಿನ ಜನರ ಬದುಕಿನ ವಿಧಾನಕ್ರಮಕ್ಕೂ ಅವಿನಾಭಾವ ಸಂಬಂಧವಿದೆ. ಕಲೆಗಳನ್ನು ಆರಾಧ್ಯ ಭಾವದಿಂದ ಕಾಣುವ ಮನೋಧರ್ಮ ಇಲ್ಲಿನ ಜನರದು. ಇಂತಹ ಕರಾವಳಿ ಮಣ್ಣಿನ ಗಂಡು ಕಲೆಯೆಂದೇ ಜನಜನಿತವಾದ 'ಯಕ್ಷಗಾನ' ವು ಬೇರೆ ಬೇರೆ ಕಾರಣಗಳಿಂದಾಗಿ ಜಗದ್ವಿಖ್ಯಾತವಾಗಿದೆ.

೫.೧ ಯಕ್ಷರಂಗದ ಸಾಂಸ್ಕೃತಿಕ ಬೆರಗು: 'ಧೀಂಗಿಣ' ಕಾದಂಬರಿ:

ಯಕ್ಷಗಾನದ ಏಳುಬೀಳುಗಳ ಸುತ್ತ ಹರಡಿಕೊಂಡಿರುವ ಪ್ರಭಾಕರ ನೀರ್‌ಮಾರ್ಗರ ಮಹತ್ವದ ಕಾದಂಬರಿಯೇ ಧೀಂಗಿಣ ಕಾದಂಬರಿ. ಕರಾವಳಿಯ ಸಾಂಸ್ಕೃತಿಕ ಬಹುತ್ವವನ್ನು ದಾಖಲಿಸುವ ನಿಟ್ಟಿನಲ್ಲಿ ಪ್ರಭಾಕರರ 'ಧೀಂಗಿಣಿ' ಕಾದಂಬರಿ ಮಹತ್ವಪೂರ್ಣವೆನಿಸಿದೆ.

೫.೧.೧ ಕಾದಂಬರಿಯಲ್ಲಿ ಪ್ರಕಟಗೊಂಡ ಯಕ್ಷಗಾನದ ಸಾಂಸ್ಕೃತಿಕ ಸ್ಥಿತ್ಯಂತರಗಳು:

'ಧೀಂಗಿಣ' ಕಾದಂಬರಿಯು ಒಂದೆ ಓದಿಗೆ ದಕ್ಕುವುದಿಲ್ಲ ಇದು ಹಲವು ಓದುಗಳನ್ನು ಬಯಸುವ ಅಥವಾ ಮರು ಓದಿಗೆ ಯಾಚಿಸುವ ಕಾದಂಬರಿಯಾಗಿದೆ. ಕಲಾಬದುಕಿಗೆ ಹೊಂದಿಕೊಂಡ ಮತ್ತು ಕಲಾಜಗತ್ತನ್ನು ನಿರೂಪಿಸುವ ಅನೇಕ ವೈಚಾರಿಕ ಮತ್ತು ವಿವರಣಾತ್ಮಕ ಸಂಗತಿಗಳಿಗೆ ಕಾದಂಬರಿ ಮಿಡಿದಿದೆ. ಹೀಗೆ ಧೀಂಗಿಣ ಅನಾವರಣಗೊಳಿಸಿದ ಮಹತ್ವದ ಸಂಗತಿಗಳನ್ನು ಚರ್ಚಿಸಲಾಗಿದೆ.

೫.೨ 'ಮಾದಿರ' ಕಾದಂಬರಿಯಲ್ಲಿ ಕರಾವಳಿಯ ಜನಪದ ಕುಣಿತ:

'ಮಾದಿರ' ಎಂಬ ಅಪರೂಪದ ಕುಣಿತ ಪ್ರಕಾರಕ್ಕೆ ತುಳುನಾಡಿನಾದ್ಯಂತ ವಿಶಿಷ್ಟ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮನ್ನಣೆ ಇದೆ. ಜಾನಪದ ವಿದ್ವಾಂಸ ಪಾಲ್ತಾಡಿ ರಾಮಕೃಷ್ಣ ಆಚಾರ್ ಈ ಕುಣಿತವನ್ನು ಕುಟುಂಬ ಸಂಬಂಧಿ ಕುಣಿತ ಎಂಬುದಾಗಿ

ವರ್ಗೀಕರಿಸಿಕೊಂಡಿದ್ದಾರೆ. 'ನಲಿಕೆಯವರು' ಅಥವಾ 'ಪಾಣರರು' ಎಂಬ ಬುಡಕಟ್ಟು ಸಮುದಾಯದವರು ಕಾರ್ಕಳ ಪ್ರದೇಶದಲ್ಲಿ ನಡೆಸುವ 'ಮಾಯಿದ ಪುರುಷೆ', ಹಾಗೆಯೇ ಕರಾವಳಿಯ ಬೇರೆ ಬೇರೆ ಕಡೆಗಳಲ್ಲಿ ನಡೆಸುವ 'ಮಾದಿರ', 'ಸೋಣದ ಮದಿಮಲ್', 'ಕೀಲು ಕುದುರೆ' ಕುಣಿತವು ಕೂಡಾ ಕುಟುಂಬ ಸಂಬಂಧಿ ಕುಣಿತಗಳಾಗಿವೆ. ಈ ಬಗ್ಗೆ ಕುಣಿತದ ಬಗೆಗಿನ ವೈಶಿಷ್ಟ್ಯಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

೫.೨.೧ ತಳಸ್ತರದ ಸಾಂಸ್ಕೃತಿಕ ತುಡಿತ: ಮಾದಿರ

ಪ್ರಭಾಕರ ನೀರ್‌ಮಾರ್ಗರ ಇತರ ಅನೇಕ ಕಾದಂಬರಿಗಳಂತೆ 'ಮಾದಿರ' ಸಹ ಪ್ರಾರಂಭವಾಗುತ್ತದೆ. ಲೇಖಕರಿಗೆ ಕರಾವಳಿ ಎಂದರೆ ಇಲ್ಲಿನ ಸಂಪ್ರದಾಯ, ಆಚರಣೆಗಳೊಂದಿಗೆ ಇಲ್ಲಿನ ಹಸಿರು ಪರಿಸರ, ಪ್ರಾಣಿ–ಪಕ್ಷಿ ಸಂಕುಲವೂ ಕೂಡಾ ಸೇರಿಕೊಂಡಿವೆ. ಈ ಕಾದಂಬರಿಯ ಆರಂಭದಲ್ಲಿ ಬರುವ ಪರಿಸರದ ವರ್ಣನೆಯು ಕಾದಂಬರಿಯ ದನಿಯೂ ಹೌದು. ಅಷ್ಟೇ ಅಲ್ಲದೆ ಈ ಸುಂದರವಾದ, ಮುದಗೊಳಿಸುವ ಪ್ರಾಕೃತಿಕ ವರ್ಣನೆಯ ಮೂಲಕ ಒಂದು ಆಹ್ಲಾದಕರ ಮನಸ್ಥಿತಿಗೆ ಬರುವಂತೆ ಮತ್ತು ಕಾದಂಬರಿಯೊಳಗೆ ಪ್ರವೇಶಿಸುವಂತೆ ವಾತಾವರಣವನ್ನು ನಿರ್ಮಿಸುವ ಕೌಶಲ್ಯ ಲೇಖಕರಲ್ಲಿದೆ ಎಂಬುದನ್ನು ಈ ಕಾದಂಬರಿ ಸ್ಪಷ್ಟಪಡಿಸುತ್ತದೆ.

೫.೩ ಕರಾವಳಿಯ ಸಾಂಸ್ಕೃತಿಕ ಸಮನ್ವಯದ ನೆಲೆ: 'ಜಾತ್ರೆ' ಕಾದಂಬರಿ

'ಜಾತ್ರೆ' ಎನ್ನುವ ಪರಿಕಲ್ಪನೆ ಭಾರತ ಅದರಲ್ಲೂ ಕರ್ನಾಟಕದ ಸಂದರ್ಭದಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಪ್ರಾದೇಶಿಕವಾಗಿ ಭಿನ್ನತೆಗಳಿದ್ದರೂ ಎಲ್ಲಾ ಕಡೆಗಳಲ್ಲಿಯೂ ಜಾತ್ರೆ ಎಂದಾಗ ಒಂದು ಬಗೆಯ ಸಡಗರ, ಸಂಭ್ರಮದ ವಾತಾವರಣ ಸಹಜವಾಗಿ ನಿರ್ಮಾಣಗೊಳ್ಳುತ್ತದೆ. ಜಾತಿ–ಮತ, ಲಿಂಗ–ವರ್ಗ ತಾರತಮ್ಯಗಳಿಲ್ಲದೆ ಸಾಮುದಾಯಿಕವಾಗಿ ಪಾಲ್ಗೊಳ್ಳುವ ವಾತಾವರಣ ಇದು. ಬಹು ಬಗೆಯ ಮನಸ್ಥಿತಿಗಳನ್ನು ಒಂದು ನೆಲೆಗೆ ತರುವ ಮಾಧ್ಯಮ ಕೂಡ ಇದಾಗಿದೆ.

೫.೪ ತುಳುನಾಡಿನ ಗಂಡು ಕಲೆಯ ಕಾಳಜಿ 'ತರಿಕಿಟ' ಕಾದಂಬರಿ:

ಕರಾವಳಿಯ ಗಂಡು ಕಲೆಯಾದ 'ಯಕ್ಷಗಾನ' ಸಾಹಿತ್ಯ, ಸಂಗೀತ, ನೃತ್ಯ, ಅಭಿನಯವನ್ನು ಒಳಗೊಂಡ ಒಂದು ಸಂಪೂರ್ಣ ಕಲೆಯಾಗಿದೆ. ಈ ಯಕ್ಷಗಾನದ ಕಲಾ

ವೇದಿಕೆಯ ಕಲಾವಿದನ ಬಣ್ಣಗಾರಿಕೆ, ಹೆಜ್ಜೆಗಾರಿಕೆ, ನಾಟ್ಯ ಆತನ ಸಾಮರ್ಥ್ಯಕ್ಕೆ ಸವಾಲೆಸಗುವ ಒಂದು ಕಲಾವೇದಿಕೆಯಾಗಿದೆ. ಕರಾವಳಿಯ ಕಲೆಯನ್ನು ಮುಂದಿನ ಜನಾಂಗಕ್ಕೆ ಕೊಂಡೊಯ್ಯುವಲ್ಲಿ ಪ್ರಭಾಕರ ನೀರ್‌ಮಾರ್ಗರು 'ತರಿಕಿಟ' ಎಂಬ ಕಾದಂಬರಿಯಲ್ಲಿ, ಈ ತುಳುನಾಡ ಮಣ್ಣಿನ ಸಂಸ್ಕೃತಿಯಾದ ಯಕ್ಷಗಾನದಂತಹ ಕಲೆಯ ಅಮೂಲ್ಯ ಅಂಶಗಳನ್ನು ಹಿಡಿದಿಟ್ಟಿದ್ದಾರೆ.

೫.೫ ತುಳುನಾಡಿನ ಪೌರುಷ ಕಲೆ 'ವೇಷ' ಕಾದಂಬರಿ:

ಕಾದಂಬರಿಯ ಮುಖ್ಯ ವಸ್ತು ವೇಷ. ತುಳುನಾಡಿನಲ್ಲಿ ನವರಾತ್ರಿಯ ಸಂದರ್ಭದಲ್ಲಿ 'ಮಾರ್ಣಮಿ'(ಮಹಾನವಮಿ)ಯ ದಿನ ವೇಷ ಹಾಕುವುದು ಇಲ್ಲಿನ ರೂಢಿಯಲ್ಲಿ ಒಂದಾಗಿದೆ. ಈ ವೇಷಗಳ ಉದ್ದೇಶ ನವರಾತ್ರಿಯ ಆಚರಣೆ. ಆಚರಣೆಯ ಸಂಪ್ರದಾಯವಾಗಿ ಅಲ್ಲದೆ ಮನರಂಜನೆಗಾಗಿಯೂ ವೇಷವನ್ನು ಹಾಕುತ್ತಾರೆ. ಮುಖ್ಯವಾಗಿ ವೇಷ ಎಷ್ಟೋ ಜನರ ಹೊಟ್ಟೆ ಪಾಡಿಗಾಗಿಯೂ ಅನುಕೂಲ ಆಗಿದೆ ಎಂಬುದು ಇಲ್ಲಿನ ಮುಖ್ಯ ಚಿತ್ರಣವಾಗಿರುತ್ತದೆ.

ಅಧ್ಯಾಯ ೬

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಚಿತ್ರಣ

೬.೧ ಆಧುನಿಕ ಸಾಹಿತ್ಯದ ಹಿನ್ನೆಲೆಯಲ್ಲಿ ಸ್ತ್ರೀವಾದದ ಸ್ವರೂಪ:

ಇಂದಿನ ಆಧುನಿಕ ಕಾಲದ ಯಾವುದೇ ಸಿದ್ಧಾಂತವನ್ನು ಇಟ್ಟುಕೊಂಡು ಮಹಿಳೆ ಕುರಿತು ಅಧ್ಯಯನ ಮಾಡಿದಾಗ ಅದು ಒಂದು ಸಂಕಥನವಾಗುತ್ತದೆ. ಇಂದಿನ ಬಹುಮುಖತೆಯ ಸ್ತ್ರೀವಾದ ಪ್ರಜ್ಞೆಯ ವಿಕಾಸದ ಬೇರೆ ಬೇರೆ ಹಂತಗಳು ಸಕಾಲಿಕವಾಗಿ ಅಸ್ತಿತ್ವದಲ್ಲಿರುವ ಪರಿಣಾಮ ಅನೇಕ ನೆಲೆಗಳಲ್ಲಿ ವಿಸ್ತರಿಸಿಕೊಳ್ಳುತ್ತಾ ಇದೆ ಎಂದು ವಿವರಿಸಬಹುದು. ಏಕೆಂದರೆ ಲೇಖಕಿಯರಿಗೆ ಸ್ತ್ರೀ ಶೋಷಣೆಯ ಬಗ್ಗೆ ತಿಳಿವಳಿಕೆ ಮತ್ತು ಪ್ರತಿಭಟನಾತ್ಮಕ ಧೋರಣೆಗಳು ಮೂಡುವ ಕ್ರಿಯೆಯು ಹಲವು ಹಂತಗಳಲ್ಲಿ ನಡೆಯುತ್ತಿರುತ್ತದೆ ಅದಕ್ಕೆ ತೋರುವ ಪ್ರತಿಕ್ರಿಯೆ ಜೀವಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ, ಮನಶಾಸ್ತ್ರ, ಸಂಸ್ಕೃತಿ, ಮಾಧ್ಯಮ, ರಾಜಕೀಯ ಮುಂತಾದ ವಿಭಿನ್ನ ದೃಷ್ಟಿಕೋನದಲ್ಲಿ ನೋಡಬಹುದಾಗಿದೆ.

೬.೨ ತಳಸಮುದಾಯದ ಸ್ತ್ರೀ–ಪುರುಷ ಸಂವೇದನೆಯಾಗಿ 'ಮಾದಿರ' ಕಾದಂಬರಿ:

'ಮಾದಿರ' ಎಂಬ ಈ ಕಾದಂಬರಿಯ ಕರ್ತೃ ಪುರುಷರಾಗಿದ್ದು, ಸ್ತ್ರೀ ಸಂವೇದನೆಯನ್ನು ಚಿತ್ರಿಸುವಲ್ಲಿ ಪರಕಾಯ ಪ್ರವೇಶ ಮಾಡಿ ತುಳುನಾಡ ಸ್ತ್ರೀಯರ ಚಿಂತನೆಗಳನ್ನ ಈ ಕಾದಂಬರಿಯಲ್ಲಿ ಸೂಕ್ಷ್ಮವಾಗಿ ತೆರೆದಿಟ್ಟಿದ್ದಾರೆ. ಮುಖ್ಯವಾಗಿ ಸ್ತ್ರೀ ಸಂವೇದನೆಗೆ ಸ್ಪಂದಿಸುವ ಚೋಮನಂತಹ ಸಂವೇದನಾತ್ಮಕ ಮನಸ್ಸುಳ್ಳ ಪುರುಷ ಪಾತ್ರಗಳನ್ನು ನೀಡಿ, ಪ್ರಸ್ತುತ ಸಮಾಜದಲ್ಲಿ ಚಂದು ಗುರಿಕಾರನಂತಹ ದರ್ಪ ದೌರ್ಜನ್ಯ ಪುರುಷ ಪಾತ್ರಗಳಲ್ಲದೆ, ಸ್ತ್ರೀ ಸಂವೇದನೆಗೆ ಮಿಡಿಯುವ ಪುರುಷ ಪಾತ್ರಗಳೂ ಇವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

೬.೩ 'ತಿಲ್ಲಾನ' ಕಾದಂಬರಿಯಲ್ಲಿ ಶಿಷ್ಟ ಮತ್ತು ಪರಿಶಿಷ್ಟದ ತುಡಿತ ಹಾಗೂ ತಳಸಮುದಾಯದ ಸ್ತ್ರೀ ಚಿತ್ರಣ:

ಅಂಚಿನ ಸಮುದಾಯವನ್ನು ಪ್ರತಿನಿಧಿಸುವ ನಲಿಕೆಯವರನ್ನು ಕೇಂದ್ರವಾಗಿರಿಸಿ ಕೊಂಡು ರಚಿಸಿದ ಕಾದಂಬರಿ ತಿಲ್ಲಾನ. ಹೊಸ ತಲೆಮಾರನ್ನು ಪ್ರತಿನಿಧಿಸುವ ಆ ಸಮುದಾಯದ ಯುವಕ ಯುವತಿಯರು ತಮ್ಮ ಕುಲಕಸುಬಿನ ಕುರಿತಂತೆ ವಿಶೇಷವಾದ ಗೌರವ ಹೊಂದಲು ಬಯಸುವುದಿಲ್ಲ. ಈ ಕಾದಂಬರಿಯ ಕಥೆಯು ನೀರ್‌ಮಾರ್ಗದ ನೆಕ್ಕರೆ ಪದವಿನಲ್ಲಿ ನಡೆಯುತ್ತದೆ.

೬.೪ ತುಳುನಾಡಿನ ಅಳಿಯಕಟ್ಟಿನಲ್ಲಿ ಸ್ತ್ರೀ ಶಕ್ತಿಯಾಗಿ 'ಮದಿಪು' ಕಾದಂಬರಿ:

ಮದಿಪು ಕಾದಂಬರಿಯ ಜೀವನಾಡಿ ನಂಬಿಕೆ ಆಚರಣೆಗಳು. ತುಳುವರು ನಂಬುವ ದೈವ ದೇವರು, ಭೂತಕೋಲ, ಊರ ಜಾತ್ರೆ, ಹರಕೆ, ಪಾಪ ಪರಿಹಾರ, ಕೋಪಗೊಳ್ಳುವ ದೈವ, ಅಳಿಯಕಟ್ಟು ಪದ್ಧತಿ, ಸ್ತ್ರೀಯರ ಬಗೆಗಿನ ಕೌಟುಂಬಿಕ ಚಿತ್ರಣ ಎಲ್ಲವೂ ಈ ಕಾದಂಬರಿಯಲ್ಲಿ ಚಿತ್ರಿತಗೊಂಡಿದೆ. ಕಾದಂಬರಿಯ ಮುಖ್ಯಪಾತ್ರದಲ್ಲಿ ಕುಪ್ಪಯ್ಯ- ಅಂಬಕ್ಕೆ, ವೆಂಕಪ್ಪಯ್ಯ- ಕುಸುಮ ಕಂಡುಬರುತ್ತಾರೆ. ಅಳಿಯ ಕಟ್ಟು ಪದ್ಧತಿಯ ಬಗ್ಗೆ ಲೇಖಕರು ಇಲ್ಲಿ ಪ್ರಸ್ತಾಪಿಸಿದೆ.

ಅಧ್ಯಾಯ– ೭

ಕಾದಂಬರಿಗಳಲ್ಲಿ ಭಾಷಿಕ ಸ್ವರೂಪ

೭.೧ ಕಾದಂಬರಿಗಳಲ್ಲಿ ತುಳು ಭಾಷಾ ಸ್ವರೂಪ:

ವಿಶ್ವದ ವೈವಿಧ್ಯಮಯವಾಗಿರುವ ಪ್ರತೀ ಮಾನವ ಸಮುದಾಯಗಳಿಗೆ ಅವರದ್ದೇ ಆದ ಭಾಷಾ ವೈಶಿಷ್ಟ್ಯವಿದೆ. ಆ ಭಾಷೆಗನುಗುಣವಾಗಿ ಸಮೃದ್ಧಿಯಿಂದೊಡಗೂಡಿದ ಮಹೋನ್ನತವಾದ ಸಾಹಿತ್ಯ ಪರಂಪರೆಯಿದೆ. ಭಾಷೆಯ ಜೀವಂತಿಕೆಯಿಂದಾಗಿ ಜನಪದರ ಮೌಖಿಕ ಸಾಹಿತ್ಯ ಉಳಿದುಕೊಂಡು ಬಂದಿದೆ. ಹಾಗೂ ಲಿಖಿತ ರೂಪದಲ್ಲಿ ಅದರ ಸೊಬಗನ್ನು ದಾಖಲಿಸಿಕೊಂಡು ಬರಲಾಗಿದೆ

ಭಾಷೆ ಸಾಹಿತ್ಯವೃಕ್ಷಕ್ಕೆ ತಾಯಿಬೇರು. ಸಂಜ್ಞೆಗಳಿಂದ ಹುಟ್ಟಿಕೊಂಡ ಭಾಷೆಯ ಸ್ವರೂಪ ನಂತರದಲ್ಲಿ ಸಂಕೇತಗಳಾಗಿ, ಲಿಪಿಯಾಗಿ, ಅಕ್ಷರಗಳಾದುವು. ಈ ಅಕ್ಷರಗಳು ಪದರೂಪ ಪಡೆದು ಪದ್ಯ, ಗದ್ಯಗಳಾಗಿ ಜನರ ಮನಸ್ಸಿಗೆ ಆಹ್ಲಾದ ನೀಡಿ ಸಾಹಿತ್ಯ ಎನಿಸಿಕೊಂಡಿತು. ಮಾತು ಸಂಸ್ಕೃತಿಯ ಮುಖವಾಣಿ. "ಸಂಸ್ಕೃತಿ ಎಂಬುದು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ರೂಪಗಳಲ್ಲಿ ಅಭಿವ್ಯಕ್ತವಾಗುವ ವೈಚಾರಿಕತೆ ಹಾಗು ಜ್ಞಾನಗಳ ಸಮನ್ವಿತ ರೂಪ" ಎಂದು ರಾಬರ್ಟ್ ಅಭಿಪ್ರಾಯ ಪಟ್ಟಿದ್ದಾನೆ. (ಶಂಬಾ ಜೋಶಿ, ಭಾಷಿಕ ವಿವೇಚನೆ, ೨೦೧೦, ಪುಟ.೬) ಈ ಕಾರಣದಿಂದಾಗಿ ಸಂಸ್ಕೃತಿಯ ಒಳಗೆ ನಡೆಯುವ ಆಚಾರ–ವಿಚಾರ, ಸಂಪ್ರದಾಯ, ನಂಬಿಕೆಗಳಲ್ಲದೇ ಅಭಿಪ್ರಾಯ–ಭಿನ್ನಾಭಿಪ್ರಾಯಗಳ ಅಭಿವ್ಯಕ್ತಿಗೆ ಭಾಷೆ ಒಂದು ಮಾಧ್ಯಮ ಎನ್ನಬಹುದು

೭.೨ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪದಗಳು:

ಕಾರ್ನಿಕ, ಮಣಿಮುಟ್ಟುವುದು, ಸಿಂಗದನ, ಕಂಬುಲ, ಕೋಲ, ಜಾತ್ರೆ, ಕುಸ್ತಿ, ದಿಬ್ಬಣ, ವೇಷ, ಮಾದಿರ ಕುಣಿತ, ಮುಂತಾದ ಸಾಂಸ್ಕೃತಿಕ ಪದಗಳು ಒಳಗೊಳ್ಳುವ ತುಳು ಸಂಸ್ಕೃತಿ ಮತ್ತು ತುಳು ಭಾಷೆಯು ಕಾದಂಬರಿಯುದ್ದಕ್ಕೂ ಬಳಕೆಯಾಗಿರುವ ಹಲವು ತುಳು ಪದಗಳ ಕಾರಣ ಓದುಗರಿಗೆ ಆಪ್ತವೆನಿಸುತ್ತದೆ. ಅಲ್ಲದೇ ವಿವಿಧ ಜಾತಿ ಧರ್ಮಗಳ ಜನರು ದೈವ, ದೇವರಿಗೆ ನಡೆದುಕೊಳ್ಳುವುದನ್ನು ಕಾಣಬಹುದು. ಆ ಮೂಲಕ ತುಳುನಾಡಿನ ಮಣ್ಣಿನಲ್ಲಿ ಬೆರೆತಿರುವ ಸೌಹಾರ್ದ ಪರಂಪರೆಯನ್ನು ಪರಿಚಯಿಸುತ್ತದೆ. ಧರ್ಮ–ದೇವರ ಹೆಸರಿನಲ್ಲಿ

ಸೌಹಾರ್ದತೆ ಹಿನ್ನೆಲೆಗೆ ಸರಿದು ಪ್ರಕ್ಷುಬ್ಧ ಎನಿಸಿಕೊಂಡಿರುವ ಇಂದಿನ ತುಳುನಾಡಿನ ಸಂದರ್ಭದಲ್ಲಿ ಈ ಅಧ್ಯಯನ ಮಹತ್ವದ್ದೆನಿಸುತ್ತದೆ.

೭.೩ ಕಾದಂಬರಿಗಳಲ್ಲಿ ತುಳು ಭಾಷಾ ಪದಗಳು:

ಕೋಂಗಿ, ಪುಕ್ಕೆಲ, ವಟ್ರಾಸಿ, ಸೀಕು–ಸಂಕಟ, ಪುಕು–ಪುಕು, ಚಾಲಿ–ಪೋಲಿ, ಚಲ್ಲ್, ಕುಶಾಲು, ಪಿಸಿಂಟಿ, ಪುರುಕಟ್ಟೆ, ಗಣಗಟ್ಟಿಗ, ಬಿರ್ಸೆ ಇಂತಹ ಹಲವು ಪದಗಳು ಇವರ ಕಾದಂಬರಿಗಳಲ್ಲಿ ಕಂಡುಬರುತ್ತದೆ.

೭.೪ ಕಾದಂಬರಿ ಒಳಗಗೊಂಡ ಪ್ರಾದೇಶಿಕ ನುಡಿಗಳು ಹಾಗೂ ಗಾದೆಗಳು:

"ಕುಣಿಯಲಿಕ್ಕೆ ಬಾರದವನಿಗೆ ಅಂಗಳ ಡೊಂಕು."

"ಕಳ್ಳನಿಗೆ ಪಿಳ್ಳೆ ನೆವನ."

"ಪರಿಸ್ಥಿತಿಯೆಂಬ ಗಾಳಕ್ಕೆ ಸಿಕ್ಕ ಮೀನು."

"ಉಪ್ಪು ತಿಂದ ಮೇಲೆ ನೀರು ಕುಡಿಯಲೇ ಬೇಕು."

"ಕೋಗಿಲೆ ಗೇನು ಗೊತ್ತು ಅದರ ಸಿರಿಕಂಠ."

"ಅಡಗ ಕತ್ತರಿಯಲ್ಲಿ ಸಿಕ್ಕ ಅಡಕೆಯಂತಾಯಿತು."

"ದನ ಕರುಗಳ ಸೀಕುಸಂಕಟಕ್ಕೆ ಮದ್ದು ಕೊಡುತ್ತಾರೆ."

"ಕಾಲಿಗೆ ನೀರು ಬಂದಾಗಲೇ ಗೊತ್ತಾಗುವುದು."

"ಸ್ವಲ್ಪ ಸಲಿಗೆ ಕೊಟ್ಟರೆ ಅಟ್ಟದ ಮೇಲೆ ಕುಳಿತುಕೊಳ್ಳುತ್ತೀಯ."

"ಸ್ಥಾನಮಾನ ಎಂದರೆ ಅಂಬಾರಿಯಲ್ಲಿ ಕುಳ್ಳಿರಿಸಿ ಬಲಿಬರಿಸಬೇಕಾ."

"ಮತ್ತೆ ಲಟ್ಟಗಟ್ಟಿ ಮುಟ್ಟಿನ ಜವನ ನೀನು ಪಹಿಲ್ವಾ ನನಲ್ಲದೆ ಇನ್ನೇನು."

"ಇವನಿಗೆ ಏನು ರಾಹು ಬಡಿದಿದೆ ಒಂದು ತರಹ ಜೀವವಿಲ್ಲದ ಹಾಗೆ ಮಾಡುತ್ತೀಯಲ್ಲ."

"ಅಯ್ಯೋ ಇದು ಸರಿಯಾಗುವ ಬಾಬತ್ತಲ್ಲ ಕಲ್ಲು ಬಂಡೆ ಸ್ವಾಮಿ.'

"ಕೆಟ್ಟ ಬುದ್ಧಿ ಬಿಡದಿದ್ದರೆ ಕಾಲವೇ ಅವರಿಗೆ ಬುದ್ಧಿ ಕಲಿಸುತ್ತದೆ."

ಮೊದಲಾದ ತುಳು ಮಿಶ್ರಿತಪದಗಳು ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳಲ್ಲಿ ಕಂಡುಬರುವುದಲ್ಲದೆ ಇದು ತುಳುನಾಡ ಪ್ರದೇಶಕ್ಕೆ ಸಂಬಂಧಪಟ್ಟ ಕಥಾನಕ ಎಂಬುವುದನ್ನು ಸುಲಭವಾಗಿ ಅರ್ಥಮಾಡಬಹುದಾಗಿದೆ.

ಸಮಾರೋಪ

ಒಂದು ಪ್ರದೇಶದ ಸಾಂಸ್ಕೃತಿಕ ಹಾಸು ಹೊಕ್ಕುಗಳನ್ನು, ಪಲ್ಲಟಗಳನ್ನು ಸಾಹಿತ್ಯದ ಒಂದು ಪ್ರಕಾರದ ಮೂಲಕ ಅಧ್ಯಯನ ಮಾಡುವ ಸಂದರ್ಭದಲ್ಲಿ ಹಲವಾರು ತೊಡಕುಗಳು ಎದುರಾಗುತ್ತವೆ. ಒಂದು ಪ್ರಕಾರ ಇಡೀ ಪ್ರದೇಶದ ಸಂಪೂರ್ಣ ದಾಖಲೆಯಾಗಿರುವುದಿಲ್ಲ. ಅಲ್ಲದೆ ಅದು ಪ್ರಾದೇಶಿಕ ಸಂಸ್ಕೃತಿಯನ್ನು ತೋರಿಸುವುದು ಸಾಧ್ಯವಿಲ್ಲ. ಕನ್ನಡದ ಸಾಹಿತ್ಯದ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಸಾಹಿತ್ಯವು ಈ ಪ್ರದೇಶದ ಎಲ್ಲಾ ಸಾಂಸ್ಕೃತಿಕ ಮಗ್ಗುಲನ್ನು ತೆರೆದಿಟ್ಟಿಲ್ಲ. ಕಾದಂಬರಿಯಂತಹ ಸಾಹಿತ್ಯವು ಒಂದು ಪ್ರದೇಶದ ಸಾಂಸ್ಕೃತಿಕ ಪರಿಸರವನ್ನು ವಿವರಿಸಲು ಸಾಧ್ಯವಾಗಬಹುದು. ತುಳುನಾಡಿನಲ್ಲಿ ತುಳು ಲಿಪಿ ಇದ್ದರೂ ಅದರ ಬಳಕೆ ಇಂದಿಗೂ ಅಪರೂಪವೇ ಆಗಿದೆ. ಅನೇಕ ಭಾಷೆಯ ಜನ ತುಳುನಾಡಿನಲ್ಲಿ ಇದ್ದರು ಸಹ ಕನ್ನಡವೊಂದೇ ಲಿಪಿ ಆಗಿರುವುದು ಇಲ್ಲಿನ ವಿಶೇಷತೆಯಾಗಿದೆ.

ಕರ್ನಾಟಕದ ಸಂಸ್ಕೃತಿಯಲ್ಲಿ ತುಳುನಾಡು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ತುಳುನಾಡಿನಲ್ಲಿ ಹುಟ್ಟಿ ಬೆಳೆದ ಪ್ರಭಾಕರ ನೀರ್‌ಮಾರ್ಗರು ತನ್ನ ಪರಿಸರದೊಂದಿಗೆ ಅನುಭವಗಳನ್ನು ನಾಡಿನ ಹಿರಿಯರಿಂದ ಕೇಳಿ ತಿಳಿದ ವಿಚಾರಗಳನ್ನು ತುಳುನಾಡಿನಲ್ಲಿ ನಡೆದ ಕ್ರಾಂತಿಗಳನ್ನು ಅಲ್ಲದೆ ಇಲ್ಲಿನ ಸಾಂಸ್ಕೃತಿಕ ಚರಿತ್ರೆಗಳನ್ನು ಸವಿಸ್ತಾರವಾಗಿ ತನ್ನ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ತುಳುನಾಡಿನ ಪ್ರಾದೇಶಿಕ ಪರಿಧಿಯ ವ್ಯಾಪ್ತಿಯೊಳಗೆ ಬರುವ ಸಾಂಸ್ಕೃತಿಕ ಅಂಶಗಳನ್ನು ಹಾಗೂ ಆಧುನಿಕತೆಯಿಂದಾಗಿ ಆಗಬಹುದಾದ ಪರಿಣಾಮದ ಪಲ್ಲಟಗಳನ್ನು ತನ್ನ ಕೃತಿಯೊಳಗೆ ದಾಖಲಿಸಿದ್ದಾರೆ. ಕರಾವಳಿಯ ಜನರ ನಡುವಿನ ಸೌಹಾರ್ದತೆ ಹಾಗೂ ಇತ್ತೀಚೆಗೆ ಕೆಲವು ವರ್ಷಗಳಿಂದ ನಡೆಯುತ್ತಿರುವ ಸಂಘರ್ಷಗಳನ್ನು ಹಾಗೂ ತಳಸ್ತರದ ಸಮುದಾಯದ ಸಂವೇದನೆಗಳನ್ನು ಕಾದಂಬರಿಯೊಳಗೆ ತರುವ ಮೂಲಕ ವಾಸ್ತವ ವಿಚಾರಗಳಿಗೆ ಹೆಚ್ಚು ಹತ್ತಿರ ಸಂಬಂಧವನ್ನು ಕಾಯ್ದುಕೊಂಡಿದ್ದಾರೆ. ಕರಾವಳಿಯ ಗಂಡು ಕಲೆಯಾದ ಯಕ್ಷಗಾನ ಹಾಗೂ ಕಲೆಗಾರನ ಬದುಕಿನ ಒಳನೋಟಗಳನ್ನು ಕಾದಂಬರಿಯಲ್ಲಿ ಮನ ತಟ್ಟುವಂತೆ ಚಿತ್ರಿಸಿದ್ದಾರೆ. ತುಳುನಾಡಿನ ಆರಾಧನೆ, ಆಚರಣೆ, ಕ್ರೀಡೆ ಇತ್ಯಾದಿ ಹಲವು ವಿಚಾರಗಳನ್ನು ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ. ಸಾಹಿತ್ಯದ ಮೂಲಕ ನಡೆದಿರುವ ಇಂತಹ ದಾಖಲೆಗಳು ಮುಂದಿನ ತಲೆಮಾರಿಗೆ ಸಾಂಸ್ಕೃತಿಕ ಸಾಕ್ಷಿಗಳಾಗಿ ಉಳಿಯುವುದರಲ್ಲಿ ಸಂಶಯವಿಲ್ಲ. ಇವರ

ಕಾದಂಬರಿಯೂ ತುಳುನಾಡಿನ ಸಂಸ್ಕೃತಿಯ ಅಧ್ಯಯನದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹೊಸ ಮಾರ್ಗವನ್ನು ತೋರಿಸಲಿವೆ.

ಕರಾವಳಿ ಜನರ ಜೀವನೋಪಾಯಕ್ಕೆ ಈ ಕಾಡು–ಕಡಲು ಅತ್ಯಮೂಲ್ಯ ಕೊಡುಗೆಯನ್ನು ನೀಡಿವೆ. ಇಲ್ಲಿನ ಶಿಕ್ಷಣ, ವಿಜ್ಞಾನ, ಸಾಹಿತ್ಯ, ವ್ಯಾಪಾರ, ಜನಪದ ಕಲೆ, ಆರಾಧನೆ, ಆಚರಣೆ, ಉಡುಗೆ ತೊಡುಗೆ, ಕೃಷಿ, ಕ್ರೀಡೆ ಮೊದಲಾದವುಗಳು ಇತರ ಪ್ರದೇಶಗಳಿಗಿಂತ ಹೆಚ್ಚು ಆಕರ್ಷಣೀಯವಾಗಿ ಕಾಣಲು ಕಾರಣವಾಗಿದೆ. ಅತ್ಯುತ್ತಮ ಪ್ರಾಕೃತಿಕ ಸಂಪತ್ತನ್ನು ಹೊಂದಿರುವ ಈ ಪ್ರದೇಶದ ಜನ ಪ್ರಕೃತಿಯನ್ನು ಪೂಜ್ಯನೀಯವಾಗಿ ಕಾಣುತ್ತಾರೆ. ಉದಾತ್ತ ಜೀವನ ಮೌಲ್ಯವನ್ನು ಹೊಂದಿರುವ ಕರಾವಳಿಯ ಬದುಕು ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳಲ್ಲಿ ಜೀವಂತವಾಗಿ ವರ್ಣಿಸಲ್ಪಟ್ಟಿದೆ.

ದಕ್ಷಿಣ ಕನ್ನಡದ ಜನರ ಮೇಲೆ ಇಲ್ಲಿನ ಸಾಂಸ್ಕೃತಿಕ ಪರಿಸರ ವಿಶಿಷ್ಟವಾದ ಪ್ರಭಾವವನ್ನು ಬೀರಿದೆ. ಹಾಗಾಗಿ ಸ್ವಾಭಾವಿಕವಾಗಿ ಕವಿ, ಲೇಖಕ, ಕಾದಂಬರಿಕಾರರ ಮೇಲೂ ಪ್ರಭಾವವನ್ನು ಬೀರಿದೆ. ಸಾಂಸ್ಕೃತಿಕ ಪರಿಸರದಲ್ಲಿ ಮಹತ್ವಪೂರ್ಣವಾದ ಕಳೆ ಕಾರಣಿಕಗಳಿಂದ ಕೂಡಿದ ಭೂತಾರಾಧನೆ, ರಾಜ ಗಾಂಭೀರ್ಯದ ಯಕ್ಷಗಾನ, ಭಯ ಭಕ್ತಿಯ ನಾಗಾರಾಧನೆ, ಗರ್ವ ಗೌರವದ ಕಂಬಳ, ಮೋಜಿನ ಕೋಳಿ ಅಂಕ ಮೊದಲಾದವು ದಕ್ಷಿಣ ಕನ್ನಡದಲ್ಲಿ ಹಿಂದಿನಿಂದಲೇ ಬೆಳೆದುಕೊಂಡು ಬಂದಿರುವ ಸಾಂಸ್ಕೃತಿಕ ಅಸ್ಮಿತೆಗಳಾಗಿವೆ.

'ತುಳುನಾಡು' ಎಂದು ಕರೆಯಲ್ಪಡುವ ದಕ್ಷಿಣ ಕನ್ನಡ ಜಿಲ್ಲೆಗೆ ಮೇಲಿನದೊಂದೇ ವಿಶೇಷತೆಯಲ್ಲ. ಇಲ್ಲಿರುವ ಸಾಂಸ್ಕೃತಿಕ ಕಲೆಗಳು, ಆಚಾರ–ವಿಚಾರಗಳು, ಉಡುಗೆ–ತೊಡುಗೆಗಳು, ಇಲ್ಲಿ ಬಳಕೆಯಲ್ಲಿರುವ ಹಲವಾರು ಭಾಷೆಗಳು, ಅದರಲ್ಲಿಯೂ ಜನರ ವ್ಯಕ್ತಿತ್ವವನ್ನು ಬಿಂಬಿಸುವಂತಿರುವ ತುಳು ಭಾಷೆ, ಇಲ್ಲಿನ ಜನರ ಜೀವನಕ್ರಮ, ಅವರ ದೃಷ್ಟಿಕೋನಗಳು, ಬದುಕುವ ರೀತಿ, ಮಾತುಗಾರಿಕೆಯಲ್ಲಿ ಕಾಣಿಸುವ ಸೊಗಡು ಇವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಿಸುವ ಭಿನ್ನ ಅಂಶಗಳಾಗಿವೆ. ಈ ಅಂಶಗಳಿಂದಾಗಿಯೇ ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕದೊಳಗಿದ್ದೂ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ. ಈ ಪ್ರತ್ಯೇಕತೆ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಪ್ರಬಾಕರ ನೀರ್‌ಮಾರ್ಗ ಅವರು ತಮ್ಮ ಕಾದಂಬರಿಗಳಲ್ಲಿ ಅತ್ಯಂತ ಭಾವಪೂರ್ಣವಾಗಿ ಸೆರೆಹಿಡಿದಿದ್ದಾರೆ.

ಈ ಸಂಶೋಧನಾ ಮಹಾಪ್ರಬಂಧದ ಆರಂಭದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆಗಳ ಬಗ್ಗೆ ಚರ್ಚಿಸಿದ್ದು ಅಧ್ಯಯನದ ಪ್ರಸ್ತುತೆಯನ್ನು ಸ್ಪಷ್ಟಪಡಿಸಿದ್ದೇನೆ. ಮೊದಲನೇ ಅಧ್ಯಾಯದಲ್ಲಿ ಸಂಸ್ಕೃತಿ ಎಂಬುದರ ವ್ಯಾಖ್ಯೆಯೊಂದಿಗೆ ಪ್ರದೇಶ, ಪ್ರಾದೇಶಿಕ, ಪ್ರಾದೇಶೀಕರಣದ ಬಗ್ಗೆ ಉಪವಿಭಾಗಗಳೊಂದಿಗೆ ವಿಮರ್ಶಿಸಿದ್ದೇನೆ. ಕರಾವಳಿಯ ಕಥನ ಸಾಹಿತ್ಯದೊಂದಿಗೆ ಇಲ್ಲಿನ ಪ್ರಾದೇಶಿಕತೆಯು ಹೇಗೆ ಹಾಸು ಹೊಕ್ಕಾಗಿದೆ ಎಂಬ ಅಂಶವನ್ನು ಈ ಪ್ರಬಂಧದಲ್ಲಿ ಗುರುತಿಸಿದ್ದೇನೆ.

ಅಧ್ಯಾಯ ಎರಡರಲ್ಲಿ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸಂರಚನೆ ಯಾವ ರೀತಿ ಬದುಕಿನ ವಿನ್ಯಾಸವನ್ನು ರಚಿಸಿವೆ ಎಂಬುದರ ಕುರಿತು ಚರ್ಚಿಸಿದ್ದೇನೆ. ಮೂರನೇ ಅಧ್ಯಾಯದಲ್ಲಿ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಅಡಗಿರುವ ಐತಿಹಾಸಿಕ ಹಾಗೂ ಮೌಖಿಕ ಚರಿತ್ರೆಯ ಮಾದರಿಯನ್ನು ವಿವಿಧ ಆಕರಗಳೊಂದಿಗೆ ಅಧ್ಯಯನ ಮಾಡಿ ದಾಖಲಿಸಿದ್ದೇನೆ. ನಾಲ್ಕನೇ ಅಧ್ಯಾಯದಲ್ಲಿ ಕರಾವಳಿಯ ಆಚರಣಾತ್ಮಕ ಬದುಕು ಕಾದಂಬರಿಗಳಲ್ಲಿ ಯಾವ ರೀತಿ ಚಿತ್ರಿತಗೊಂಡಿದೆ ಎಂಬುದನ್ನು ಚರ್ಚಿಸಿದ್ದೇನೆ. ಐದನೇ ಅಧ್ಯಾಯದಲ್ಲಿ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಜನಪದ ರಂಗಭೂಮಿಯ ಪ್ರಭಾವದ ಬಗ್ಗೆ ಅಧ್ಯಯನ ಮಾಡಿ ಮಹಾಪ್ರಬಂಧದಲ್ಲಿ ದಾಖಲಿಸಿದ್ದೇನೆ. ಆರನೇ ಅಧ್ಯಾಯದಲ್ಲಿ ಕಾದಂಬರಿಗಳಲ್ಲಿ ಸ್ತ್ರೀ ಚಿತ್ರಣದ ಬಗೆಗಿನ ಸಂವೇದನೆ ಹಾಗೂ ಆಧುನಿಕತೆಯ ಪ್ರಭಾವ ತುಳುನಾಡ ಮಹಿಳಾ ಸಮುದಾಯಕ್ಕೆ ಹೇಗೆ ತಟ್ಟಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಏಳನೇ ಅಧ್ಯಾಯದಲ್ಲಿ ಕರಾವಳಿಯ ಭಾಷೆ, ಹಾಗೂ ಇತರ ಭಾಷಿಕ ವಿಚಾರಗಳನ್ನು ವಿಶ್ಲೇಷಿಸಿದ್ದೇನೆ. ಅನುಬಂಧದಲ್ಲಿ ಪ್ರಭಾಕರ ನೀರ್‌ಮಾರ್ಗ ಅವರ ಸಾಹಿತ್ಯ ಪಥ ಮತ್ತು ಜೀವನದ ಬಗ್ಗೆ ವಿವರಿಸಿದ್ದೇನೆ.

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ಮೂಲಕ ತಾತ್ವಿಕ ಹಾಗೂ ಸೈದ್ಧಾಂತಿಕ ವಿವೇಚನೆಗಳನ್ನು ಬಳಸಿಕೊಂಡು ವಿವರಿಸುವ, ವಿಮರ್ಶಿಸುವ, ವಿಶ್ಲೇಷಿಸುವ, ತೌಲನಿಕಗೊಳಿಸುವ ಮಾನದಂಡಗಳನ್ನು ಇಡೀ ಅಧ್ಯಯನದೊಳಗೆ ಪ್ರಜ್ಞಾಪೂರ್ವಕವಾಗಿ ಬಳಸಿದ್ದೇನೆ. ಒಟ್ಟಾರೆಯಾಗಿ ವಿವರಣಾತ್ಮಕ. ವಿಮರ್ಶಾತ್ಮಕ, ತುಲನಾತ್ಮಕ, ವ್ಯಕ್ತಿನಿಷ್ಠ, ವಸ್ತುನಿಷ್ಠ, ಸಂದರ್ಶನಗಳಂತಹ ವಿಧಾನಗಳಿಂದ ನೀರ್‌ಮಾರ್ಗರ ಕಾದಂಬರಿಗಳು ಕರಾವಳಿ ಪ್ರದೇಶದಲ್ಲಿ ಸಾಂಸ್ಕೃತಿಕವಾಗಿ ಪ್ರತಿನಿಧಿಸುವ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಿ ಫಲಿತಗಳೊಂದಿಗೆ ದಾಖಲಿಸಿದ್ದೇನೆ.

ಅಧ್ಯಯನದ ಫಲಿತಗಳು

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳು ಒಳಗೊಂಡ ಸಾಮಾಜಿಕ ಅಸಮಾನತೆ, ಜಾತಿವ್ಯವಸ್ಥೆ, ಅಧಿಕಾರದ ದರ್ಪ, ಅನ್ಯಾಯ, ಅಧಿಕಾರಕ್ಕಾಗಿ ನಡೆಯುವ ಸಂಘರ್ಷ ಮುಂತಾದ ಪ್ರಚಲಿತ ವಿಚಾರಗಳನ್ನು ಪ್ರತಿನಿಧಿಸಿವೆ.

ಪರಂಪರೆಗೆ ಸಂಬಂಧಿಸಿ ಪುರುಷ ಪ್ರಧಾನ ವ್ಯವಸ್ಥೆ, ಬಂಟ ಸಮುದಾಯಕ್ಕೆ ಸಂಬಂಧಿಸಿದ ಅಧಿಕಾರದ ಪ್ರತೀಕವಾದ ಗುತ್ತಿನ ಮನೆ, ಅಲ್ಲಿಯ ಆಂತರಿಕ ಕಲಹ, ಅವಿಭಕ್ತ ಕುಟುಂಬ ಪದ್ಧತಿ, ಅಲ್ಲಿಯ ಸ್ತ್ರೀಯರ ಸ್ಥಾನಮಾನಗಳು, ಅಳಿಯ ಸಂತಾನ ಕುಟುಂಬ ಪದ್ಧತಿಗಳು ನೀರ್‌ಮಾರ್ಗರ ಕಾದಂಬರಿಗಳಲ್ಲಿ ಯಥಾ ರೂಪದಲ್ಲಿ ಮೂಡಿಬಂದಿದೆ.

ಆರಾಧನೆ, ನಂಬಿಕೆಗಳು, ಜನಪದ ಆಟ ಕೂಟಗಳು, ದಲಿತ ಬದುಕಿನ ವಿವರಗಳು, ಹೆಣ್ಣು-ಗಂಡಿನ ವೈವಾಹಿಕ ಸಂಬಂಧ ಮತ್ತು ವಿವಾಹೇತರ ಸಂಬಂಧಗಳು, ಅಂತರ್ಜಾತಿ ಸಾಮರಸ್ಯ, ಸಾಂಸಾರಿಕ ಸಂಬಂಧ, ಕೋಮು ದ್ವೇಷ ಮತ್ತು ಕೋಮು ಸಾಮರಸ್ಯ, ವ್ಯವಾಹಾರ ಮುಂತಾದ ಬದುಕಿನ ಭಾಗವಾಗಿರುವ ಸಂಗತಿಗಳು, ಜನರ ನಡುವಿನ ಕೊಡು ಕೊಳ್ಳುವಿಕೆಗಳು ಇವರ ಕಾದಂಬರಿಗಳಲ್ಲಿ ಬೆಳಕು ಕಂಡಿದೆ.

ತುಳುನಾಡಿನ ಜನರ ಸಾಂಸ್ಕೃತಿಕ ಬದುಕಿನ ಮುಖ್ಯ ಸಂಗತಿಗಳು ಈ ಎಲ್ಲಾ ವಿಚಾರಗಳನ್ನು ಪ್ರಭಾಕರ ನೀರ್‌ಮಾರ್ಗ ಅವರು ತಮ್ಮ ಕಾದಂಬರಿಯಲ್ಲಿ ತರುವುದರ ಮೂಲಕ ಕರಾವಳಿಯ ಸಾಂಸ್ಕೃತಿಕ ವಿಸ್ಮಯಗಳನ್ನು ಸಾಹಿತ್ಯಾತ್ಮಕವಾದ ದಾಖಲೆಯಾಗಿ ಮುಂದಿನ ತಲೆಮಾರಿಗೆ ನೀಡಿರುವುದು ಗಮನಾರ್ಹವಾಗಿದೆ.

ಕೃಷಿ ಜನರ ಜೀವಾಳವಾಗಿದ್ದ ಪ್ರದೇಶಗಳು ಇಂದು ಆಧುನಿಕತೆಯ ಪ್ರವೇಶದಿಂದಾಗಿ, ವಾಣಿಜ್ಯ ಉದ್ದಿಮೆಗಳಿಗೆ ಬಳಕೆಯಾಗುತ್ತಿದೆ. ಈ ಲಾಭದ ಉದ್ದೇಶದಿಂದ ಕೃಷಿಯನ್ನು ಕಡೆಗಣಿಸಲಾಯಿತು. ಈ ಮೂಲಕ ಕೃಷಿ ಸಂಬಂಧಿತ ಸಂಸ್ಕೃತಿಯ ಭಾಗಗಳು ಕ್ಷೀಣಿಸತೊಡಗಿದವು. ಇದರಿಂದ ಎದರಾಗುವ ಸಮಸ್ಯೆಗಳ ಬಗೆಗೆ ಲೇಖಕರು ಆತಂಕವನ್ನು ಕಾದಂಬರಿಯ ಮೂಲಕ ಅನಾವರಣಗೊಳಿಸಿದ್ದಾರೆ.

ಶೈಕ್ಷಣಿಕ ಮತ್ತು ಆಡಳಿತ ಭಾಷೆಯಾಗಿ ಇಲ್ಲಿ ಕನ್ನಡವು ಪ್ರಧಾನವಾಗಿ ಬಳಕೆಯಾಗುತ್ತದೆಯಾದರೂ ಸಂಪರ್ಕ ಭಾಷೆಯಾಗಿ ತುಳು ಅತಿ ಪ್ರಾಮುಖ್ಯ ಸ್ಥಾನವನ್ನು

ಪಡೆದುಕೊಂಡಿದೆ. ತುಳು ಮಾತನಾಡುವ ಜನರಲ್ಲದೆ ಕೊಂಕಣಿಗರು, ಹವ್ಯಕರು, ಮುಸ್ಲಿಮರು, ಕ್ರೈಸ್ತರು, ಮಲಯಾಳಿಗಳೂ, ತಮಿಳರು ಹಾಗೂ ಇತರ ಭಾಷೆಗಳನ್ನಾಡುವ ಅಪಾರ ಜನರು ಇಲ್ಲಿದ್ದು ಅವರೆಲ್ಲ ತುಳು ಭಾಷೆ ಮತ್ತು ಸಂಸ್ಕೃತಿಯ ಜೊತೆಗೆ ಆಪ್ತವಾದ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ. ಹಾಗಾಗಿ ಈ ಪ್ರದೇಶ ಹಲವು ಭಾಷೆಗಳ, ಹಲವು ಜನಾಂಗಗಳ, ಹಲವು ಸಂಸ್ಕೃತಿ ಹಾಗೂ ಹಲವು ಜೀವನ ಕ್ರಮಗಳ ನೆಲೆವೀಡಾಗಿದೆ. ಈ ಬಹುಮುಖೀ ಪರಂಪರೆಗಳ ಸಮೃದ್ಧಿಯನ್ನು ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಕರಾವಳಿಯ ಸ್ವಾತಂತ್ರ್ಯ ಹೋರಾಟದ ಕಥನ ನೀರ್‌ಮಾರ್ಗರ ಕಾದಂಬರಿಯಲ್ಲಿ ವಿಶಿಷ್ಟವಾಗಿ ನಿರ್ಮಾಣಗೊಂಡಿದೆ. ಐರೋಪ್ಯರ ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ಆಡಳಿತ ವ್ಯವಸ್ಥೆಗಳು ಎಲ್ಲೆಲ್ಲಿ ಸ್ಥಾಪಿತಗೊಂಡವೋ ಅಲ್ಲೆಲ್ಲಾ ಅವ್ಯವಸ್ಥೆಯ ವಿರುದ್ಧ ಪ್ರಾದೇಶಿಕ ಪ್ರತಿರೋಧಗಳು ವಿವಿಧ ರೂಪದಲ್ಲಿ ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ತುಳುನಾಡಿನಲ್ಲಿ ನಡೆದಿರುವ ಅಂತಹ ಐತಿಹಾಸಿಕ ಘಟನೆಗಳು ಇವರ ಕಾದಂಬರಿಗಳಲ್ಲಿ ಅನಾವರಣಗೊಂಡಿದೆ.

ಜಾಗತಿಕವಾಗಿ ಕಂಡು ಬಂದ ರೈತ ದಂಗೆಗಳು, ಆದಿವಾಸಿ, ಬುಡಕಟ್ಟು ಜನಾಂಗಗಳ ದಂಗೆಗಳು, ಕಾರ್ಮಿಕ ಕ್ರಾಂತಿಗಳು, ಸೈನಿಕ ದಂಗೆಗಳು, ನಾಗರೀಕ ಜನರ ದಂಗೆಗಳು, ತಳ ಸಮುದಾಯದ ಮತ್ತು ಮಹಿಳಾ ವರ್ಗಗಳ ಪ್ರತಿಭಟನೆ ಇತ್ಯಾದಿಗಳು ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿಯೂ ಕಾಣಬಹುದು.

ತುಳುನಾಡಿನಲ್ಲಿರುವ ಭೂತಾರಾಧನೆ, ಸಿರಿ ಆರಾಧನೆ, ಕುಣಿತಗಳಾದ ಆಟಿ ಕಳೆಂಜ, ಮಾದಿರ ಕುಣಿತ, ಪಿಲಿಪಂಜಿ ಕುಣಿತ, ಕರಂಗೋಲು ಕುಣಿತ, ತುಳುನಾಡಿನ ಮಣ್ಣಿನ ಸಂಸ್ಕೃತಿಯ ಭಾಗವಾಗಿದೆ. ಈ ಎಲ್ಲಾ ವಿಚಾರಗಳು ಕಾದಂಬರಿಯಲ್ಲಿ ವರ್ಣಿತವಾಗಿವೆ.

ನಾಗಾರಾಧನೆ ಕರಾವಳಿಯ ಸಾಂಸ್ಕೃತಿಕ ಬಹುತ್ವವನ್ನು ಪ್ರತಿಫಲಿಸುವ ಒಂದು ಜೀವಂತ ಆರಾಧನಾ ಪ್ರಕಾರ. ನಾಗಬನ, ನಾಗರಹಾವು, ತಂಬಿಲ, ನಾಗ ಸಂಸ್ಕಾರ, ನಾಗಮಂಡಲ ಇವೆಲ್ಲವೂ ಈ ಆರಾಧನೆಯ ವಿಭಿನ್ನ ಸಂಕೇತಗಳು. ನಾಗಾರಾಧನೆಯು ಕರಾವಳಿಯ ಜನರ ಪಾಲಿಗೆ ಒಂದೆಡೆಯಲ್ಲಿ ಭಯ ಮತ್ತು ಭಕ್ತಿಯ ಸಂಕೇತವಾಗಿ ಪರಿಣಮಿಸಿದರೆ, ಇನ್ನೊಂದೆಡೆಯಲ್ಲಿ ಅದು ಸಾಂಸ್ಕೃತಿಕ ಉತ್ಸವವೂ ಹೌದು. ಈ

ನಾಗಾರಾಧನೆಯ ಸಾಂಸ್ಕೃತಿಕ ಹಿರಿಮೆಯನ್ನು ಅದರ ವೈಭವ ಪೂರ್ಣ ಆಚರಣೆಯ ಪರಿಚಯದ ಹಿಂದೆ ಸಾಮಾನ್ಯ ಜನರಿಗೂ ತಲಪುವಂತೆ ಕಥನ ರೂಪದಲ್ಲಿ ಕಟ್ಟಿದ ಕೀರ್ತಿ ಲೇಖಕ ಪ್ರಭಾಕರ ನೀರ್‌ಮಾರ್ಗ ಅವರಿಗೆ ಸಲ್ಲುತ್ತದೆ.

ತುಳುನಾಡಿನ ವೈಯಕ್ತಿಕ ಪ್ರತಿಷ್ಠೆ, ಜಾತಿ ವ್ಯವಸ್ಥೆ, ಧಾರ್ಮಿಕ ಪದ್ಧತಿಗಳು, ಪೌರುಷ, ಸಾಮಾಜಿಕ ಅಂತರ, ಕುಟುಂಬ ವ್ಯವಸ್ಥೆ, ನ್ಯಾಯ ತೀರ್ಮಾನ, ಗಂಡು-ಹೆಣ್ಣಿನ ಆಕರ್ಷಣೆ, ಜಾತಿ ಪದ್ಧತಿ-ಇತ್ಯಾದಿ ತುಳುನಾಡಿನ ಸಾಮಾಜಿಕ ಬದುಕಿನ ನಾನಾ ಮಗ್ಗುಲುಗಳನ್ನು ಕಂಬಳದಂತಹ ಜನಪದ ಕ್ರೀಡೆಯನ್ನು ಸಾಂಕೇತಿಕವಾಗಿ ಮೂಡಿ ಬರುವ ಪ್ರತಿಷ್ಠೆಯ ಸಂಕೇತವಾಗಿ ಈ ಜನಪದ ಕ್ರೀಡೆ ಜನಮನವನ್ನು ಸೂರೆಗೊಂಡ ಬಗೆಯನ್ನು ಕಾದಂಬರಿಯಲ್ಲಿ ಕಟ್ಟಿ ಕೊಟ್ಟಿದ್ದಾರೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಚಾಲ್ತಿಯಲ್ಲಿದ್ದ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ತೆರೆದಿಡಲು ಪ್ರಯತ್ನಿಸಲಾಗಿದೆ. ಭೂ ಮಸೂದೆಗೂ ಮೊದಲು ಮತ್ತು ನಂತರದ ದಿನಗಳಲ್ಲಿ ಸಾಮಾಜಿಕ ಬದುಕು ಮತ್ತು ಸಂಬಂಧ ಸ್ವರೂಪದಲ್ಲಿ ಆಗಿರುವ ಪಲ್ಲಟಗಳು ಇವರ ಕಾದಂಬರಿಗಳಲ್ಲಿ ಪ್ರಕಟಗೊಂಡಿದೆ. ಒಡೆಯ ಮತ್ತು ಒಕ್ಕಲು ಸಂಬಂಧ, ಗೌರವ ಕೊಡುವುದು ಮತ್ತು ಪಡೆಯುವುದು, ಗೌರವವನ್ನು ಕೊಡದಿದ್ದಾಗ ಬಲತ್ಕಾರದಿಂದ ಪಡೆದುಕೊಳ್ಳುವುದು ಮೊದಲಾದ ವಿದ್ಯಮಾನಗಳು ಕಾದಂಬರಿಗಳಲ್ಲಿ ಮುಖಾಮುಖಿಯಾಗುತ್ತಲೇ ಬಂದಿದೆ. 'ಉಳುವವನೇ ಹೊಲದೊಡೆಯ' ಕಾನೂನು ಜಾರಿಯಾದ ನಂತರ ಜಮೀನ್ದಾರ ತನ್ನತನವನ್ನು ನಿಧಾನಗತಿಯಲ್ಲಿ ಕಳೆದುಕೊಳ್ಳುವ ವಾಸ್ತವವನ್ನು ಇವರ ಕಾದಂಬರಿಗಳಲ್ಲಿ ಗುರುತಿಸಬಹುದಾಗಿದೆ.

ಆಧುನಿಕತೆ ಮಹಿಳೆಯರ ಬದುಕಿನಲ್ಲಿ ನಿಜವಾದ ಬದಲಾವಣೆಗಳನ್ನು ತಂದಿತೇ ಅಥವಾ ಇಲವೇ ಎನ್ನುವ ಕಾರಣಗಳನ್ನು ಈ ಹಂತದ ಕಥಾ ಸಾಹಿತ್ಯದಲ್ಲಿ ವಿವರಿಸಲಾಯಿತು.

ಆಧುನಿಕತೆಯ ಪರಿಣಾಮದಿಂದಾಗಿ ಮಹಿಳಾ ಪ್ರಜ್ಞೆ ಜಾಗೃತಗೊಂಡು ಎಚ್ಚೆತ್ತುಕೊಳ್ಳುವುದು ಒಂದೆಡೆಯಾದರೆ, ಪಾರಂಪರಿಕ ಸಂಪ್ರದಾಯಗಳ ಮೌಲ್ಯಗಳನ್ನು ಯಥಾಸ್ಥಿತಿಯಂತೆಯೇ ಅನುಕರಣೆಯನ್ನು ಮಾಡುವ ಅಂದರೆ ವಿವಾಹ, ಕುಟುಂಬಗಳು

ಆಚರಣೆ, ಆರಾಧನೆಗಳನ್ನೊಳಗೊಂಡ ಮಹಿಳಾವರ್ಗ ಇನ್ನೊಂದೆಡೆ. ಈ ಎರಡರ ನಡುವಿರುವ ಸಂಘರ್ಷ ಕಾರಣ ಪರಿಣಾಮವನ್ನು ಈ ಅಧ್ಯಯನ ಒಳಗೊಂಡಿದೆ.

ಲಿಂಗ ತಾರತಮ್ಯದ ನೆಲೆಗಳನ್ನು ಸಂಸ್ಥೆಗಳು ಹೇಗೆ ಪೋಷಿಸುತ್ತಿವೆ ಅಲ್ಲದೆ ಶೈಕ್ಷಣಿಕ, ಕ್ರೀಡೆ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ರಂಗಗಳಲ್ಲಿ ಪುರುಷನಷ್ಟೇ ಪ್ರಾತಿನಿಧ್ಯ ಮಹಿಳೆ ಪಡೆದಿರುವಂತೆ ಕಂಡರೂ ಆಳದಲ್ಲಿ ಆಕೆ ಪುರುಷ ಪ್ರಧಾನ ವ್ಯವಸ್ಥೆಯಡಿ ಸಿಲುಕಿ ಹೇಗೆ ಒದ್ದಾಡುತ್ತಿದ್ದಾಳೆ, ನಿಯಂತ್ರಿಸಲ್ಪಡುತ್ತಿದ್ದಾಳೆ ಎಂಬ ವಿಚಾರಗಳನ್ನು ಅಧ್ಯಯನದಲ್ಲಿ ಶೋಧಿಸಲಾಗಿದೆ.

ಆಧುನಿಕತೆಯ ಪರಿಣಾಮ ಬದಲಾಗುತ್ತಿರುವ ಮಹಿಳಾ ಬದುಕು ವ್ಯಕ್ತಿ ಸ್ವಾತಂತ್ರ್ಯ ಸ್ವಾವಲಂಬನೆಗಳು, ಕೌಟುಂಬಿಕ ಸ್ವಾಸ್ಥ್ಯವನ್ನು ಎತ್ತರಿಸುವ ನಿಟ್ಟಿನಲ್ಲಿ ಅನುಕೂಲಕಾರಿಯಾಗದೆ ಗಂಡು–ಹೆಣ್ಣುಗಳ ಅಹಂನಿಂದ ಕುಸಿಯುತ್ತಿರುವ ಕೌಟುಂಬಿಕ ಸ್ವಾಸ್ಥ್ಯಕ್ಕೆ ವಿವಾಹ ವಿಚ್ಛೇದನಗಳಿಗೆ ಹೇಗೆ ಕಾರಣವಾಗುತ್ತಿವೆ ಎಂಬುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಊಳಿಗಮಾನ್ಯ ಯಜಮಾನಿಕೆಯ ಜೊತೆಗೆ ಬಂಡವಾಳಶಾಹಿ ವ್ಯವಸ್ಥೆಯು ಸೇರಿಕೊಂಡಿರುವುದರಿಂದ ಇವೆರಡೂ ಮಹಿಳೆಯರನ್ನು ಹೇಗೆ ಶೋಷಿಸುತ್ತಿವೆ ಎಂಬುದನ್ನು ಈ ಅಧ್ಯಯನದಲ್ಲಿ ತಿಳಿಯಲಾಗಿದೆ.

ಪುರುಷ ತನ್ನ ವಿರೋಧಿಯಲ್ಲ ಪಿತೃ ವ್ಯವಸ್ಥೆಯೊಂದು ತನ್ನ ವಿರೋಧಿ ಎಂಬ ಅರಿವು ಮೂಡಿ ಪುರುಷನನ್ನು ತನ್ನಂತೆ ಪಿತೃ ವ್ಯವಸ್ಥೆಯಡಿಯಲ್ಲಿ ಶೋಷಿತನಾಗಿಯೇ ಗುರುತಿಸಿಕೊಂಡು ಇಂಥ ಆಲೋಚನೆಗಳಿಂದ ಅವನನ್ನು ಹೊರತರುವ ಪ್ರಯತ್ನಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಇತ್ತೀಚಿನ ಮಹಿಳಾ ಕಥೆಗಳಲ್ಲಿರುವುದನ್ನು ಗ್ರಹಿಸಲಾಗಿದೆ.

ಅಧ್ಯಯನ ಸಾಧ್ಯತೆಗಳು

ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳನ್ನು ಕೇಂದ್ರವಾಗಿರಿಸಿಕೊಂಡು ಕರಾವಳಿ ಪ್ರಾದೇಶಿಕ ಸಂಸ್ಕೃತಿಯ ಬಹುನೆಲೆಗಳನ್ನು ವಿಭಿನ್ನ ಸ್ತರಗಳಿಂದ ಅಭ್ಯಾಸ ಮಾಡಿಕೊಳ್ಳುವ ಅನೇಕ ಸಾಧ್ಯತೆಗಳು ಇವೆ.

ಇಲ್ಲಿನ ಸಾಂಸ್ಕೃತಿಕ ಬದುಕಿನ ಹಿರಿಮೆ ಮತ್ತು ಪಲ್ಲಟದ ನೆಲೆಗಳನ್ನು ಕರಾವಳಿ ಕಾದಂಬರಿಗಳು ನಿರ್ವಹಿಸಿದ ಬಗೆಯನ್ನು ಅಧ್ಯಯನ ನಡೆಸಬಹುದು.

ಇಲ್ಲಿನ ಸಮುದಾಯಗಳ, ನಂಬಿಕೆಗಳ, ಆಚರಣೆಗಳ ಕುಣಿತಗಳ ಕುರಿತ ಇವರ ದೃಷ್ಟಿಕೋನ ಅತ್ಯಂತ ಸೂಕ್ಷ್ಮವಾದದ್ದು. ಅಂಚಿಗೆ ತಳ್ಳಲ್ಪಟ್ಟ ಹತ್ತು ಹಲವು ಸಾಂಸ್ಕೃತಿಕ ಸಂಗತಿಗಳು ಇವರ ಬರಹಗಳ ಮೂಲಕ ಬೆಳಕು ಕಂಡಿವೆ. ಇದರ ಆಧಾರದಲ್ಲಿ ಕರಾವಳಿ ಇತರ ಕಾದಂಬರಿಕಾರ ಬರಹಗಳೊಂದಿಗೆ ತೌಲನಿಕ ಅಧ್ಯಯನಗಳಿಗೆ ವಿಪುಲ ಸಾಧ್ಯತೆಗಳಿವೆ.

ಇವರ ಕಾದಂಬರಿಗಳಲ್ಲಿ ಅಂತರ್ಗತವಾಗಿರುವ ಸಾಂಸ್ಕೃತಿಕ ವಿವರಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಕರಾವಳಿ ಬದುಕು ಮತ್ತು ಸಂಸ್ಕೃತಿಯ ಕುರಿತು ಇನ್ನೂ ತಳಸ್ಪರ್ಶಿಯಾದ ಅಧ್ಯಯನ ನಡೆಸಲು ಸಾಧ್ಯವಿದೆ.

ಪ್ರಭಾಕರ ನೀರ್‌ಮಾರ್ಗ ಆಯ್ದುಕೊಂಡ ವಿಭಿನ್ನ ಕಥಾವಸ್ತುಗಳು, ಮತ್ತು ಅದರ ನಿರ್ವಹಣೆ ಅಸಾಧಾರಣವಾದುದು. ತನ್ನ ಯೋಚನೆ ಮತ್ತು ಅನುಭವಕ್ಕೆ ಬಂದ ಅನೇಕ ಸಂಗತಿಗಳನ್ನು ಕಥನವಾಗಿಸಿದ್ದಾರೆ. ಈವರೆಗಿನ ತುಳು ಅಧ್ಯಯನ ಮತ್ತು ಸಂಶೋಧನೆಗಳು ಗಮನಹರಿಸದ ಹೊಸ ಒಳನೋಟಗಳು ಇವರ ಕಾದಂಬರಿಗಳಲ್ಲಿವೆ. ಇಂತಹ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗಮನಿಸಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

ಕರಾವಳಿಯಲ್ಲಿ ಮಹಿಳೆಯರ ಬದುಕಿನ ಹಲವು ವಿನ್ಯಾಸಗಳನ್ನು ಲೇಖಕರು ತನ್ನ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಸ್ತ್ರೀ ಸಂವೇದನೆಯ ಹಲವು ನೆಲೆಗಳನ್ನು ಅಲ್ಲದೆ ತಳಸಮುದಾಯದ ಸ್ತ್ರೀ ಲೋಕವನ್ನು ಇನ್ನೂ ಗಾಢವಾಗಿ ಅಧ್ಯಯನ ಮಾಡಬಹುದು.

ದೇಶೀ ಸ್ವಂತಿಕೆಯ ನೆಲೆಯ ತಂತುಗಳು ಇವರ ಕಾದಂಬರಿಗಳಲ್ಲಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಅವಗಣನೆಗೆ ಒಳಗಾಗಿದ್ದ ಅನೇಕ ವಿಷಯಗಳು ಇವರ ಕಾದಂಬರಿಯೊಳಗೆ ಜೀವಂತವಾಗಿ ಕಾಣಿಸಿಕೊಂಡಿದೆ. ಸಮಾಜದ ಪ್ರಧಾನ ವಲಯದಿಂದ ಹೊರಗುಳಿದಿದ್ದ

ಅಸ್ಪೃಶ್ಯ ಲೋಕವನ್ನು ತನ್ನ ಕಥನದೊಳಗೆ ಅನಾವರಣಗೊಳಸಿದ್ದಾರೆ. ಈ ಮಾದರಿಯ ಕಥನಗಳೊಂದಿಗೆ ಇವರ ಕಾದಂಬರಿಗಳನ್ನು ವಿಶ್ಲೇಷಣೆಗೆ ಒಳಪಡಿಸಬಹುದಾಗಿದೆ.

ಅನುಬಂಧ–I

ಪ್ರಧಾನ ಆಕರಗಳು:

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳು:

೧. ದಾಯಿತ್ವ (೧೯೯೭), ಹೇಮಾಂಶು ಪ್ರಕಾಶನ, ಮಂಗಳೂರು.

೨. ಶಿಶಿರ (೧೯೯೮), ಹೇಮಾಂಶು ಪ್ರಕಾಶನ, ಮಂಗಳೂರು.

೩. ಪ್ರತಿಶೋಧ (೧೯೯೯), ಹೇಮಾಂಶು ಪ್ರಕಾಶನ, ಮಂಗಳೂರು.

೪. ತಿಲ್ಲಾನ (೨೦೦೦), ಹೇಮಾಂಶು ಪ್ರಕಾಶನ, ಮಂಗಳೂರು.

೫. ಧೀಂಗಿಣ (೨೦೦೧), ಹೇಮಾಂಶು ಪ್ರಕಾಶನ, ಮಂಗಳೂರು.

೬. ಅರ್ಘ್ಯ (೨೦೦೨), ಸಾಹಿತ್ಯ ಸಂಸ್ಕೃತಿ ವೇದಿಕೆ, ಮೂಡುಬೆಳ್ಳೆ.

೭. ದಳವಾಯಿ ದುಗ್ಗಣ್ಣ (ತುಳು ಕಾದಂಬರಿ) (೨೦೦೩), ಸಿರಿ ಪ್ರಕಾಶನ, ಅಗೊಳಿ ಮಂಜಣ್ಣ ಜಾನಪದ ಕೇಂದ್ರ, ಪಾವಂಜೆ.

೮. ತಂಬಿಲ (೨೦೦೩), ಶೇಣಿ ಪ್ರಕಾಶನ, ಶೇಣಿ.

೯. ಕಂಬುಲ (೨೦೦೫), ಹೇಮಾವತಿ ಪ್ರಕಾಶನ, ನೀರ್‌ಮಾರ್ಗ, ಮಂಗಳೂರು.

೧೦. ಮಂಗಳೂರ ಕ್ರಾಂತಿ (೨೦೦೬), ಹೇಮಾವತಿ ಪ್ರಕಾಶನ, ನೀರ್‌ಮಾರ್ಗ, ಮಂಗಳೂರು.

೧೧. ಮಾದಿರ (೨೦೦೭), ಹೇಮಾವತಿ ಪ್ರಕಾಶನ, ನೀರ್‌ಮಾರ್ಗ, ಮಂಗಳೂರು.

೧೨. ಮದಿಪು (೨೦೦೯), ಹೇಮಾವತಿ ಪ್ರಕಾಶನ, ನೀರ್‌ಮಾರ್ಗ, ಮಂಗಳೂರು.

೧೩. ಮಥನ (೨೦೧೦), ಹೇಮಾವತಿ ಪ್ರಕಾಶನ, ನೀರ್‌ಮಾರ್ಗ, ಮಂಗಳೂರು.

೧೪. ಜಾತ್ರೆ (೨೦೧೧), ಹೇಮಾವತಿ ಪ್ರಕಾಶನ, ನೀರ್‌ಮಾರ್ಗ, ಮಂಗಳೂರು.

೧೫. ಬಾರಣೆ (೨೦೧೧), ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

೧೬. ವೇಷ (೨೦೧೨), ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

೧೭. ದಿಬ್ಬಣ (೨೦೧೩), ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

೧೮. ಗುರಿಕಾರ (೨೦೧೩), ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

೧೯. ತರಿಕಿಟ (೨೦೧೪), ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

೨೦. ಕಾರ್ಣಿಕ (೨೦೧೬), ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

೨೧. ಕಾಲಚಕ್ರ (೨೦೧೭), ಸಾಧನ ಪ್ರಕಾಶನ, ಬೆಂಗಳೂರು.

ಪೂರಕ ಆಕರಗಳು:

- ಪ್ರತಾಪ್ ಚಂದ್ರ ಶೆಟ್ಟಿ ಹಳ್ನಾಡ್, (ಸಂ) (೨೦೧೮), ನೆಲದ ದನಿ, ನೆನಪಿನಂಗಳದಲ್ಲಿ ಪ್ರಭಾಕರ ನೀರ್ಮಾರ್ಗರ ಬದುಕು–ಬರಹ, ಶ್ರೀರಾಮ ಪ್ರಕಾಶನ ೯೩/ಡಿ, ೩ ನೆ ಕ್ರಾಸ್ ನೆಹರೂ ನಗರ ಪೂರ್ವ ಬಡಾವಣೆ, ಮಂಡ್ಯ ೫೭೧೪೦೧.
- ಪ್ರಭಾಕರ ನೀರ್ಮಾರ್ಗ (೨೦೧೯), ಕಾಣದ ಕಡಲಿಗೆ(ಆತ್ಮಕಥನ) ಹೇಮಾವತಿ ಪ್ರಕಾಶನ, ನೀರ್ಮಾರ್ಗ, ಮಂಗಳೂರು.

ಪರಾಮರ್ಶನ ಗ್ರಂಥಗಳು

- ಅಭಯ್ ಕುಮಾರ್ ಕೆ., ೧೯೯೭, ಮುಗೇರರು ಜನಾಂಗ ಜಾನಪದ ಅಧ್ಯಯನ, ಕರ್ನಾಟಕ ತುಳು ಸಾಹಿತ್ಯ ಅಕಾಡಮಿ, ಮಂಗಳೂರು.
- ಅನಂತಮೂರ್ತಿ ಯು ಆರ್., ೧೯೭೬, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.
- ಅಮೂರ ಜಿ. ಎಸ್., ೨೦೧೬, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಸಪ್ನ ಬುಕ್ ಹೌಸ್, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು.
- ಅವಧಾನಿ ಜಿ. ಎಸ್., ೧೯೯೦, ಪರಸ್ಪರ, ಶ್ರೀ ರಾಘವೇಂದ್ರ ಪ್ರಕಾಶನ, ಅಂಬರಕೂಡ್ಲು, ಅಂಕೋಲ.
- ಅಂಗಡಿ.ಎಸ್.ಎಸ್., ೨೦೧೦, ಶಂಭಾ ಜೋಷಿ ಭಾಷಿಕ ವಿವೇಚನೆ, ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ
- ಆಶಾರಾಣಿ ಕೆ., ೨೦೧೯, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಣ್ಣು ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿ (ಸಂಶೋಧನಾ ಮಹಾಪ್ರಬಂಧ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
- ಇಚ್ಲಂಗೋಡು ಬಿ. ಎಂ, ೨೦೧೧, ತುಳುನಾಡಿನ ಬ್ಯಾರಿಗಳು, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಮಂಗಳೂರು.
- ಉದಯ ಬಾರ್ಕೂರು, ೨೦೧೫, ಇತಿಹಾಸದ ಶೋಧ; ಗತದ ಹುಡುಕಾಟ, ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು.
- ಉಷಾ ಕಟ್ಟೀಮಣಿ, ೨೦೦೯, ಕಡಲತಡಿಯ ತಲ್ಲಣ, ಸೃಷ್ಟಿ ಪ್ರಕಾಶನ, ಬೆಂಗಳೂರು
- ಕಲಬುರ್ಗಿ ಎಮ್.ಎಮ್., ೨೦೧೨, ಮಾರ್ಗದ ಮಹಾವಾಕ್ಯಗಳು(ಸಂ), ವಿಕಾಸ ಪ್ರಕಾಶನ, ಹೊಸಪೇಟೆ.
- ಕೇಶವ ಕುಡ್ಲ, ೨೦೧೯, ಆಯನ, ಆಕೃತಿ ಪ್ರಕಾಶನ, ಬೆಂಗಳೂರು.
- ಕೇಶವ ಶರ್ಮ, ೧೯೯೮, ಶಬ್ದ ರೇಖೆ, ಅಭಿನವ ಪ್ರಕಾಶನ, ಬೆಂಗಳೂರು.

- ಕೀರ್ತಿನಾಥ ಕುರ್ತಕೋಟಿ, ೧೯೯೬, ವಿಮರ್ಶೆಯ ವಿನಯ ಕಾದಂಬರಿ, ಮನೋಹರ ಗ್ರಂಥ ಮಾಲೆ ಧಾರವಾಡ.
- ಕೃಷ್ಣಯ್ಯ ಡಿ. ಎನ್., ೧೯೯೫, ಕೊಡಗಿನ ಇತಿಹಾಸ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಗಣೇಶ್ ಅಮೀನ್ ಸಂಕಮಾರ್, ೨೦೦೬, ನುಡಿಸಿಂಗಾರ, ಸಿರಿ ಪ್ರಕಾಶನ ಅಗೋಳಿ ಮಂಜಣ್ಣ ಜನಪದ ಕೇಂದ್ರ, ಪಾವಂಜೆ.
- ಗುಂಡಪ್ಪ ಡಿ. ವಿ., ೧೯೮೫, ಸಂಸ್ಕೃತಿ, ಕಾವ್ಯಾಲಯ ಪ್ರಕಾಶಕರು, ಮೈಸೂರು.
- ಚಿದಾನಂದ ಮೂರ್ತಿ, ೧೯೬೬, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು.
- ಚಿನ್ನಪ್ಪ ಗೌಡ ಕೆ., ೨೦೨೨, ಕರಾವಳಿ ಕಥನಗಳು, ಸಂತ ಅಲೋಶಿಯಸ್ ಪ್ರಕಾಶನ, ಮಂಗಳೂರು.
- ತಪಸ್ವೀ ಕುಮಾರ, ೧೯೯೫, ಸಂಸ್ಕೃತಿ ವಿಕಾಸ, ಭಾರತಿ ಪ್ರಕಾಶನ, ಮೈಸೂರು.
- ಧನಂಜಯ ಕುಂಬ್ಳೆ, ೨೦೧೫, ಪ್ರಗತಿಪಥ ತೋರಿದ ಸೃಜನಶೀಲ ಚಿಂತಕ ನಿರಂಜನ, ಕನ್ನಡ ಸಂಘ ಕಾಂತಾವರ(ರಿ) ಕಾರ್ಕಳ, ಉಡುಪಿ.
- ದೇವಿ ಪ್ರಸಾದ್ ಸಂಪಾಜೆ, ೧೯೯೯, ಅಮರ ಸುಳ್ಯದ ಸ್ವಾತಂತ್ರ್ಯ ಸಮರ, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.
- ನಾಗಪ್ಪ ಗೌಡ ಆರ್., ೨೦೧೮, ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು, ಪ್ರಸಾರಂಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
- ನಾಗಭೂಷಣಸ್ವಾಮಿ ಓ. ಎಲ್., ೨೦೧೫, ವಿಮರ್ಶೆಯ ಪರಿಭಾಷೆ, ಅಭಿನವ, ೧೭/೧೮–೨ ಮೊದಲನೆಯ ಮುಖ್ಯ ರಸ್ತೆ, ಮಾರೇನಹಳ್ಳಿ, ವಿಜಯ ನಗರ, ಬೆಂಗಳೂರು.

- ನಾರಾಯಣ ಕೆ.ವಿ., (ಸಂ), ೧೯೯೫, ಕನ್ನಡ ಶೈಲಿ ಕೈಪಿಡಿ, ನಿರ್ದೇಶಕರು, ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

- ನಿರಂಜನ., ೧೯೭೩, ಸ್ವಾಮಿ ಅಪರಂಪಾರ, ಗೀತಾ ಪಬ್ಲಿಕೇಷನ್ಸ್, ಜಯನಗರ, ಬೆಂಗಳೂರು.

- ಪೂವಪ್ಪ ಕಣಿಯೂರು, ೨೦೧೭, ಕುಕ್ಕೆಯಲ್ಲಿ ನಾಗರ ಮಡಿಕೆ ಪ್ರಾದೇಶಿಕ ಅಧ್ಯಯನ, ತರಂಗಿನಿ ಪ್ರಕಾಶನ, ಸುಳ್ಯ

- ಪೋತೆ ಹೆಚ್. ಡಿ., ೨೦೦೮, ಸಂಸ್ಕೃತಿ ಸಂಕ್ರಮಣ, ಟಿಪ್ಪಣಂಬು ಪ್ರಕಾಶನ, ಗುಲ್ಬರ್ಗ.

- ಪ್ರಭಾಕರ ಶಿಶಿಲ, ೨೦೧೦, ಯಕ್ಷಗಾನ ಕಲಾವಲೋಕನ, ರಾಜ್ ಪ್ರಕಾಶನ ಮೈಸೂರು.

- ಪ್ರತಾಪಚಂದ್ರ ಶೆಟ್ಟಿ ಹಳ್ನಾಡು, ೨೦೧೮, ನೆಲದ ದನಿ, ಶ್ರೀರಾಮ ಪ್ರಕಾಶನ, ಮಂಡ್ಯ .

- ಬನ್ನಂಜೆ ಬಾಬು ಅಮೀನ್, ೨೦೦೩, ತುಳು ಜಾನಪದ ಆಚರಣೆಗಳು, ಕೆಮ್ಮಲಾಜೆ ಜನಪದ ಪ್ರಕಾಶನ, ಉಡುಪಿ.

- ಬನ್ನಂಜೆ ಬಾಬು ಅಮೀನ್, ೨೦೧೨, ತುಳು ನಾಡ ದೈವಗಳು, ಕೆಮ್ಮಲಾಜೆ ಜನಪದ ಪ್ರಕಾಶನ, ಉಡುಪಿ.

- ಬಸವರಾಜ ಮಲಶೆಟ್ಟಿ, ೨೦೦೮, ಕರ್ನಾಟಕ ಜನಪದ ರಂಗಭೂಮಿ, ಸ್ನೇಹ ಪ್ರಿಂಟರ್ಸ್, ಬೆಂಗಳೂರು.

- ಭಟ್ಟ ಜಿ. ಎಸ್ ೨೦೦೯, ಕರಾವಳಿಯ ಜನಪದ ಕಲೆಗಳು ಮತ್ತು ಇತರೆ ಲೇಖನಗಳು, ಗುಪ್ತ ಹಾಫ್ ಸೆಟ್ ಪ್ರಿಂಟರ್ಸ್, ಮೈಸೂರು.

- ಮಹೇಶ್ವರಿ, ೨೦೨೨, ಶಬ್ದ ಸೂರೆ, ಶ್ರೀರಾಮ ಪ್ರಕಾಶನ, ಮಂಡ್ಯ.

- ಮಾಲಿನಿ ಮಲ್ಯ, (ಸಂ) ೧೯೯೪, ಶಿವರಾಮ ಕಾರಂತರ ಲೇಖನಗಳು, ಪ್ರಸಾರಂಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ, ಮಂಗಳೂರು.

- ಮಾರ್ಷಲ್ ಶರಾಂ, ೨೦೧೮, ಮಹಿಳಾ ಸಂಕಥನ, ನೇಕಾರ ಪ್ರಕಾಶನ, ಬೆಂಗಳೂರು.
- ಮುದ್ದು ಮೂಡುಬೆಳ್ಳೆ, ೨೦೧೫, ತುಳುಜನಪದ, ಹೇಮಾಂಶು ಪ್ರಕಾಶನ, ಮಂಗಳೂರು.
- ಮುದ್ದು ಮೂಡುಬೆಳ್ಳೆ, ೨೦೦೭, ನಾಡುನುಡಿಯದೊಂದು ಬಗೆ, ಹೇಮಾಂಶು ಪ್ರಕಾಶನ, ಮಂಗಳೂರು.
- ಮೋಹನ ಕೃಷ್ಣ ರೈ ಕೆ., ೨೦೧೫, ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ರಹಮತ್ ತರೀಕೆರೆ, ೧೯೯೬, ಮರಣದೊಳಗಣ ಕೆಚ್ಚು, ಪ್ರಸಾರಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ರಹಮತ್ ತರೀಕೆರೆ, ೨೦೦೮, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ರಹಮತ್ ತರೀಕೆರೆ, ೨೦೧೭, ಸಾಂಸ್ಕೃತಿಕ ಅಧ್ಯಯನ, ಅಭಿನವ ಪ್ರಕಾಶನ,ಬೆಂಗಳೂರು.
- ರಾಜೇಂದ್ರ ಚೆನ್ನಿ, ೧೯೯೯, ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ರಾಮಕೃಷ್ಣ ಆಚಾರ್‌ಪಾಲ್ತಾಡಿ, ೨೦೧೫, ವಿಶಿಷ್ಟ ತುಳುನಾಡು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು
- ರಾಮಚಂದ್ರನ್ ಸಿ.ಎನ್, , ೨೦೦೩, ಎಡ್ವರ್ಡ್ ಸೈದ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ರಾಮಚಂದ್ರ ಬರಗೂರು, ಸಂಸ್ಕೃತಿ ಉಪ ಸಂಸ್ಕೃತಿ, ೧೯೮೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಲೋಕೇಶ್ ಒಡೆಯರ್ ನಾ., ಮಲ್ಲಿಕಾರ್ಜುನಯ್ಯ ಎಸ್.ಆರ್. (ಸಂ), ೨೦೨೦, ತರಳ ಬಾಳು, ಶ್ರೀ ತರಳ ಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ.

- ವಾಮನ ನಂದಾವರ(ಸಂ), ೨೦೦೯, ಕೊಡಿಪು, ವಿಶ್ವ ತುಳು ಸಮ್ಮೇಳನ ಪ್ರಕಾಶನ, ಬೆಳ್ತಂಗಡಿ.
- ವಿವೇಕ ರೈ ಬಿ.ಎ., ೧೯೮೯, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
- ವಿವೇಕ ರೈ ಬಿ.ಎ., ೧೯೮೫, ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ವಿವೇಕ ರೈ(ಸಂ), ೨೦೧೬, ಮಂಗಳೂರು ದರ್ಶನ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು.
- ಸಚ್ಚಿದಾನಂದಯ್ಯ. ಕೆ., (ಸಂ). ೧೯೭೭, ಬ್ರಹ್ಮಗಿರಿ, ಶ್ರೀ ಕಾವೇರಿ ಪ್ರಕಾಶನ, ಮಡಿಕೇರಿ, ಕೊಡಗು.
- ಸೂರ್ಯನಾಥ ಕಾಮತ್ ಯು., ೧೯೯೨, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಕೊಡಗು ಜಿಲ್ಲೆ, ಕರ್ನಾಟಕ ರಾಜ್ಯ ಸರಕಾರ, ಮುಖ್ಯ ಸಂಪಾದಕರ ಕಛೇರಿ, ಕರ್ನಾಟಕ ಗ್ಯಾಸೆಟಿಯರ್, ೮ನೇ ಮಹಡಿ, ಜಲ ಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು.
- ಸಂತೋಷ ಚೊಕ್ಕಾಡಿ, ೨೦೦೨, ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಕರ್ನಾಟಕ ಸಂಘ ಪುತ್ತೂರು.
- ಸಿದ್ದಣ್ಣ ಬಿ. ಉತ್ನಾಳ, ೧೯೯೦, ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಅನುಪಮ ಪ್ರಕಾಶನ, ಅಥಣಿ.
- ಶಂಕರನಾರಾಯಣ ಎನ್.ಪಿ., ೨೦೧೫, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಶಂಕರ್ ರಾವ್ ಚ.ನ., ೨೦೦೭, ಭಾರತೀಯ ಸಮಾಜ, ಜೈ ಪ್ರಕಾಶನ, ಮಂಗಳೂರು.

- ಶಾಸ್ತ್ರೀ ಪಿ. ವಿ. ೧೯೯೧, ಸಾಹಿತ್ಯದ ಪ್ರಕಾರಗಳು, ಪ್ರತಿಭಾ ಗ್ರಂಥ ಮಾಲೆ, ಶಿವಾಜಿ ಬೀದಿ, ಧಾರವಾಡ.
- ಶಾಂತ ಇಮ್ರಾಪುರ, ೨೦೦೭, ಸಾಹಿತ್ಯ ಸಂವೇದನೆ, ರೇಣುಕಾ ಮುದ್ರಣಾಲಯ ಧಾರವಾಡ.
- ಶಿವರಾಮ ಪಡಿಕಲ್ಲ್, ೨೦೦೧, ನಾಡು ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ.
- ಶಿವರಾಮ ಶೆಟ್ಟಿ, ೨೦೦೬, ನಾಡುನುಡಿ ಪ್ರತಿನಿಧೀಕರಣದ ಕಥನ, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
- ಶಿವರುದ್ರಪ್ಪ ಜಿ.ಎಸ್., (ಸಂ), ೧೯೭೧, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು.
- ಶಿವರುದ್ರಪ್ಪ ಜಿ. ಎಸ್., ೧೯೮೧, ನವೋದಯ, ನೆಲಮನೆ ಪ್ರಕಾಶನ, ಕೆ.ಜಿ ಕೊಪ್ಪಲು, ಮೈಸೂರು.
- ಶಿವರುದ್ರಪ್ಪ ಜಿ. ಎಸ್., ೧೯೭೪, ಗತಿಬಿಂಬ, ಸುರುಚಿ ಪ್ರಕಾಶನ, ಮೈಸೂರು.
- ಶಿವರುದ್ರಪ್ಪ ಜಿ. ಎಸ್., ೧೯೮೨, ಭಾರತೀಯತೆ ಮತ್ತು ಕನ್ನಡ ಲೇಖಕ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಶಿವರುದ್ರಪ್ಪ ಜಿ.ಎಸ್., ೧೯೮೯, ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
- ಶಿವರಾಮ ಪಡಿಕ್ಕಲ್, ೨೦೦೧, ನಾಡು ನುಡಿಯ ರೂಪಕ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
- ಶೇಷಗಿರಿರಾವ್ ಎಲ್., ೧೯೯೩, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಉದಯ ಬಾನು ಕಲಾಸಂಘ, ಬೆಂಗಳೂರು.
- ಹರೀಶ್ ಜಿ. ಬಿ., ೨೦೧೫, ಕನ್ನಡ ಸಾಹಿತ್ಯ ಸಂಗಾತಿ, ವಸಂತ ಪ್ರಕಾಶನ, ಬೆಂಗಳೂರು.

- ಹಳ್ಳಿಕೇರಿ ಎಫ್.ಟಿ., ವಿರೂಪಾಕ್ಷಿ ಎನ್.ಬಿ. (ಸಂ), ೨೦೧೨, ಮಾರ್ಗದ ಮಹಾವಾಕ್ಯಗಳು, ಡಾ.ಎಂ.ಎಂ ಕಲಬುರ್ಗಿ ಅವರ ಚಿಂತನೆಗಳು, ವಿಕಾಸ ಪ್ರಕಾಶನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ ಪ್ರಕಾಶನಗರ, ಹೊಸಪೇಟೆ.
- ಹಾಮಾ ನಾಯಕ (ಸಂ) ೧೯೮೭, ಡಿವಿಜಿ ಸಂಪುಟ ೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಇಂಗ್ಲೀಷ್ ಕೃತಿಗಳು:

- Mathew Arnald, 1869, Culture and Anarchy, Oxford world classics, London.
- Raymond Williams, 1960, Culture and Society, Vintage Classics, America.
- T.S Eliot, 1949, Definition of Culture, Hapcourt Braer and company, New york.
- Edward Said, 1993, Culture and imperialism, Alfred A knof, New york.
- Panikar K N, 2001, The illigitimacy of Nationalism, Oup, D

ಸಂಚಿಕೆಗಳು:

- ಮೊಗಸಾಲೆ ನಾ, ೨೦೧೯, ನುಡಿಹಾರ ೧, ಕಾಂತಾವರ ಕನ್ನಡ ಸಂಘ, ಕಾರ್ಕಳ ಕಾಂತಾವರ
- ಮೊಗಸಾಲೆ ನಾ, ೨೦೧೧, ನುಡಿಹಾರ ೨, ಕಾಂತಾವರ ಕನ್ನಡ ಸಂಘ, ಕಾರ್ಕಳ ಕಾಂತಾವರ
- ಮೊಗಸಾಲೆ ನಾ, ೨೦೧೩, ನುಡಿಹಾರ ೩, ಕಾಂತಾವರ ಕನ್ನಡ ಸಂಘ, ಕಾರ್ಕಳ ಕಾಂತಾವರ
- ಮೊಗಸಾಲೆ ನಾ, ೨೦೧೩, ನುಡಿಹಾರ ೪, ಕಾಂತಾವರ ಕನ್ನಡ ಸಂಘ, ಕಾರ್ಕಳ ಕಾಂತಾವರ
- ಉಮೇಶ ಎಚ್‌ಎಸ್ (ಸಂ), ೨೦೨೩, ಅರುಹು ಕುರುಹು ಸಂಚಿಕೆ–೫೪ (ಮಾರ್ಚ್), ಬೆಳಕು, ಕುವೆಂಪುನಗರ, ಮೈಸೂರು.
- ಉಮೇಶ ಎಚ್‌ಎಸ್ (ಸಂ), ೨೦೧೧, ಅರುಹು ಕುರುಹು ಸಂಚಿಕೆ–೯ (ಏಪ್ರಿಲ್–ಜೂನ್), ಮೌನ, ಕುವೆಂಪುನಗರ, ಮೈಸೂರು.
- ಉಮೇಶ ಎಚ್‌ಎಸ್ (ಸಂ), ೨೦೧೩, ಅರುಹು ಕುರುಹು ಸಂಚಿಕೆ–೧೭ (ಏಪ್ರಿಲ್–ಜೂನ್), ಮೌನ, ಕುವೆಂಪುನಗರ, ಮೈಸೂರು.
- ಉಮೇಶ ಎಚ್‌ಎಸ್ (ಸಂ), ೨೦೧೪, ಅರುಹು ಕುರುಹು ಸಂಚಿಕೆ–೨೦ (ಜನವರಿ–ಮಾರ್ಚ್), ಮೌನ, ಕುವೆಂಪುನಗರ, ಮೈಸೂರು.
- ಉಮೇಶ ಎಚ್‌ಎಸ್ (ಸಂ), ೨೦೧೪, ಅರುಹು ಕುರುಹು ಸಂಚಿಕೆ–೨೨ (ಜುಲೈ–ಸೆಪ್ಟೆಂಬರ್), ಮೌನ, ಕುವೆಂಪುನಗರ, ಮೈಸೂರು.
- ಉಮೇಶ ಎಚ್‌ಎಸ್ (ಸಂ), ೨೦೨೨, ಅರುಹು ಕುರುಹು ಸಂಚಿಕೆ–೪೮ (ಏಪ್ರಿಲ್–ಜೂನ್), ಬೆಳಕು, ಕುವೆಂಪುನಗರ, ಮೈಸೂರು.

- ಉಮೇಶ ಎಚ್‌ಎಸ್ (ಸಂ), ೨೦೨೩, ಅರುಹು ಕುರುಹು ಸಂಚಿಕೆ–೫೯ (ಆಗಸ್ಟ್), ಬೆಳಕು, ಕುವೆಂಪುನಗರ, ಮೈಸೂರು.
- ಉಮೇಶ ಎಚ್‌ಎಸ್ (ಸಂ), ೨೦೨೩, ಅರುಹು ಕುರುಹು ಸಂಚಿಕೆ–೬೦ (ಸೆಪ್ಟೆಂಬರ್–ಒಕ್ಟೋಬರ್), ಬೆಳಕು, ಕುವೆಂಪುನಗರ, ಮೈಸೂರು.

ಅಂತರ್ಜಾಲ ಮಾಹಿತಿಗಳು:

- ಕಂಬಳ: ತುಳುನಾಡಿಗೂ ಕಂಬಳಕ್ಕೂ ಅವಿನಾಭಾವ ನಂಟು; ನವೆಂಬರ್–24, 2023, ಹಿಂದುಸ್ಥಾನ್, ದಿನಪತ್ರಿಕೆ https://kannada.hindustantimes.com/lifestyle/culture-kambala-bengaluru-kambala-karavali-tradition-tulunadu-how-kambala-is-part-of-karavali-tradition-history-181700809447058.html
- ಕಂಬಳ: ತುಳುನಾಡ ಹೆಮ್ಮೆ ಈ ಕಂಬಳ; ೨೦ ಜನವರಿ ೨೦೨೩, ಅವಿನಾಶ ವಗರ್ನಾಲ್ https://www.google.com/amp/s/vijaykarnataka.com/news/vk-special/origin-of-kambala-a-pride-of-coastal-karnataka-special-tulu-episode/amp_videoshow/97174244.cms
- ಸಿರಿಬಾರಿ ಲೋಕದ ಸಿರಿ ಸತ್ಯೊಲು ಶಕ್ತಿಗಳು ಡಾ. ಇಂದಿರಾ ಹೆಗ್ಗಡೆ ೩ ಜನವರಿ, ೨೦೨೧ https://www.varthabharati.in/article/2021_01_03/273675
- ತುಳುನಾಡಿನ ಹೆಮ್ಮೆ ಭೂತ ಕೋಲ; 19 October 2022, ಶ್ರೀನಿವಾಸಮೂರ್ತಿ https://www.google.com/amp/s/m.kannadaprabha.com/specials/2022/oct/19/what-is-bhoota-kola-the-pride-of-tulu-nadu-478863.amp

- ಮಂಗಳೂರು ವಿಶೇಷ; ಪೊಳಲಿ ಜಾತ್ರೆ, ಚೆಂಡಾಟಕ್ಕೂ ಧಾರ್ಮಿಕ ನಂಬಿಕೆ ನಂಟು; ಎಪ್ರಿಲ್ ೧೦,೨೦೨೨ ಮಂಗಳೂರು ಪ್ರತಿನಿಧಿಯವರಿಂದ https://kannada.oneindia.com/news/mangaluru/devotees-play-football-during-polali-rajarajeshwari-jatre-252116.html

ಪ್ರಕಟಿತ ಲೇಖನಗಳು:

೧ ಅಕ್ಷರಸೂರ್ಯ ದ್ವಿಭಾಷಾ ಮಾಸ ಪತ್ರಿಕೆಯಲ್ಲಿ (ಮಾರ್ಚ್–2024) "ಪ್ರಭಾಕರ ನೀರ್‌ಮಾರ್ಗ ಅವರ 'ತಿಲ್ಲಾನ' ಕಾದಂಬರಿಯಲ್ಲಿ ಭೂತಾರಾಧನೆಯ ಮುಂದಿರುವ ತಲ್ಲಣಗಳು" ಎಂಬ ಲೇಖನ ISSN:2583-620X (volume-03,ISSUE-03) ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿರುತ್ತದೆ.

೨. ಅರುಹು ಕುರುಹು, 'ಸಾಹಿತ್ಯ ಮತ್ತು ಸಂಸ್ಕೃತಿಯ ಶೋಧದಲ್ಲಿ' ಎಂಬ ಮಾಸ ಪತ್ರಿಕೆಯಲ್ಲಿ (ಮಾರ್ಚ್–2023) "ತುಳುನಾಡಿನ ಪ್ರಾದೇಶಿಕ ಸಂಸ್ಕೃತಿ ಮತ್ತು ಸೃಜನಶೀಲ ಸಾಹಿತ್ಯ (ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳನ್ನು ಅನುಲಕ್ಷಿಸಿ)" ಎಂಬ ಲೇಖನ ISSN:2347-5048 ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿದೆ.

೩. International Journal of Social Science and Management Studies Jabalpur ಕಾಲೇಜು ಆಯೋಜಿಸಿದ ಎರಡು ದಿನಗಳ (13/02/2021 ಮತ್ತು 14/02/2021) ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ "Role of Indians Culture in Rural development" ಎಂಬ ವಿಚಾರದಲ್ಲಿ ಪ್ರಬಂಧ ಮಂಡಿಸಿರುತ್ತೇನೆ ಹಾಗೂ ISSN:2454-4655 UGC SN 5351 ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿದೆ.

೪. ಸುರಾನಾ ಕಾಲೇಜು ಪೀಣ್ಯ ಬೆಂಗಳೂರು ಇವರು ಆಯೋಜಿಸಿದ ಒಂದು ದಿನದ (16/08/2022) ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ "ಸಾಂಸ್ಕೃತಿಕ

ರಂಗಭೂಮಿಯಾಗಿ ತುಳುನಾಡು: ಪಲ್ಲಟದ ತಲ್ಲಣಗಳು" ಎಂಬ ವಿಚಾರದಲ್ಲಿ ಪ್ರಬಂಧ ಮಂಡಿಸಿರುತ್ತೇನೆ. ISBN:978-93- 463-6 ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿದೆ.

೫. ದ್ರಾವಿಡಿಯನ್ ವಿಶ್ವವಿದ್ಯಾನಿಲಯ ಚಿತ್ತೂರು ಕುಪ್ಪಂ ಕಾಲೇಜು ಆಯೋಜಿಸಿದ ಎರಡು ದಿನಗಳ (25/02/2020 ಮತ್ತು 26/02/2020) ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ "ತುಳುಭಾಷೆ ಮತ್ತು ಸಂಸ್ಕೃತಿ: ಕಾದಂಬರಿ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಪುಷ್ಟಿಕರಣ" (ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ವಿಚಾರದಲ್ಲಿ ಪ್ರಬಂಧ ಮಂಡಿಸಿರುತ್ತೇನೆ ಹಾಗೂ ISBN:978-81-943850-4-2 ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿರುತ್ತದೆ.

೬. ಮಿಲಾಗ್ರಿಸ್ ಕಾಲೇಜು ಕಲ್ಯಾಣಮರ ಉಡುಪಿ ಭಾಷಾ ಅಧ್ಯಯನದ ವಿಭಾಗ ಆಯೋಜಿಸಿದ (03/03/2019) ಒಂದು ದಿನದ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ "ಮಾದಿರ ಕಾದಂಬರಿಯಲ್ಲಿ ಸ್ತ್ರೀ ಪುರಷ ಸಂವೇದನೆಗಳು" ಎಂಬ ವಿಚಾರದಲ್ಲಿ ಪ್ರಬಂಧ ಮಂಡಿಸಿರುತ್ತೇನೆ ಹಾಗೂ ISBN : 978-81-929293-6-0 ಸಂಖ್ಯೆಯ ಮಸ್ತಕದಲ್ಲಿ ಪ್ರಕಟಗೊಂಡಿರುತ್ತದೆ.

೭. ಮಿಲಾಗ್ರಿಸ್ ಕಾಲೇಜು ಮಂಗಳೂರು ಭಾಷಾ ಅಧ್ಯಯನ ವಿಭಾಗ & ಕೊಂಕಣಿ ಪೀಠ ಆಯೋಜಿಸಿದ ಒಂದು ದಿನದ (10.02.2020) ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ "ಪ್ರಭಾಕರ ನೀರ್‌ಮಾರ್ಗ ಅವರ 'ಧೀಂಗಿಣ' ಕಾದಂಬರಿಯಲ್ಲಿ ತುಳುನಾಡಿನ ಪ್ರಾದೇಶಿಕ ಸಂಸ್ಕೃತಿ ಮತ್ತು ಭಾಷೆ" ಎಂಬ ವಿಚಾರದಲ್ಲಿ ಪ್ರಬಂಧ ಮಂಡಿಸಿರುತ್ತೇನೆ ಹಾಗೂ ISBN:978-88-81195-94-8 ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿರುತ್ತದೆ.

೮. ಸ.ಪ್ರ.ದ.ಕಾಲೇಜು ಶಿಕಾರಿಪುರ, ಆಯೋಜಿಸಿದ ಎರಡು ದಿನಗಳ 19.11.2022 ಮತ್ತು 20.11.2022 ರಂದು ನಡೆದ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ "ಬಡವರ ನಗುವಿನ ಶಕ್ತಿ : ಸಾವಿರಾರು ನದಿಗಳು ಕವನ ಸಂಕಲನದಲ್ಲಿ ಹೋರಾಟದ

ಮನೋಭಾವ" ಎಂಬ ವಿಚಾರದಲ್ಲಿ ಪ್ರಬಂಧ ಮಂಡಿಸಿರುತ್ತೇನೆ ಹಾಗೂ ISBN:978-81-953397-3-0 ಸಂಖ್ಯೆಯ ಪುಸ್ತಕದಲ್ಲಿ ಪ್ರಕಟಗೊಂಡಿರುತ್ತದೆ.

ಅನುಬಂಧ II

ಪ್ರಭಾಕರ ನೀರ್‌ಮಾರ್ಗ ಅವರ ಜೀವನ ಮತ್ತು ಸಾಹಿತ್ಯಪಥ

ಪ್ರಭಾಕರ ನೀರ್‌ಮಾರ್ಗ ಅವರು ಕರುನಾಡಿನ ಸಾಹಿತ್ಯ ವಲಯದಲ್ಲಿ ಕಾದಂಬರಿಕಾರರಾಗಿ ಗುರುತಿಸಿಕೊಂಡಿದ್ದಾರೆ. ಸಾರ್ವಜನಿಕ ವೇದಿಕೆಗಳಲ್ಲಿ ಕಾಣಿಸಿಕೊಳ್ಳದ ನೀರ್‌ಮಾರ್ಗರು ಮಿತಭಾಷಿ. ತಮ್ಮ ಅಂತರಂಗದ ಭಾವನೆಗಳಿಗೆ ಕಲ್ಪನೆಯ ಮೂಲಕ ಬರವಣಿಗೆಯ ರೂಪವನ್ನು ನೀಡುತ್ತ ಬಂದವರು. ನಿತ್ಯ ಹರಿಯುವ ಸಲಿಲದಂತೆ ಅವರು ತನ್ನನ್ನು ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡರು. ಶ್ರೀಯುತರದು ಕಾದಂಬರಿಕಾರರಾಗಿ ಅಪರೂಪದ ವ್ಯಕ್ತಿತ್ವ. ಸಾಹಿತ್ಯ ರಸಿಕರು ಅಚ್ಚರಿ ಪಡುವಂತೆ ವರ್ಷಕ್ಕೊಂದರಂತೆ ಪ್ರಕಟಗೊಂಡ ಇವರ ಕಾದಂಬರಿಗಳು ಹಲವಾರು. ಪ್ರಾದೇಶಿಕ, ಸಾಂಸ್ಕೃತಿಕ ಬದುಕಿನ ಭಿನ್ನ ಸ್ತರಗಳನ್ನು ಅನಾವರಣಗೊಳಿಸುವ ಇವರ ಕಾದಂಬರಿಗಳು ಸಹೃದಯ ಓದುಗರ ಮನಸ್ಸನ್ನು ಸೂರೆಗೈಯುವಲ್ಲಿ ಯಶಸ್ವಿಯಾಗಿವೆ.

* * *